

# ಅಖಿಲ ಭಾರತ ಪತ್ರಿಕೆ

## ಅಕ್ಟೋಬರ್ 2025



# ಯುದ್ಧದ ಪಥದಲ್ಲಿ ... ಶಾಂತಿ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

"ಫೂತ್ಕಾರದೊಡನೆ ತಾನುಗಮಗೊಂಡು ಭುಸುಗುಡುತ ಬಂದ ಸರ್ಪ
ತಲೆವಾಗಿಲಲ್ಲಿ ಆಗಮನದಲ್ಲಿ ದುಮುದುಮಿಸಿ ಚಿರದ ದರ್ಪ"

**(ಶ್ರೀ ಅರವಿಂದರ 'ಸಾವಿತ್ರಿ')**

**ಅಖಿಲ ಭಾರತ ಪತ್ರಿಕೆ**

**ಅಕ್ಟೋಬರ್ 2025**

ಸಂಪುಟ: 35 ಸಂಚಿಕೆ: 10

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಪರಿವಿಡಿ

### ಯುದ್ಧದ ಪಥದಲ್ಲಿ ... ಶಾಂತಿ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಮಹಾಯುದ್ಧಗಳು** 4
ಅನು: ಶ್ರೀ ಪ್ರವೀಣಕುಮಾರ ಪಾಟೀಲ

**ಯುದ್ಧದ ಸರಿದುಹೋಗುವಿಕೆ** 9
**ಯುದ್ಧದ ಪರಿಣಾಮಗಳು** 16
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಕುರುಕ್ಷೇತ್ರ** 19
ಅನು: ಶ್ರೀ ಕಿಶೋರಕುಮಾರ ಕಾಸಾರ

**ಯುದ್ಧ ಮತ್ತು ಭಗವದ್ಗೀತೆ** 29
ಅನು: ಪುಟ್ಟು ಕುಲಕರ್ಣಿ

**ಯುದ್ಧ ಮತ್ತು ಶಾಂತಿ** 31
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 45
ಅನು: ಜಾನ್ವಿ

**ಶ್ರೀ ಅರವಿಂದರ 'ಊರ್ವಶಿ'** 53
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಯುದ್ಧದ ಗೀತೆಗಳು** 69
ಅನು: ಶ್ರೀ ಪುಟ್ಟು ಕುಲಕರ್ಣಿ

**ಚೇತನದ ಭಾಷಾ ಸಂರಚನೆ ಮತ್ತು ವಿಕಾಸದ ಹೆಜ್ಜೆ** 71
ಅನು: ಶ್ರೀ ಪುಟ್ಟು ಕುಲಕರ್ಣಿ

## ಸಂಪಾದಕರ ಟಿಪ್ಪಣಿ

ಯುದ್ಧ ಇಲ್ಲದೇ ಇರುವ ಯಾವುದೇ ಯುಗವೂ ಮಾನವ ಜನಾಂಗದ ಇತಿಹಾಸದಲ್ಲಿ ದಾಖಲಾಗಿರುವದಿಲ್ಲ. ಈ ರೀತಿಯ ಸಂಘರ್ಷಮಯ ಜೀವನದಲ್ಲಿಯೂ ಏಕತೆ ಮತ್ತು ಶಾಂತಿಗಾಗಿ ಅಭೀಪ್ಸೆಪಡುವದನ್ನು ಮಾತ್ರ ಮಾನವ ಸಮುದಾಯ ಎಂದಿಗೂ ಬಿಟ್ಟುಕೊಟ್ಟಿಲ್ಲ. ಅದೂ ಅಲ್ಲದೇ ಈ ರೀತಿಯ ಯುದ್ಧಗಳಾಗಲಿ ಮತ್ತು ಸಂಘರ್ಷಗಳ ಮಧ್ಯದಲ್ಲಿಯೇ ವಿಶ್ವಶಾಂತಿ ಮತ್ತು ಏಕತೆಯ ಪಥವನ್ನು ಪರಿಶುದ್ಧಗೊಳಿಸುತ್ತಾ ರೂಪಿಸಿಕೊಳ್ಳುವದು ಅವಶ್ಯಕವಾಗಿದೆ. [ಎಐಎಮ್]

## ಸಂಪಾದಕೀಯ

ಯುದ್ಧದ ಗುರಿ ಎಂದರೆ ಯುದ್ಧದಲ್ಲಿ ಮಡಿದವರೆಲ್ಲರ ಗೋರಿಗಳನ್ನು ನೆಲದ ಮೇಲೆಲ್ಲಾ ತುಂಬುತ್ತಾ ಸಾಗುವದು ಮತ್ತು ಬದುಕುಳಿದವರ ಜೀವನವನ್ನು ನರಕ ಸದೃಶಗೊಳಿಸುವದು ಎಂದೇ ಇಲ್ಲಿಯವರೆಗಿನ ಘಟನೆಗಳು ಸಾರಿ ಹೇಳುತ್ತಿವೆ. ನಿರ್ಮಿತಿಗೊಂಡ ಶಸ್ತ್ರಾಸ್ತ್ರಗಳ ನಿಖರತೆಗಾಗಿ ಯುದ್ಧವೇ ಮುಖ್ಯ ಮಾನಕ ಎನ್ನುವ ಹಂತಕ್ಕೆ ಚಿಂತನಗಳೂ ಬೆಳೆದಿವೆ. ಯುಗ ಧರ್ಮಕ್ಕೆ ತಕ್ಕಂತೆ ಯುದ್ಧ ನೀತಿಗಳೂ ಬದಲಾವಣೆಗೊಳ್ಳುತ್ತ ಬಂದಿವೆ. ಕೃತ–ತ್ರೇತಾ ಮತ್ತು ದ್ವಾಪರ ಯುಗಗಳಲ್ಲಿ ಸೂರ್ಯಾಸ್ತವಾದ ನಂತರ ಯುದ್ಧಕ್ಕೆ ವಿಶ್ರಾಂತಿಯನ್ನು ಕೊಡಲಾಗುತ್ತಿತ್ತು. ಆದರೆ ಇದೀಗ ಸೂರ್ಯಾಸ್ತದ ನಂತರದಲ್ಲಿಯೇ ಕ್ಷಿಪಣಿ ದಾಳಿಗಳು ಪ್ರಾರಂಭಗೊಳ್ಳುತ್ತಿವೆ. ಮುಖಾಮುಖೀ ಯುದ್ಧಕ್ಕಿಂತ ಆಧುನಿಕ ಗಗನಗಾಮೀ ಯಂತ್ರಗಳ ಮೂಲಕವೇ ಎದುರಾಳಿಗಳನ್ನು ಸದೆಬಡೆಯುವ ನೀತಿ ಮುಂಚೂಣಿಯಲ್ಲಿದೆ.

ಎರಡು ಮಹಾಯುದ್ಧಗಳಿಂದ ಮಾನವ ಕುಲ ಅನುಭವಿಸಿದ ನಷ್ಟ ಮತ್ತೆ ಮರುಕಳಿಸಬಾರದೆಂದು ಸೃಷ್ಟಿಯಾದ ವಿಶ್ವ ಸಂಸ್ಥೆಯೂ ಸಹಿತ ಯುದ್ಧಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ ಎನ್ನುವದು ವಿಚಿತ್ರ ಸತ್ಯವಾಗಿದೆ. ಯುದ್ಧದ ಮೂಲಕವೇ ಶಾಂತಿಯ ಪರಿಷ್ಕೃತ ಸ್ವರೂಪವನ್ನು ಅರಿತುಕೊಳ್ಳಲು ಸಾಧ್ಯ ಎನ್ನುವ ವಿತಂಡವಾದವೇ ಮುಂಚೂಣಿಗೂ ಬರುತ್ತಿದೆ. ಪ್ರಕೃತಿ ಸಹಜವಾಗಿರುವ ಭೌಗೋಳಿಕ ವೈವಿಧ್ಯತೆಯನ್ನು ಮುರಿದು ಮಾನವನು ಸಾಧಿಸಿದ್ದಾನೆ ಎನ್ನುವ ಭ್ರಮೆಯಲ್ಲಿ ಸೃಷ್ಟಿಗೊಂಡಿರುವ ವಿಜ್ಞಾನಾಧಾರಿತ ಚಿಂತನಗಳ ಮೂಲಕ ಜಗತ್ತಿನ ಬೇರೆ ಬೇರೆ ಭಾಗಗಳಲೆಲ್ಲ ತಮ್ಮದೇ ಮುಂಚೂಣಿ ಸ್ಥಾನ ನಿಗದಿಯಾಗಿರಲೇಬೇಕು ಎನ್ನುವ ಹುನ್ನಾರಿನ ಅತಿರೇಕಗಳೇ ಆಧುನಿಕ ಯುದ್ಧದ ಅಂತರ್ಧುರಿಯಾಗಿ

ಮುಂದುವರೆಯುತ್ತಿದೆ. ದೇವ–ದಾನವ ಯುದ್ಧ, ಒಳಿತು–ಕೆಡುಕುಗಳ ಮಧ್ಯೆ ಸಂಘರ್ಷ, ಮತಗಳ ಮಧ್ಯೆ ನಡೆಯುತ್ತಿರುವ ತುಮುಲಗಳಿಂದಾಗಿ, ಇಡೀ ಜಗತ್ತು ಶಾಂತಿಯ ಮೂಲ ಸ್ವರೂಪವನ್ನು ಅರಿತುಕೊಳ್ಳಲು ಇನ್ನೂ ಪ್ರಯತ್ನಿಸುತ್ತಿದೆ.

ಪ್ರತೀ ಮಹಾಯುದ್ಧದ ನಂತರದಲ್ಲಿ ಜೀವನ ಮೌಲ್ಯವು ರೂಪಾಂತರಣ–ಗೊಳ್ಳುತ್ತಿದೆ. ಹಾಗಾದರೆ ಮೌಲ್ಯಗಳ ರೂಪಾಂತರಕ್ಕೆ 'ಯುದ್ಧದ ಅವಶ್ಯಕತೆ' ಇದೆಯೇ? ಇದೇ ಯುದ್ಧದ ಪಥವಾಗಿದೆಯೇ? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಹಾಗಾದರೆ ಇದು ಪ್ರಕೃತಿಯ ಬಯಕೆಯೂ ಆಗಿದೆಯೇ? ಸೃಷ್ಟಿ–ಲಯಗಳ ಮಧ್ಯೆ, ಜನನ–ಮರಣಗಳ ಮಧ್ಯೆ ಇರುವ ಯುದ್ಧದ ಪಥದಲ್ಲಿಯೇ ಚಿಂತನಗಳೂ ರೂಪುಗೊಂಡಿವೆ;ರೂಪುಗೊಳ್ಳುತ್ತಿವೆ. ಆದರೆ ಈ ರೀತಿಯಲ್ಲಿ ವಿಚಲಿತಗೊಂಡ ಚಿಂತನಗಳು ಜೀವನದ ಮೇಲೆ ಉಗ್ರಾತಿ ಉಗ್ರವಾಗಿಯೇ ಅಪ್ಪಳಿಸುತ್ತವೆ. ಸೃಷ್ಟಿ ಮತ್ತು ಪ್ರಳಯಗಳೂ ಶಸ್ತ್ರಸನ್ನದ್ಧವಾಗಿಯೇ ರುದ್ರ ತಾಂಡವ ನಡೆಸುತ್ತಿವೆ. ಈ ಭೂಮಿಯೂ ಸಹಿತ ಈ ದಿಸೆಯಿಂದಾಗಿ ಸದಾ ಕಂಪನದಲ್ಲಿ ತತ್ತರಿಸುತ್ತಿದೆ. ಸರ್ವಸ್ವವೂ ಆ ರುದ್ರಕಾಳಿಯ ಮಹಾಘೂರ್ಣವದಲ್ಲಿ ಸಿಲುಕಿದೆ. ಈ ರೀತಿಯ ಸಂಚಲನವೇ ಹೊಸದೊಂದು ಪಥಕ್ಕೆ ಕಾರಣವಾಗುವ ಹಂತಕ್ಕೆ ಕಾತರಿಸುತ್ತಿದೆ.

ಈ ವಿಷಯವನ್ನೇ ಕುರಿತು ವರಕವಿ ದ.ರಾ.ಬೇಂದ್ರೆಯವರು 'ಯುದ್ಧದುದ್ಘೋಷ ಮೊಳಗಿಸಿದ ಕೃಷ್ಣ' ಎಂದು ಕವನವೊಂದರಲ್ಲಿ ಉಲ್ಲೇಖಿಸುತ್ತಾರೆ. ಯುದ್ಧದ ಹೆಸರಿನಲ್ಲಿ ಘಟಿಸುವ ವಿಸ್ಫೋಟಗಳಿಂದ ನಮ್ಮ ಕರ್ಣಪಟಲಗಳು ಹರಿದು, ಪೀಳಿಗೆ ಪೀಳಿಗೆಗಳು ಕಿವುಡರಾಗಿ, ಶಬ್ದ ಸಂಬಂಧ ಭಾವದನುಬಂಧಗಳು ಸಿಡಿದು ಚೂರಾಗಿ ಹೋಗಿರುವಾಗ ಪರಸ್ಪರರನ್ನೂ ಗರಬಡಿದವರ ಹಾಗೆ ದಿಟ್ಟಿಸುವ ಸ್ಥಿತಿಯ ದಾರುಣತೆಯನ್ನು ತಿಳಿಸುತ್ತ, ಅದು ನಮ್ಮ ಜೀವನದ ಸೂಕ್ಷ್ಮ ಪ್ರಾಣಗಳನ್ನು ನುಂಗಿ ನೊಣೆಯುವದನ್ನು ಮತ್ತು ನಮ್ಮ ಭವಿಷ್ಯ ಸದಾ ಅಶುಭ ಸೂಚಕದಲ್ಲಿಯೇ ಸಾಗುತ್ತಿರುವದನ್ನು ಕಂಡು ಕನಲುತ್ತಾರೆ. ಯುದ್ಧವೆನ್ನುವದು ಗಾಳಿಗಮನದಲಿ ಯಾವಾಗ ತೇಲಲಿಹುದೋ, ತುಟಿತುದಿಯ ಮೇಲೆ ಪಿಟಿಪಿಟಿಯ ಶಾಂತಿ ಮಂತ್ರ ನೆಲೆಸಲಿಹುದೋ ಎನ್ನುವ ಆಶಯವನ್ನೂ ಬಿತ್ತುತ್ತಾರೆ. ಇಷ್ಟೆಲ್ಲ ಅಶುಭದಾಯಕ ಘಟನೆಗಳು ತುಂಡು ತುಂಡಾಗಿ ಬಿದ್ದಂತೆ ಕಂಡರೂ ಇದು ಶುಭದಾಯಕ ಒಗ್ಗೂಡುವಿಕೆಯಲ್ಲಿ ಪರಿವರ್ತನಗೊಳ್ಳುತ್ತದೆ, ಚೂರು ಚೂರಾದ ಮನುಜತೆಯು ಮತ್ತೆ ಪರಿಷ್ಕೃತಗೊಂಡು ನವನವೀನ ಏಕತೆಯತ್ತ ಸಾಗುತ್ತದೆ ಎನ್ನುವದನ್ನು ಚಿತ್ರಿಸುತ್ತಾರೆ. ಇಂತಹ ಒಡಕುಗಳ ಮಧ್ಯದಲ್ಲಿಯೇ ಅಲ್ಲಲ್ಲಿ ಅಲ್ಲಲ್ಲಿ ಕೂಡುದಾರಿಗಳೂ ನಿರ್ಮಾಣಗೊಂಡಿರುತ್ತವೆ ಎನ್ನುವ ಭರವಸೆಯನ್ನೂ ಬಿತ್ತುತ್ತಾರೆ. ಇದೇ ಈ ಸಂಚಿಕೆಯ 'ಯುದ್ಧದ ಪಥದಲ್ಲಿ ...' ಆಂತರ್ಯಗೊಂಡಿದೆ. (ಪಿಪಿಕೆ)

# ಮಹಾಯುದ್ಧಗಳು

**– ಅನು: ಶ್ರೀ ಪ್ರವೀಣಕುಮಾರ ಪಾಟೀಲ, ಮಾನವಿ**

ನಾನು ರೈಲುಗಳನ್ನು ನೋಡಿದ್ದೇನೆ, ಪ್ರತಿಯೊಂದು ರೈಲೂ ಸಹಿತ ಐದು ನೂರು ಆರು ನೂರು ಜನ ಗಾಯಾಳುಗಳನ್ನು ಯುದ್ಧಕ್ಷೇತ್ರದಿಂದ ತುಂಬಿಕೊಂಡು ತರುತ್ತಿತ್ತು. ಅದೊಂದು ಮನಸ್ಸನ್ನು ವಿಚಲಿತಗೊಳಿಸುವ ನೋಟವಾಗಿತ್ತು. ಈ ಎಲ್ಲಾ ದುರಾದೃಷ್ಟ ಮನುಷ್ಯರು ದುಃಖದಲ್ಲಿ ಬಳಲುತ್ತಿದ್ದಾರೆ ಎಂದೇನಲ್ಲ, ಆದರೆ ಅವರು ತಮ್ಮ ದುಃಖವನ್ನು ಸಹನೆ ಮಾಡಿ ತಡೆದುಕೊಳ್ಳುತ್ತಿದ್ದಾರೆ. ಈ ಶ್ರೇಷ್ಠ ಭಾವದಿಂದಲೇ ಅವರು ಎಲ್ಲರಿಗಿಂತ ಮಿಗಿಲಾಗಿದ್ದಾರೆ. ಅವರ ಆತ್ಮ ಅವರ ಕಣ್ಣುಗಳ ಮೂಲಕ ಹೊಳೆಯುತ್ತಿದೆ. ಆಳವಾದ ಶಕ್ತಿಯೊಂದಿಗೆ ಇರುವ ಅವರ ಅತ್ಯಲ್ಪ ಸಂಪರ್ಕವೂ ಸಹ ಅದನ್ನು ಜಾಗೃತಿಗೊಳಿಸುತ್ತಿದೆ. ಮತ್ತು ಆ ತೀವ್ರತೆ, ನಿಜವಾದ ಪ್ರೀತಿಯ ಶಕ್ತಿಯ ಪರಿಪೂರ್ಣತೆಯಿಂದ, ಅವುಗಳ ಸಾನಿಧ್ಯದಲ್ಲಿ ಪರಿಪೂರ್ಣ ನಿಶ್ಚಲ ನೀರವತೆಯಯಲ್ಲಿ ವ್ಯಕ್ತವಾಗಬಹುದಾದ, ಅವರ ಸ್ವೀಕಾರ ಮನೋಭಾವದ ಮೌಲ್ಯವನ್ನು ಅರಿಯುವದು ಸುಲಭವಾಗಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/141 – ಶ್ರೀಮಾತೆ**

## ಯುದ್ಧಕ್ಷೇತ್ರ

ಸಂಪೂರ್ಣ ಮಾನಸಿಕ ಅಸ್ಥಿರವಾದ ಸ್ಥರವು ಇಡೀ ಪೃಥ್ವಿಯ ಮೇಲೆ ಇಳಿದಿರುವಂತೆ ತೋರುತ್ತಿದೆ; ಆದರೆ ಅದರ ಶಕ್ತಿ ಸಾಮರ್ಥ್ಯದ ರೂಪವು ಯುದ್ಧಕ್ಷೇತ್ರಲ್ಲಿ ಕೇಂದ್ರಿತವಾಗಿದೆ.

ಉಳಿದೆಲ್ಲಾ ಕಡೆಗೆ, ಯುದ್ಧಕ್ಷೇತ್ರದ ಹಿಂದೆ ಅಥವಾ ಯುದ್ಧದಲ್ಲಿ ತಟಸ್ಥವಾಗಿರುವ ದೇಶಗಳಲ್ಲಿ, ಈ ಸ್ಥರವು ತನ್ನನ್ನು ತಾನು ದೇಹಧಾರಿಯಾಗಿ, ಅಶಕ್ತತೆಯಿಂದ, ನರಗಳ ಒತ್ತಡದಲ್ಲಿ, ಉದ್ವೇಗಪೂರ್ಣವಾಗಿ, ಅಸಹನೆ, ಅಶಿಸ್ತಿನ ಕಲ್ಪನೆ, ಯಾವುದೆ ಕಾರ್ಯಕ್ಕಾಗಿ ತನ್ನ ಎಲ್ಲಾ ಶಕ್ತಿಯನ್ನು ಪೋಲು ಮಾಡುವ ರೂಪವನ್ನು ಪಡೆದುಕೊಂಡಿದೆ.

ಯಾರು ಜಗಳವಾಡಿ ಒಬ್ಬರೊಬ್ಬರನ್ನು ಕೊಲ್ಲುತ್ತಿದ್ದಾರೆಯೋ, ಅವರನ್ನು ಒಂದು ಅತ್ಯದ್ಭುತವಾದ ಶಕ್ತಿಯು ಸೆಳೆದೊಯ್ಯುತ್ತಿದೆ. – ಕೆಲವೊಮ್ಮೆ ಹುಚ್ಚು

ಹಿಡಿಸುವ ಮಟ್ಟಿಗೆ – ಆದರೆ ಯಾರು ಹೋರಾಡುತ್ತಿಲ್ಲವೋ ಅವರು ಈ ಶಕ್ತಿಯಿಂದ ವಿಮುಖರಾಗಿದ್ದಾರೆ. ಯಾರು ಈ ಯುದ್ಧಕ್ಷೇತ್ರದಲ್ಲಿ ಪ್ರವೇಶಿಸುವರೋ – ಏಕೆಂದರೆ, ಈ ಒಂದು ಕ್ರಿಯಾಶೀಲ ಪ್ರಭಾವ ಮತ್ತು ವಾತಾವರಣದ ದೃಷ್ಟಿಕೋನದಿಂದ ಅದು ಸ್ಪಷ್ಟವಾದ ನಿರ್ದಿಷ್ಟವಾದ ಕ್ಷೇತ್ರವಾಗಿದೆ – ಅವರೆಲ್ಲರೂ ಅದರಲ್ಲಿ ಸಿಲುಕಿಕೊಳ್ಳುವರು, ಇಲ್ಲವೆ ಕರೆದೊಯ್ಯಲ್ಪಡುವವರಾಗಿದ್ದಾರೆ. ಆ ಶಕ್ತಿಶಾಲಿ ಅಲೆಯಲ್ಲಿ ನಿರ್ವ್ಯೆಯಕ್ತಿಕರಾಗುವರು, ಕ್ರೋಧಿತ ಸಾಗರದಂತೆ ಪ್ರಚೋದಿಸಲ್ಪಡುವರು. ಅವರು ತಮ್ಮ ವೈಯಕ್ತಿಕತೆಯನ್ನು ಕಳೆದುಕೊಂಡಿರುತ್ತಾರೆ. ಪ್ರಕೃತಿ ಸದೃಶ ಮೂಲಭೂತ ವಸ್ತುಗಳಾಗಿರುವ ಗಾಳಿ, ಬಿರುಗಾಳಿ, ನೀರಿನ ಹಾಗೆ ಪೃಥ್ವಿಯ ಕಾರ್ಯಗಳನ್ನು ಮಾಡುತ್ತಾರೆ. ಅಪ್ರಜ್ಞಾಪೂರ್ವಕವಾಗಿ ವಿಶ್ವಾತ್ಮಕ 'ಸಂಕಲ್ಪ'ದಿಂದ ಚಲಿಸಲ್ಪಡುತ್ತಾರೆ. ಅವರು ಕೇವಲ ಮನುಷ್ಯ ಮಾತ್ರರಾಗಿರದೇ ಚಲಿಸುವ ಮತ್ತು ಸದಾ ಕ್ರಿಯಾತ್ಮಕವಾಗಿರುವ ಜನ ಸಂದಣಿಯಾಗಿರುತ್ತಾರೆ; ಮತ್ತು ಅನೇಕ ಸಂದರ್ಭಗಳಲ್ಲಿ ಅವರಲ್ಲಿ ಉಕ್ಕಿ ಬರುತ್ತಿರುವ ಧೈರ್ಯ, ವೈಯಕ್ತಿಕ ವೀರಾವೇಶದಂತಿರುತ್ತದೆ– ಅದು ಯಾಂತ್ರಿಕ ಮತ್ತು ಸಹಜ ಪ್ರವೃತ್ತಿಯಿಂದ ಬಂದ ಲಕ್ಷಣಗಳಾಗಿ ಈ ಸಾಮೂಹಿಕ ಪ್ರಜ್ಞೆಯಲ್ಲಿ ಅವರ ಜನಾಂಗದ ಶ್ರೇಷ್ಠ ಅಂಶಗಳು ಅಲ್ಲಲ್ಲಿ ಅಲ್ಲಲ್ಲಿ ಹೊರಸೂಸುತ್ತಿರುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/142–43**

## ಎರಡನೇ ಮಹಾಯುದ್ಧದ ಕುರಿತು

ಇದು ಶ್ರೀಮಾತೆಯವರ ಯುದ್ಧವೆಂದು ಅನುಮಾನವಿದೆ. ಮತ್ತು ಈ ಅನುಮಾನವನ್ನು ನಿವಾರಿಸಿ ಎಂದು ನನಗೆ ಕೇಳಿರುವಿರಿ. ಹೌದು ಇದು ಶ್ರೀಮಾತೆಯವರ ಯುದ್ಧವೆಂದು ನಾನು ನಿಮಗೆ ಮತ್ತೊಮ್ಮೆ ದೃಢಪಡಿಸುತ್ತೇನೆ. ನೀವು ಇದನ್ನು ದೇಶ–ದೇಶಗಳ ಮಧ್ಯದ ಯುದ್ಧವೆಂದು ಯೋಚಿಸಬಾರದು, ಅಥವಾ ಭಾರತಕ್ಕಾಗಿಯೂ ಅಲ್ಲ; ಈ ಹೋರಾಟ ಒಂದು ಆದರ್ಶಕ್ಕಾಗಿ ಅದನ್ನು ಈ ಪೃಥ್ವಿಯ ಮೇಲೆ ಇರುವ ಈ ಮಾನವ ಜನಾಂಗದಲ್ಲಿ ಸ್ಥಾಪಿಸಬೇಕಾಗಿದೆ. ಪ್ರಸ್ತುತ ಭವಿಷ್ಯದಲ್ಲಿ ಪೃಥ್ವಿ ಮತ್ತು ಮಾನವ ಜನಾಂಗವನ್ನು ಸದೆಬಡಿಯಲು ಪ್ರಯತ್ನಿಸುತ್ತಿರುವ ಕತ್ತಲೆ ಮತ್ತು ಅಸತ್ಯದ ವಿರುದ್ಧ ಹಾಗು ಒಂದು 'ಸತ್ಯ' ತನ್ನನ್ನು ತಾನು ಸಂಪೂರ್ಣವಾಗಿ ಸಾಕ್ಷಾತ್ಕರಿಸಿಕೊಳ್ಳಬೇಕಾಗಿದೆ. ಯುದ್ಧದ ಹಿಂದಿರುವ ಶಕ್ತಿಗಳನ್ನು ಕಾಣಬೇಕಾಗಿದೆ. ತದನಂತರದಲ್ಲಿ ಅಥವಾ ಆಮೇಲೆ ಎನ್ನುವ

ಸಂದರ್ಭಗಳಲ್ಲಿ, ರಾಷ್ಟ್ರಗಳ ನ್ಯೂನತೆ ಅಥವಾ ತಪ್ಪುಗಳ ಬಗೆಗೆ ಲಕ್ಷ್ಯಕೊಡುವದರಿಂದ ಏನೂ ಉಪಯೋಗವಾಗುವದಿಲ್ಲ; ಆದರೆ ಈ ಹೋರಾಟದಲ್ಲಿ ಅವು ಯಾವ ಪಕ್ಷವನ್ನು ಹಿಡಿದಿವೆ ಎನ್ನುವದು ಬಹಳ ಮುಖ್ಯವಾಗಿದೆ. ಈ ಹೋರಾಟವು, ಮಾನವನು ಬೆಳೆಯಲು ಬೇಕಾದ ಸ್ವಾತಂತ್ರ್ಯಕ್ಕಾಗಿ ಮತ್ತು ವಿಚಾರ ಮಾಡಲು ಸ್ಥಳವಿದೆಯೋ, ತನ್ನಲ್ಲಿರುವ ಬೆಳಕಿನ ಪ್ರಕಾರ ಕ್ರಿಯೆ ಮಾಡಲು ಮತ್ತು ಸತ್ಯದಲ್ಲಿ ಜೊತೆಗೆ ಆತ್ಮದಲ್ಲಿ ಬೆಳೆಯುವದಕ್ಕಾಗೀ ಈ ಹೋರಾಟವು ನಡೆಯುತ್ತಿದೆ. ಈ ಯುದ್ಧದಲ್ಲಿ ಒಂದು ಕಡೆಯವರು ಗೆದ್ದರೆ, ಅಲ್ಲಿ ಎಳ್ಳಷ್ಟೂ ಅನುಮಾನ ಉಳಿಯುವದಿಲ್ಲ. ಅಲ್ಲಿ ಅಂತಹ ಎಲ್ಲಾ ಸ್ವಾತಂತ್ರ್ಯವೂ ಮತ್ತು ಸತ್ಯ ಹಾಗು ಬೆಳಕಿನ ಭರವಸೆಗಳು ಕೊನೆಗೊಳ್ಳುತ್ತವೆ. ಯಾವ ಕಾರ್ಯವನ್ನು ಮಾಡಬೇಕಾಗಿದೆಯೋ ಅದು ಮಾನವ ಜನಾಂಗಕ್ಕೆ ಅಸಾಧ್ಯವಾಗಿ ತೋರುತ್ತದೆ; ಅಲ್ಲಿ ಅಸತ್ಯ ಮತ್ತು ಕತ್ತಲೆಯ ಸಾಮ್ರಾಜ್ಯವಿರುತ್ತದೆ. ಮಾನವ ಜನಾಂಗವನ್ನು ಕ್ರೂರತೆ ತುಂಬಿದ ದಬ್ಬಾಳಿಕೆ ಮತ್ತು ಆ ಮೂಲಕ ಅವನತಿಯ ಕಡೆಗೆ ಕರೆದೊಯ್ಯುತ್ತದೆ. ಅಂತಹ ಪರಿಸ್ಥಿತಿಯನ್ನು ಈ ದೇಶದ ಜನರು ಕನಸಿನಲ್ಲಿಯೂ ಕಂಡಿರುವದಿಲ್ಲ. ಅದೇನೆಂಬುದು ಸಹ ಅವರಿಗೆ ತಿಳಿದಿಲ್ಲ. ಆದರೆ ಯುದ್ಧದಲ್ಲಿ ಇನ್ನೊಂದು ಕಡೆಯವರು, ಮಾನವನ ಸ್ವಾತಂತ್ರ್ಯದ ಭವಿಷ್ಯದ ಪರವಾಗಿ ಇರುವವರು ಗೆದ್ದರೆ, ಈ ಭಯಾನಕ ಅಪಾಯವನ್ನು ತಪ್ಪಿಸಬಹುದಾಗಿದೆ. ಈ ಹೊಸ ಪರಿಸರದಲ್ಲಿ ಈ 'ಆದರ್ಶವು' ಬೆಳೆಯಲಿ, ದೈವೀ ಕಾರ್ಯ ಮಾಡಲು, ನಾವು ಭೂಮಿಯ ಮೇಲೆ ಆಧ್ಯಾತ್ಮಿಕ ಸತ್ಯವನ್ನು ಸ್ಥಾಪಿಸಲು ಸಾಧ್ಯವಾಗುತ್ತಿದೆ. ಈ ಉದ್ದೇಶಕ್ಕಾಗಿ ಹೋರಾಡುತ್ತಿರುವವರೆಲ್ಲರೂ ದೈವದ ಪರವಾಗಿ ಮತ್ತು ಅಸುರ ಸಾಮ್ರಾಜ್ಯದ ಬೆದರಿಕೆಯ ವಿರುದ್ಧವಾಗಿ ಹೋರಾಡುತ್ತಿದ್ದಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/211–12**

## ದೈವಿಕ ಮತ್ತು ಅಸುರೀ ಶಕ್ತಿಗಳು

ಶ್ರೀಮಾತೆಯವರ ಪತ್ರದಲ್ಲಿ ಪ್ರಕಟಿಸಲಾದಂತೆ, ಶ್ರೀಮಾತೆಯವರು ಸ್ಪಷ್ಟವಾಗಿಯೇ ತಿಳಿಸಿರುವಂತೆ, ನಾವು ಈ ಯುದ್ಧವನ್ನು ತಮ್ಮನ್ನು ತಾವು ಯಾವ ಪಕ್ಷದಲ್ಲಿರಿಸಿಕೊಳ್ಳುತ್ತಾರೆನ್ನುವದನ್ನು ನೋಡಬೇಕಾಗಿದೆ ಎನ್ನುವದನ್ನು ತಿಳಿಸುತ್ತಾರೆ. ಆದರೆ ತಮ್ಮನ್ನು ಬಲ ಬದಿಗೆ ಇರಿಸಿಕೊಂಡರೆ ಆಗ ಅವರು ದೈವೀ ಉದ್ದೇಶದ ಉಪಕರಣಗಳಾಗಿರುತ್ತಾರೆ. ಈ ರೀತಿ ಉಪಕರಣಗಳಾದಾಗಲೂ ಅವರಲ್ಲಿ ಎಲ್ಲಾ

ನ್ಯೂನ್ಯತೆಗಳು, ತಪ್ಪುಗಳು, ತಪ್ಪು ಚಲನೆಗಳು ಮತ್ತು ಕ್ರಿಯೆಗಳಲ್ಲಿ (ಭೂತ, ವರ್ತಮಾನ ಮತ್ತು ಭವಿಷ್ಯದಲ್ಲಿ ಜರುಗಲಿರುವ ನ್ಯೂನತೆಗಳನ್ನೂ ಸೇರಿ) ಸಾಮಾನ್ಯ ಮಾನವ ಪ್ರಕೃತಿ ಮತ್ತು ಮಾನವ ಗುಂಪುಗಳಲ್ಲಿ ಇವು ಇದ್ದೇ ಇರುತ್ತವೆ. ಒಂದು ಪಕ್ಷಕ್ಕೆ ವಿಜಯವಾದರೆ ಮಾತ್ರ, ಮಾನವ ಜನಾಂಗವನ್ನು ಅದು ಹಿಂದೆ ತಳ್ಳಬಹುದು, ಮಾನವ ಜನಾಂಗವನ್ನು ಭಯಾನಕವಾದ ರೀತಿಯಲ್ಲಿ ಅಧಃಪತನಗೊಳಿಸಬಹುದು, ಅತೀ ಕೆಟ್ಟದಾದಾಗ, ಯಾವ ರೀತಿಯಲ್ಲಿ ಬೇರೆಯವರು ವಿಕಾಸದಲ್ಲಿ ಸೋತು ನಾಶವಾದ ಹಾಗೆ, ಜನಾಂಗವೇ ಸೋಲಬಹುದು. ಇದೇ ಮುಖ್ಯ ಪ್ರಶ್ನೆಯಾಗಿದ್ದು ಉಳಿದೆಲ್ಲ ಅಂಶಗಳೂ ಅಸಂಬದ್ಧ ಅಥವಾ ಕಡಿಮೆ ಪ್ರಾಮುಖ್ಯದಿಂದ ಕೂಡಿವೆ. ಮಿತ್ರ ರಾಷ್ಟ್ರಗಳು ಮನುಷ್ಯನ ಮೌಲ್ಯಗಳನ್ನು ಪ್ರತಿನಿಧಿಸುತ್ತಿವೆ. ಆದಾಗ್ಯೂ ಕೆಲವೊಮ್ಮೆ ತಮ್ಮದೇ ಆದರ್ಶಗಳ ವಿರುದ್ಧ ನಡೆದುಕೊಂಡಿರಬಹುದು (ಮಾನವರು ಯಾವಾಗಲೂ ಹಾಗೆ ಮಾಡುತ್ತಿರುತ್ತಾರೆ); ಹಿಟ್ಲರನು ಪೈಶಾಚಿಕ ಮೌಲ್ಯಗಳನ್ನು ಪ್ರತಿನಿಧಿಸುತ್ತಾನೆ ಅಥವಾ ಮೌಲ್ಯಗಳನ್ನು ತಪ್ಪು ರೀತಿಯಲ್ಲಿ ಉತ್ಪ್ರೇಕ್ಷೆಗೊಳಿಸಿದಾಗ ಅವುಗಳು ಪೈಶಾಚಿಕವಾಗುತ್ತವೆ (ಉದಾ: ಹೆರಾನ್ ವೋಲ್ಟನ್ 'ಮೌಲ್ಯಗಳು', ಶ್ರೇಷ್ಠ ಜನಾಂಗವಾದ). ಆದರೆ ಅಷ್ಟು ಮಾತ್ರಕ್ಕೆ ಇಂಗ್ಲಂಡ ಅಥವಾ ಅಮೇರಿಕದ ದೇಶಗಳು ಯಾವುದೇ ನ್ಯೂನತೆಗಳಿಲ್ಲದ ದೇವದೂತರಾಗಿರುವದಿಲ್ಲ. ಅಥವಾ ಜರ್ಮನರು ದುಷ್ಟ ಮತ್ತು ಪಾಪಿ ಜನಾಂಗವಾಗಿರುವದಿಲ್ಲ. ಆದರೆ ಇಲ್ಲಿ ಮಹತ್ವವಾಗಿರುವ ವಿಷಯವೆಂದರೆ ಆ ಲಕ್ಷಣಗಳು ಎನ್ನುವದು ಮುಖ್ಯವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/215–16**

**ದೈವತ್ವದ ಮಾರ್ಗಗಳು**

ದೋಷರಹಿತ ಚಾರಿತ್ರ್ಯ, ಯಾವುದೇ ಕಳಂಕ ಅಥವಾ ನ್ಯೂನತೆ ಇಲ್ಲದ ಸದ್ಗುಣ ಸಂಪನ್ನರಾಗಿ ಅಥವಾ ದೇವದೂತರಾಗಿ ಪವಿತ್ರ ಮತ್ತು ಪರಿಶುದ್ಧವಾಗಿರುವಂತೆ – ಒಂದು ವೇಳೆ ಈ ರೀತಿಯಾಗಿ ಇರದೇ ಇದ್ದರೂ ಸಹಿತ ದೈವತ್ವವು ಮಾತ್ರ, ಮಾನವನು ಯಾವ ಸ್ಥಿತಿಯಲ್ಲಿ ಇರುತ್ತಾರೆಯೋ ಅದೇ ಸ್ಥಿತಿಯಲ್ಲಿಯೇ ಅವರನ್ನು ಸ್ವೀಕರಿಸಿ, ಅವರೆಲ್ಲರನ್ನೂ ತನ್ನ ಉಪಕರಣವಾಗಿಸಿಕೊಳ್ಳುತ್ತದೆ. ಒಂದು ವೇಳೆ ಸದ್ಭಾವದಿಂದ ಕೂಡಿದ್ದರೆ, ಒಂದು ವೇಳೆ ಬೈಬಲ್ ವಾಕ್ಯದ ಪ್ರಕಾರ – ಅವರು 'ಪ್ರಭು'ವಿನ ಪರವಾಗಿದ್ದರೆ, ಕಾರ್ಯ ಮಾಡಲು ಇಷ್ಟು ಸಾಕು. ಮಿತ್ರ ರಾಷ್ಟ್ರಗಳು ಹೀಗಿವೆ ಎಂದು ತಿಳಿದಿದ್ದರೂ ಸಹಿತ (ನಾನೀಗ 'ದೊಡ್ಡ' ರಾಷ್ಟ್ರಗಳ ಬಗೆಗೆ

ಮಾತನಾಡುತ್ತಿದ್ದೇನೆ, ಅಮೇರಿಕಾ, ಬ್ರಿಟನ್, ಚೀನಾ) ಅವು ಈ ಜಯವನ್ನು ದುರುಪಯೋಗಪಡಿಸಿಕೊಂಡರೂ ಅಥವಾ ಶಾಂತಿಯನ್ನು ಹಾಳು ಮಾಡಿದರೂ ಅಥವಾ ಆ ಜಯದಿಂದ ಮಾನವ ಜಗತ್ತಿಗೆ ಸಿಗಬಹುದಾದ ಅವಕಾಶಗಳನ್ನು ಭಾಗಶಃ ಕೆಡಿಸಿದರೂ ಸಹಿತ, ನನ್ನ ಶಕ್ತಿಯು ಅದರ ಹಿಂದಿರುತ್ತದೆ. ಯಾವ ಸಂದರ್ಭದಲ್ಲಿಯೂ ಹಿಟ್ಲರನ ಆಡಳಿತದಲ್ಲಿ ಆಗುವ ಕೆಟ್ಟ ಪರಿಸ್ಥಿತಿಗಳ ನೂರರಲ್ಲೊಂದು ಅಂಶದಷ್ಟೂ ಇಲ್ಲಿ ಆಗಲು ಸಾಧ್ಯವಿಲ್ಲ. ಪ್ರಭುವಿನ ಮಾರ್ಗಗಳು ಇನ್ನೂ ತೆರೆದಿಟ್ಟುಕೊಂಡಿರುತ್ತವೆ. ಅವುಗಳು ಸದಾ ಕಾಲವೂ ತೆರೆದಿಟ್ಟುಕೊಂಡಿರುವಂತೆ ಮಾಡುವದೇ ಇಂದಿನ ಮುಖ್ಯ ವಿಷಯವಾಗಿದೆ. ಇಲ್ಲಿ ನಿಜವಾದ ಸಮಸ್ಯೆಯೇ ಮಹತ್ವದ್ದಾಗಿದೆ. ಉಳಿದೆಲ್ಲಾ ಗೌಣ ಸಮಸ್ಯೆಗಳನ್ನು ನಂತರದ ಸಮಯಕ್ಕೆ ಬಿಟ್ಟು ಬಿಡೋಣ. ಸದ್ಯ ಈಗ ಮುಖ್ಯವಾಗಿರುವ ಮತ್ತು ಸದಾ ನಮ್ಮ ಮುಂದೆಯೇ ಇರುವ ಈ ದುರಂತಮಯ ಸಮಸ್ಯೆಯು ಆ ಗೌಣ ಮತ್ತು ಕಾಲ್ಪನಿಕ ಸಮಸ್ಯೆಗಳನ್ನು ಮರೆಮಾಡುವ ಸಾಧ್ಯತೆಯಲ್ಲಿರುತ್ತದೆ.

## ಮೌಲ್ಯಗಳ ಯುದ್ಧ

ನಮ್ಮ ಸಾಧನವು ಕೇವಲ ಭಕ್ತಿ ಅಥವಾ ದೈವದೊಂದಿಗೆ ಐಕ್ಯತೆಯನ್ನು ಅಥವಾ ಎಲ್ಲಾ ವಸ್ತು ಮತ್ತು ಜೀವಿಗಳಲ್ಲಿ ಅವನನ್ನು ಕಾಣುವದನ್ನು ಮಾತ್ರ ಒಳಗೊಂಡಿಲ್ಲ. ಆದರೆ ಇದರ ಜೊತೆಗೆ ಕಾರ್ಯವನ್ನು ಕೆಲಸಗಾರರಾಗಿ ಮತ್ತು ಉಪಕರಣಗಳಾಗಿ ಮಾಡುವದು ಹಾಗೂ ಈ ಜಗತ್ತಿನಲ್ಲಿ ಕಾರ್ಯವನ್ನು ಮಾಡಲೇಬೇಕಾಗಿದೆ. ಒಂದು ಆಧ್ಯಾತ್ಮಿಕ ಶಕ್ತಿಯನ್ನು ಈ ಜಗತಿನಲ್ಲಿ ಅವತರಣಗೊಳಿಸಿ ತರಬೇಕಾಗಿದೆ, ಆದರೆ ಅದು ಬಹಳಷ್ಟು ಕಷ್ಟಕರ ಪರಿಸ್ಥಿತಿಯಲ್ಲಿ ಎನ್ನುವದೂ ಮುಖ್ಯ ಸಂಗತಿಯಾಗಿದೆ; ಆಗ ನಮ್ಮ ಮಾರ್ಗ ಯಾವುದು ಎನ್ನುವದನ್ನು ನೋಡಬೇಕು ಮತ್ತು ಆದೇಶದ ಪ್ರಕಾರ ಕಾರ್ಯ ಗೈದು, ಯಾವುದನ್ನು ಪ್ರೋತ್ಸಾಹಿಸಬೇಕೋ ಅದನ್ನು ಮಾತ್ರವೇ ತಪ್ಪದೇ ಪ್ರೋತ್ಸಾಹಿಸಲೇಬೇಕಾಗುತ್ತದೆ. ಅದು ಒಂದು ಯುದ್ಧ ಮತ್ತು ಹೋರಾಟವಾಗಿರಬಹುದು, ಅದನ್ನು ರಥ ಅಥವಾ ಬಿಲ್ಲು ಬಾಣಗಳಿಂದಾಗಲಿ ಅಥವಾ ಯುದ್ಧವಾಹನ, ಕಾರುಗಳು ಮತ್ತು ಅಮೇರಿಕಾದ ಬಾಂಬುಗಳು ಮತ್ತು ವಿಮಾನಗಳಿಂದಾಗಲೀ ಆಗಿರಬಹುದು. ಅದು ಯಾವುದೇ ರೀತಿಯಲ್ಲಾಗಿರಲಿ ಇದೊಂದು ಘೋರಕರ್ಮವಾಗಿದೆ; ಮಾಧ್ಯಮಗಳು, ಕಾಲ ಮತ್ತು ವ್ಯಕ್ತಿಗಳು ಬೇರೆ ಬೇರೆಯಾಗಬಹುದು. ಆದರೆ ನಳಿನಿಯು ನೋಡುವ

ದೃಷ್ಟಿಕೋನವು ತಪ್ಪೇನಲ್ಲ, ಇದು ಕುರುಕ್ಷೇತ್ರದ ಸಮಸ್ಯೆಯೇ ಆಗಿದೆ. ಯುದ್ಧ, ಹಿಂಸೆ, ಶಕ್ತಿಯ ದುರ್ಬಳಕೆಯನ್ನು ತಡೆದು, ಆ ಶಕ್ತಿಯ ಬಳಕೆಯನ್ನು ಸದುದ್ದೇಶದಿಂದ ಜಗತ್ತಿನ ಸ್ವಾತಂತ್ರ್ಯವನ್ನು ಕಾಪಾಡಲು, ಮಾನವನ ನಾಗರಿಕತೆಯನ್ನು ರಕ್ಷಿಸಲು ಇರುವ ಪ್ರಾಚೀನ ಆದೇಶವು ಮತ್ತೊಮ್ಮೆ ಬಹುಕಾಲದ ನಂತರದಲ್ಲಿ ಈ ನ್ಯಾಯಯುತ ಯುದ್ಧದ ಹೋರಾಟ ಮತ್ತು ಪ್ರೋತ್ಸಾಹ ಮಾಡುವವರಿಗಾಗಿ ಕೂಗಿ ಕೂಗಿ ಹೇಳಲ್ಪಟ್ಟಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/218–19**

# ಯುದ್ಧದ ಪಥದಲ್ಲಿ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

## ಸಂವಹನ ಮತ್ತು ಯುದ್ಧ

ಈ ಅತ್ಯುನ್ನತ ನಂಬಿಕೆಗೆ ಪ್ರಾಸಂಗಿಕವಾದ ಕಲ್ಪನೆಗಳಲ್ಲಿ ಒಂದಾಗಿದೆ ಯುದ್ಧವು ಸರಿದುಹೋಗುವದು ಎಂಬ ನಿರೀಕ್ಷೆ. ಬಹಳ ಭರವಸೆಯೊಂದಿಗೆ ಈ ಶ್ರೇಷ್ಠತಮ ಘಟನೆಯನ್ನು ಮಾನವ ಪ್ರಗತಿಯಲ್ಲಿ ಎದುರು ನೋಡಲಾಗುತ್ತಿದೆ. ಈಗ ನಾವೆಲ್ಲರೂ ವೈಜ್ಞಾನಿಕ ಮನಸ್ಸುಗಳನ್ನು ಹೊಂದಿದ್ದು ತಾರ್ಕಿಕ ಸತ್ತೆಗಳಾಗಿರುವದರಿಂದ ಇದು ದೈವೀ ಮಧ್ಯಸ್ಥಿಕೆಯಿಂದ ಸಂಭವಿಸುವದೆಂದು ನಿರೀಕ್ಷಿಸುವದಿಲ್ಲ. ಆದರೆ ನಮ್ಮ ಅತ್ಯುತ್ತಮ ಭೌತಿಕ ಮತ್ತು ಆರ್ಥಿಕ ಕಾರಣಗಳಿಗೆ ನಮ್ಮಲ್ಲಿನ ನಂಬಿಕೆಯನ್ನು ಅನ್ವಯಿಸುವೆವು. ಈ ಹೊಸ ಶ್ರೇಷ್ಠ ಹೇಳಿಕೆಯ ಮೊದಲ ರೂಪವೇನೆಂದರೆ ವಾಣಿಜ್ಯೋದ್ಯಮದ ಮುಂದುವರಿಕೆಯ ಪ್ರವಾದೀಯ ನುಡಿಗಳು ಮತ್ತು ನಿರೀಕ್ಷೆ. ಯುದ್ಧೀಯ ಮನೋಭಾವದ ಸಹಜ ವೈರಿಯಾಗಿದೆ ವ್ಯಾಪಾರಿ ಮನೋಭಾವ ಮತ್ತು ಭೂಮಿಯ ಮೇಲಿನಿಂದ ಯುದ್ಧವನ್ನು ಅದು ಓಡಿಸಲೂ ಬಹುದು. ಎಲ್ಲೆಡೆ ಬಂಗಾರದ ಕಡೆಗಿನ ವಿಶ್ವವ್ಯಾಪಿ ಅಪೇಕ್ಷೆ ಹೆಚ್ಚಾಗುತ್ತಿದೆ ಮತ್ತು ಸೌಖ್ಯದ ಅಭ್ಯಾಸಗಳು ಸಹ ಅಧಿಕಗೊಳ್ಳುತ್ತಿವೆ. ಉತ್ಪಾದನೆಯು ಹೆಚ್ಚಾಗಬೇಕಾದ ಅವಶ್ಯಕತೆಯು ಕಾಣಿಸುತ್ತಿದೆ. ಜೊತೆಗೆ ಸೂಕ್ಷ್ಮವಾದ ಪರಸ್ಪರ ಹಂಚಿಕೊಳ್ಳುವಿಕೆಯೊಳಗಿನ ಶಕ್ತಿಯ ಲಾಲನೆ, ಒಡೆತನ, ಹಿರಿಮೆ ಮತ್ತು ಕಾಳಗದ ಅಪೇಕ್ಷೆಗಳನ್ನು ತುಳಿದುಹಾಕಿ ಬಿಡಬಹುದು. ಬಂಗಾರದ – ಹಸಿವು ಅಥವಾ ವಸ್ತುಗಳ ಹಸಿವು ಭೂಮಿಯ ಹಸಿವನ್ನು ದೂರ ತಳ್ಳಬಹುದು. ಕ್ಷತ್ರಿಯ ಧರ್ಮದ ಮೇಲೆ ವೈಶ್ಯ ಧರ್ಮವು ತನ್ನ

ಪಾದವನ್ನು ಇರಿಸಿ ಅದಕ್ಕೆ ನೋವಿಲ್ಲದ ಅಂತಿಮ ವಿಮೋಚನೆಯನ್ನು ನೀಡಬಹುದು. ದೇವತೆಗಳ ಹಾಸ್ಯಾಸ್ಪದ ಉತ್ತರವನ್ನು ಸಹ ನಾವು ಶೀಘ್ರವಾಗಿಯೇ ಪಡೆಯುತ್ತಿದ್ದೇವೆ. ನಿಜಕ್ಕೂ ಈ ವ್ಯಾಪಾರಿ ಮನೋಭಾವದ ಆಡಳಿತ, ಉತ್ಪಾದನೆಯಲ್ಲಿನ ಈ ವೃದ್ಧಿ ಮತ್ತು ಪರಸ್ಪರ ಹಂಚಿಕೊಳ್ಳುವಿಕೆ, ವಸ್ತುಗಳತ್ತಲಿನ ಮತ್ತು ಮಾರುಕಟ್ಟೆಗಳ ಕಡೆಯ ಮಮತೆ, ಬೇಕಿಲ್ಲದ ಸಾಮಾನುಗಳ ಗುಡ್ಡೆಗಳೇ ಮಾನವ ಜನಾಂಗವನ್ನು ತೊಂದರೆಗೆ ಈಡುಮಾಡಿದ ಯುದ್ಧಗಳಿಗೆ, ಬಹುಪಾಲು ಕಾರಣ. ಮತ್ತು ಈಗ ನಾವು ಪರಸ್ಪರ ಜೊತೆಗೂಡಿ ಒಂದನ್ನೊಂದು ಅಪ್ಪಿಕೊಂಡಿರುವ ಮಿಲಿಟರಿ ಮತ್ತು ವ್ಯಾಪಾರಿ ಮನೋಭಾವವನ್ನು ಕಾಣುತ್ತಿರುವೆವು. ಇವೆರಡು ದೇಶ ಪ್ರೇಮ ಮತ್ತು ರಾಷ್ಟ್ರ ಜೀವನದ ಪವಿತ್ರ ದ್ವಿಮುಖವಾಗಿ ಮಿಳಿತಹೊಂದಿವೆ: ಇದರ ಪರಿಣಾಮವಾಗಿ ಚರಿತ್ರೆಯಲ್ಲಿ ಹಿಂದೆಂದೂ ಕಾಣದ ಅತ್ಯಂತ ಅಘಾತಕರವಾದ ದೈತ್ಯ ಮತ್ತು ಸಂಪೂರ್ಣವಾಗಿ ತರ್ಕರಹಿತ ಯುದ್ಧದಕಡೆ ಇವು ತಮ್ಮ ಶಕ್ತಿಯ ಮೂಲಕ ನಮ್ಮನ್ನು ಕರೆದುಕೊಂಡು ಹೋಗುತ್ತಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/607**

**ಪ್ರಜಾ ಪ್ರಭುತ್ವ ಮತ್ತು ಯುದ್ಧ**

ಪ್ರಜಾ ಪ್ರಭುತ್ವದ ವೃದ್ಧಿಯಿಂದ ಶಾಂತಿ ವಾದವು ಹೆಚ್ಚಾಗಿ ಯುದ್ಧವು ನಿಂತುಹೋಗುವದೆನ್ನುವದು ಇನ್ನೊಂದು ಕಲ್ಪನೆ. ರಾಜ ವಂಶೀಯ ಮತ್ತು ವೈಭವದ ಸ್ವಭಾವವನ್ನು ಯುದ್ಧಗಳು ಹೊಂದಿವೆಯೆಂಬುದು ಹಲವಾರು ಜನರ ಅಭಿಪ್ರಾಯ. ಭೂಮಿಯ ಮೇಲಿನ ಆಸೆ ಮತ್ತು ಯುದ್ಧೋತ್ಸಾಹಗಳಿಂದ ತುಂಬಿದ್ದರು ದುರಾಸೆಭರಿತ ರಾಜರು ಮತ್ತು ಕದನಪ್ರಿಯ ಸಿರಿವಂತರು. ಜೊತೆಗೆ ರಾಷ್ಟ್ರಗಳ ಅದೃಷ್ಟಗಳು ಮತ್ತು ಜನರ ಜೀವನದೊಂದಿಗೆ ಚದುರಂಗದ ಆಟವನ್ನು ಆಡುತ್ತಿದ್ದರು ರಾಯಭಾರಿಗಳು. ಇವುಗಳ ಪರಿಣಾಮವಾಗಿ ದುರದೃಷ್ಟಭರಿತ ಜನರು ಯುದ್ಧರಂಗಕ್ಕೆ ಕಸಾಯಿಖಾನೆಗೆ ಹೋಗುತ್ತಿರುವ ಕುರಿಗಳ ರೀತಿಯಲ್ಲಿ ನುಗ್ಗುತ್ತಿದ್ದರು. ಈ ಅತ್ಯಂತ ಕೆಳ ಪ್ರಜಾ ವರ್ಗವು, ಅಗಿಯುತ್ತಿರುವ ಆಹಾರದ ರೀತಿಯಲ್ಲಿ, ಯುದ್ಧ ಮಾಡುವ ಯಾವ ಆಸಕ್ತಿಯನ್ನಾಗಲೀ, ಅಪೇಕ್ಷೆಯನ್ನಾಗಲೀ ಹೊಂದಿರಲಿಲ್ಲ. ಅವರಿಗೆ ಶಿಕ್ಷಣ ನೀಡಿ, ಅವರ ಯಜಮಾನಿಕೆ ವಹಿಸಿಕೊಂಡು ಅವರು ಒಬ್ಬರೊಬ್ಬನೊಬ್ಬರು ಪ್ರೀತಿಸುವಂತೆ ಮಾಡಿ ಸಹೋದರರಂತೆ ಬದುಕಲು ಅನುವು ಮಾಡಿಕೊಡಬೇಕಾಗಿತ್ತು ಅಷ್ಟೇ. ಮೇಧಾವಿಗಳು ಚರಿತ್ರೆಯ ಪಾಠವನ್ನು ಬೋಧಿಸುವರು. ಆದರೆ ಮಾನವನು ಅದನ್ನು

ಸ್ವೀಕರಿಸಲು ಒಪ್ಪದೆ ತಿರಸ್ಕರಿಸುವನು. ಆತನು ಪಾಠ ಕಲಿತಿದ್ದರೆ ಹಳೆಯ ಪ್ರಜಾ ಪ್ರಭುತ್ವಗಳ ಕಥೆಯೇ ಸಾಕಾಗಿತ್ತು ಈ ನಿರ್ದಿಷ್ಟ ಕಲ್ಪನೆಯನ್ನು ತಡೆಗಟ್ಟಲು. ಏನೇ ಆದರೂ, ಇಲ್ಲಿಯೂ ಸಹ ದೇವತೆಗಳ ಉತ್ತರವು ಸಾಕಷ್ಟು ಹಾಸ್ಯಾಸ್ಪದವಾಗಿದೆ. ಯುದ್ಧವನ್ನು ಮುನ್ನಡೆಸುತ್ತಿರುವವರು ಈಗಲೂ ರಾಜರು ಮತ್ತು ರಾಯಭಾರಿಗಳೇ ಆಗಿದ್ದಲ್ಲಿ, ಯುದ್ಧಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿರುವದು ಮತ್ತು ಅದರ ಅತಿ ಹೆಚ್ಚು ಗಲಾಟೆ ಮಾಡುತ್ತಿರುವ ಜೊತೆಗಾತಿ ಆಧುನಿಕ ಪ್ರಜಾ ಪ್ರಭುತ್ವ. ನಾವು ಈಗ ಸರಕಾರಗಳು ಮತ್ತು ರಾಯಭಾರಿಗಳು ಹೆದರಿಕೆ ಮತ್ತು ಸಂಶಯದಿಂದೊಡಗೂಡಿ ಆಳವಾದ ಕಂದಕಗಳಲ್ಲಿ ಅಡಗಿರಲು ಪ್ರಯತ್ನಿಸುತ್ತಿರುವ ಆಧುನಿಕ ದೃಶ್ಯಾವಳಿಗಳನ್ನು ಸಹ ಕಾಣುತ್ತಿರುವೆವು. ಇದೇ ಸಮಯದಲ್ಲಿ ಕೋಪಗೊಂಡು ಕೂಗಾಡುತ್ತಿರುವ ಜನರು ಅವರನ್ನು ತುತ್ತ ತುದಿಗೆ ತಳ್ಳುತ್ತಿರುವರು. ಇನ್ನೂ ತಮ್ಮ ತತ್ತ್ವಗಳು ಮತ್ತು ಕಲ್ಪನೆಗಳಿಗೇ ಅಂಟಿಕೊಂಡಿರುವ ದಿಗ್ಭ್ರಾಂತ ಶಾಂತಿವಾದಿಗಳನ್ನು ಜನರು ತಮ್ಮ ಗೋಳಾಟದಿಂದ ಅದುಮುತ್ತಿರುವರು. ಇದು ಅವರ ಇತ್ತೀಚಿನ ಜೊತೆಗಾರರು ಮತ್ತು ನಾಯಕರಿಂದಲೇ ಆಗುತ್ತಿರುವದು ಕಳವಳಕಾರಿಯಾಗಿದೆ. ನಿನ್ನೆಯ ಸಮಾಜವಾದಿ, ಕಾರ್ಮಿಕ ಸ್ವಾಮ್ಯವಾದಿ ಮತ್ತು ನಿನ್ನೆಯ ಅಂತರರಾಷ್ಟ್ರೀಯ–ವಾದಿಗಳು ಅತ್ಯಧಿಕ ಪರಸ್ಪರ ನಾಶಕ್ಕೆ ಮುಂದಾಳುಗಳಾಗಿ ನಿಂತಿರುವರು ಮತ್ತು ಯುದ್ಧದ ಶ್ವಾನಗಳನ್ನು ಅವರ ಧ್ವನಿಯೇ ಅತಿ ಹೆಚ್ಚಾಗಿ ಪ್ರೋತ್ಸಾಹಿಸುತ್ತಿರುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/607–08**

## ಯುದ್ಧ ಮತ್ತು ಪಂಚಾಯಿತಿಯ ನ್ಯಾಯಾಲಯಗಳು

ಯುದ್ಧವನ್ನು ತಡೆಗಟ್ಟಲು ಯುರೋಪಿನ ಪ್ರಮುಖ ರಾಷ್ಟ್ರಗಳ ಒಕ್ಕೂಟ ಮತ್ತು ಪಂಚಾಯಿತಿಯ ನ್ಯಾಯಾಲಯಗಳ ಶಕ್ತಿಯ ಕಲ್ಪನೆಯನ್ನು ಉದ್ದೇಶಿಸಿದ ಇತ್ತೀಚಿನ ಮತ್ತೊಂದು ಕಲ್ಪನೆ. ಅಲ್ಲಿಯೂ ಸಹ ತಕ್ಷಣದಲ್ಲಿ ಸಂಭವಿಸಿದ ಘಟನೆಗಳ ಹಾದಿಯು ಸಹ ಸಾಕಷ್ಟು ಹಾಸ್ಯಾಸ್ಪದವೆನ್ನಬಹುದು. ಸಣ್ಣ ಪುಟ್ಟ ಮತ್ತು ದೊಡ್ಡ ಯುದ್ಧಗಳ ಸರಣಿಯನ್ನು ಅನುಸರಿಸುತ್ತಲೇ ಅಂತರರಾಷ್ಟ್ರೀಯ ಪಂಚಾಯಿತಿಯ ದೊಡ್ಡ ನ್ಯಾಯಾಲಯದ ಸಂಸ್ಥೆಯು ರಚಿತವಾಯಿತು. ಬಹು ದಿನಗಳಿಂದ ಸಂಭವಿಸಬಹುದೆಂದು ಎದುರು ನೋಡುತ್ತಿದ್ದ ಯುರೋಪಿನ ಸಂಘರ್ಷದ ನಿರ್ದಯ ತಾರ್ಕಿಕ ಸರಣಿಯು ಉಂಟಾಯಿತು. ಅತ್ಯಧಿಕವಾಗಿ ಅಸಮರ್ಪಕವಾದ ದುರಾಸೆ ಮತ್ತು ಅಪ್ರಚೋದಿತ ಆಕ್ರಮಣಗಳ ಮೂಲಕ ಎರಡೂ ಕಡೆಗಳಲ್ಲಿ

ಹೋರಾಟದ ಆದೇಶ ನೀಡಿ ಮೊಟ್ಟಮೊದಲಿಗೆ ಕತ್ತಿಯನ್ನು ಝಳಿಪಿಸಿದ್ದೇ ಈ ಚಿಂತನೆಯ ಕಲ್ಪನೆಗೆ ಕಾರಣನಾದ ರಾಜ. ನಿಜಕ್ಕೂ, ಈ ಯುದ್ಧಗಳ ಸರಣಿಯು ಉತ್ತರ ಅಥವಾ ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರಲಿ, ಅಥವಾ ಮಂಚೂರಿಯ ಅಥವಾ ಬಾಲ್ಕಾನ್‌ನಲ್ಲಿ ನಡೆಯುತ್ತಿರಲಿ, ಚೇತನವು ಅದನ್ನು ಅತ್ಯಂತ ಪ್ರಮುಖವಾಗಿ ಗುರುತಿಸಿದೆ. ಈ ಯುದ್ಧಗಳು ಅಂತರ್ಗತವಾದ ಮತ್ತು ಅಸ್ತಿತ್ವದಲ್ಲಿರುವ ಹಕ್ಕುಗಳನ್ನು ತಿರಸ್ಕಾರದಿಂದ ಪರಿಗಣಿಸುತ್ತಿವೆ. ಪಂಚಾಯಿತಿಯು ಸ್ಥಾಪಿತವಾಗಲು ಕಾನೂನು ಮತ್ತು ಸಮತ್ವದ ಸಮತೋಲನವು ಇರುವದು ಅವಶ್ಯಕ. ಯುರೋಪಿನ ಒಕ್ಕೂಟವನ್ನು ಗಮನಿಸಿದಾಗ, ಅದು ನಮಗೀಗ ಬಹು ದೂರದಲ್ಲಿ ಇರುವಂತೆ ಭಾಸವಾಗುತ್ತಿದೆ. ಬಹುಪಾಲು ಪುರಾತನತೆಯಲ್ಲಿ ಓಬಿರಾಯನ ಕಾಲದ್ದಂದೇ ಹೇಳಬಹುದು. – ನಿಜಕ್ಕೂ ಅದು ಪ್ರಳಯ ಪೂರ್ವ ಕಾಲಕ್ಕೆ ಸಂಬಂಧಿತ–ವಾದುದಾಗಿದೆ. ಆದರೆ ಅದು ಎಷ್ಟು ಮಧುರತೆಯಿಲ್ಲದ ಮತ್ತು ಹೊಂದಾಣಿಕೆರಹಿತ ಒಕ್ಕೂಟವಾಗಿದ್ದಿತು ಎಂಬುದು ನಮ್ಮೆಲ್ಲರಿಗೂ ಸಹ ನೆನಪಿದೆ. ಎಷ್ಟೊಂದು ಬೀಳುವಿಕೆಗಳು ಮತ್ತು ತಪ್ಪು ಹೆಜ್ಜೆಗಳು ಮತ್ತು ಅದರ ರಾಯಭಾರತ್ವವು ಅದು ಎದುರಿಸಲಾಗದೆ ಒದ್ದಾಡುತ್ತಿದ್ದ ಘಟನೆಯ ಕಡೆ ನಮ್ಮನ್ನು ಪೂರಕವಾಗಿ ಸೆಳೆದುಕೊಂಡು ಹೋಯಿತು. ಉಪಯೋಗರಹಿತ ಒಕ್ಕೂಟದ ಬದಲಾಗಿ ಯುರೋಪಿನ ಸಂಯುಕ್ತ ಸಂಸ್ಥಾನವನ್ನು ಈಗ ಅನೇಕರು ಸೂಚಿಸುತ್ತಿದ್ದಾರೆ. ಮತ್ತು ಬಡ ಅಶಕ್ತ ಹೇಗ್ ನ್ಯಾಯ ಮಂಡಳಿಯ ಬದಲಾಗಿ ಪರಿಣಾಮಕಾರಿ ಅಂತರರಾಷ್ಟ್ರೀಯ ಕಾನೂನಿನ ನ್ಯಾಯಾಲಯವನ್ನು ಸಹ ಸೂಚಿಸುತ್ತಿರುವರು. ಆದರೆ ಈ ನ್ಯಾಯಾಲದ ಅದೇಶಗಳು ಜಾರಿಗೆ ಬರುವ ಶಕ್ತಿಯನ್ನು ಹೊಂದಿರಬೇಕು. ಆದರೆ ಜನರು ಯಂತ್ರೋಪಕರಣಗಳ ಸರ್ವೋನ್ನತ ಶಕ್ತಿಯಲ್ಲಿ ನಂಬಿಕೆಯನ್ನು ಹೊಂದಿರುವವರೆಗೂ ದೇವತೆಗಳು ತಮ್ಮ ಅಧ್ಯಯನ ಮಾಡಿದ ಹಾಸ್ಯಾಸ್ಪರತೆಯಿಂದ ಹೊರಬರುವದು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/608–09**

## ವಿಜ್ಞಾನ ಮತ್ತು ಯುದ್ಧ

ಇತರ ಚಿಂತನೆಗಳು ಮತ್ತು ತರ್ಕಗಳು ಸಹ ಬಂದಿವೆ. ಬಹಳ ಬುದ್ಧಿವಂತ ಮನಸ್ಸುಗಳು ಇನ್ನೂ ಹೆಚ್ಚು ದೃಢವಾದ ಮತ್ತು ವಿವೇಚನಾಶೀಲ ನಂಬಿಕೆಯ ಭೂಮಿಕೆಗಾಗಿ ಪರಿಶೀಲಿಸಿವೆ. ರಶಿಯಾದ ಲೇಖಕರೊಬ್ಬರ ಪುಸ್ತಕದಲ್ಲಿ ಇದನ್ನು

ಮೊಟ್ಟಮೊದಲಿಗೆ ಪ್ರತಿಪಾದಿಸಲಾಯಿತು. ಪ್ರಾರಂಭಿಕ ಹಂತದಲ್ಲಿ ಈ ಪುಸ್ತಕವು ಬಹಳ ಪ್ರಸಿದ್ಧವಾಯಿತು. ನಂತರದಲ್ಲಿ ಮೌನವಾಯಿತು. ಭೌತಿಕವಾಗಿ ಯುದ್ಧವು ಅಸಾಧ್ಯವೆಂದು ತೋರಿಸಿ ವಿಜ್ಞಾನವು ಅದನ್ನು ಕೊನೆಗಾಣಿಸಬೇಕಾಗಿತ್ತು. ಆಧುನಿಕ ಅಸ್ತ್ರಗಳೊಂದಿಗೆ ಎರಡು ಸಮವಾಗಿರುವ ಸೈನ್ಯಗಳು ಯುದ್ಧ ಮಾಡಲು ಒಂದಕ್ಕೊಂದು ಎದುರಾದರೆ ಎರಡೂ ಸೈನ್ಯಗಳು ನಿಶ್ಚಲವಾಗುವವು ಎಂಬುದನ್ನು ಗಣಿತ ಶಾಸ್ತ್ರವು ಪ್ರಮಾಣೀಕರಿಸಿದೆ. ಆಕ್ರಮಣವನ್ನು ನಿರೋಧಿಸುವ ಸೈನ್ಯದ ಮೂರು ಪಟ್ಟಿನಷ್ಟು ಎದುರಾಳಿಯು ಬಲವಾಗಿದ್ದರೆ ಮಾತ್ರ ಆಕ್ರಮಣವು ಸಾಧ್ಯ. ಹೀಗಾಗಿ ಯುದ್ಧವು ಯಾವುದೇ ಮಿಲಿಟರಿ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಾಗುವದಿಲ್ಲ. ಆದರೆ ಫಲದಾಯಕವಲ್ಲದ ಏರುಪೇರನ್ನು ಮಾತ್ರ ಉಂಟುಮಾಡುವದು. ಜೊತೆಗೆ ರಾಷ್ಟ್ರಗಳ ವ್ಯವಸ್ಥಿತ ಜೀವನದಲ್ಲಿ ಅಡತಡೆಗಳನ್ನು ಸಹ ತಂದೊಡ್ಡುವದು. ರಶಿಯಾ – ಜಪಾನ ಯುದ್ಧವು ತತ್‌ಕ್ಷಣದಲ್ಲಿ ಆಕ್ರಮಣ ಮತ್ತು ವಿಜಯವು ಇನ್ನೂ ಸಾಧ್ಯವೆಂದು ನಿರೂಪಿಸುತ್ತಿದ್ದಂತೆಯೇ, ಮಾನವನ – ಮಾರಕ ಅಸ್ತ್ರಗಳ ಕೋಪಕ್ಕಿಂತಲೂ ಆತನ ಯುದ್ಧದ ಕೋಪವೇ ಅಧಿಕ ಎಂದು ಸಾಬೀತಾದಾಗ, ಮತ್ತೊಂದು ಪುಸ್ತಕವನ್ನು ರಚಿಸಲಾಯಿತು. ಅದೇ “The Great Illusion”. ಲೇಖಕರನ್ನು ಈ ನಾಮಧೇಯವು ಹಾಸ್ಯಾಸ್ಪದವಾಗುವಂತೆ ಮಾಡಿತು. ಈ ಪುಸ್ತಕವನ್ನು ಯುದ್ಧ ಮತ್ತು ಆಕ್ರಮಣದಿಂದ ವಾಣಿಜ್ಯ ಉಪಯೋಗವನ್ನು ಗಳಿಸಬಹುದು ಎನ್ನುವ ಚಿಂತನೆಯು ಕಾಲ್ಪನಿಕ ಎಂದು ಸಾಬೀತು ಮಾಡಲು ರಚಿಸಲಾಯಿತು. ಇದನ್ನು ಅರ್ಥಮಾಡಿಕೊಂಡ ಒಡನೆಯೇ ಅಂದರೆ ಶಾಂತಿಯುತ ಪರಸ್ಪರ ವಿನಿಮಯದ ಲಾಭವನ್ನು ಅರಿತವೆಂದರೆ ನಾವು ಆಗ ವಾಣಿಜ್ಯ ವಿಸ್ತರಣೆಯ ಅಪೇಕ್ಷೆಯಿಂದ ಈಗ ಮಾಡಲು ಪ್ರಯತ್ನಿಸುತ್ತಿರುವ ಹೊಂದಾಣಿಕೆಯಿಂದ ಹೊರಬರುವೆವು. ಏಕೆಂದರೆ ಅಂತಹ ಹೊಂದಾಣಿಕೆಯು ವಾಣಿಜ್ಯ ಮತ್ತು ಐಶ್ವರ್ಯಗಳನ್ನು ಹೆಚ್ಚಿಸುವದಿಲ್ಲ ಬದಲಿಗೆ ವಿನಾಶಕಾರಿ ಪರಿಸ್ಥಿತಿಯನ್ನು ತೆಗೆದುಕೊಂಡು ಬಂದು ರಾಷ್ಟ್ರಗಳನ್ನು ಅವ್ಯವಸ್ಥಿತಗೊಳಿಸುವದು. ಈ ಸಮಾಧಾನದ ಮತ್ತು ತಾರ್ಕಿಕ ಪ್ರತಿವಾದನೆಗೆ ದೇವತೆಗಳು ತಕ್ಷಣವೇ ನೀಡಿದ ಉತ್ತರವೇ ಈಗಿನ ಯುದ್ಧ. ಈ ಯುದ್ಧದಲ್ಲಿ ಆಕ್ರಮಣ ಮತ್ತು ವಾಣಿಜ್ಯ ವಿಸ್ತರಣೆಗಾಗಿ ಹೋರಾಡಲಾಯಿತು. ಯುದ್ಧವು ನಡೆಯುತ್ತಿದ್ದಾಗಲೂ ಸಮರನಿರತ ರಾಷ್ಟ್ರಗಳು ವಾಣಿಜ್ಯ ಸಂಗ್ರಾಮವನ್ನು ಮುಂದುವರೆಸುವಂತೆ ಕರೆ ನೀಡಲಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/609**

### ಮಾನವ ಸ್ವಭಾವ ಮತ್ತು ಯುದ್ಧ

ಪ್ರಬಲ ಚಿಂತಕರಾಗಿದ್ದರು ಈ ಪುಸ್ತಕಗಳನ್ನು ಬರೆದ ಜನರು. ಆದರೆ ಒಂದು ಮುಖ್ಯವಾದ ವಿಷಯವನ್ನು ಅವರು ನಿರ್ಲಕ್ಷಿಸಿದರು. ಅದೇ ಮಾನವ ಸ್ವಭಾವ. ರಶಿಯಾದ ಲೇಖಕರು ಊಹಿಸದೆ ಇದ್ದ ಅನೇಕ ವಿಷಯಗಳ ವೃದ್ಧಿಯ ಮೂಲಕ ಈಗಿನ ಯುದ್ಧವು ಆ ಲೇಖಕರನ್ನು ಸಮರ್ಥಿಸಿದೆ. ಮಿಲಿಟರಿ ಚಲನೆಯನ್ನು ವೈಜ್ಞಾನಿಕ ಯುದ್ಧವು ಸ್ಥಗಿತಗೊಳಿಸಿದೆ. ಸಮರ ತಂತ್ರ ನಿಪುಣರನ್ನು ಮತ್ತು ಕಾರ್ಯ ತಂತ್ರಜ್ಞರನ್ನು ದಿಗ್ಭ್ರಮೆಗೊಳಿಸಿದೆ. ಅತ್ಯಧಿಕ ಸಂಖ್ಯೆಯ ಸೈನಿಕರು ಅಥವಾ ಅತ್ಯಧಿಕ ಯುದ್ಧ ಸಾಮಗ್ರಿಗಳನ್ನು ಹೊರತುಪಡಿಸಿದರೆ ನಿರ್ಧಾರಿತ ಗೆಲುವಿನ ಸಾಧನೆಯು ಅಸಾಧ್ಯವೆನಿಸುವಂತೆ ಆಗಿದೆ. ಆದರೆ ಇದು ಯುದ್ಧವನ್ನು ಅಸಾಧ್ಯವಾಗಿಸಿಲ್ಲ. ಅದು ಅದರ ಗುಣ ವಿಶೇಷವನ್ನು ಮಾತ್ರ ಬದಲಿಸಿದೆ. ಮಿಲಿಟರಿ ನಿರ್ಧಾರಗಳ ಯುದ್ಧವನ್ನು ಮಿಲಿಟರಿ ಮತ್ತು ಆರ್ಥಿಕತೆಗಳ ಕೊರತೆಯ ಯುದ್ಧವನ್ನಾಗಿ ಅದು ಮಾಡಿರಬಹುದು ಅಷ್ಟೇ. ಜೊತೆಗೆ ಬರಗಾಲವೆಂಬ ಆಯುಧವು ಸಹ ಸೇರಿಕೊಂಡಿತು. ಇದಕ್ಕೆ ಬದಲಾಗಿ ಆರ್ಥಿಕ ಉದ್ದೇಶವನ್ನು ಮುಖ್ಯ ಕಾರಣವನ್ನಾಗಿ ಮಾಡುವದರ ಮೂಲಕ ಆಂಗ್ಲ ಲೇಖಕರು ತಪ್ಪು ಮಾಡಿರುವರು. ಆದರೆ ವಾಣಿಜ್ಯೋದ್ಯಮದ ಕಡೆ ಕರೆದುಕೊಂಡು ಹೋದ ಮಾನವ ಲಾಲಸೆಯನ್ನು ಆತನು ಸಂಪೂರ್ಣವಾಗಿ ನಿರ್ಲಕ್ಷಿಸಿದನು, ಅಂದರೆ ಮಾರುಕಟ್ಟೆಯ ಮೇಲೆ ಹಿಡಿತವು ಸಂಪೂರ್ಣವಾಗಿ ಅಸಮರ್ಪಕವಾಯಿತು ಮತ್ತು ಅಸಹಾಯಕ ಜನರು ಶೋಷಣೆಗೆ ಒಳಗಾದರು. ...

ಮಾನಸಿಕವಾಗಿ ಯುದ್ಧವು ಅಸಾಧ್ಯವೆನಿಸುವವರೆಗೂ ಅದು ಉಳಿದೇ ಇರುವದು. ಕೆಲಕಾಲ ದೂರ ಸರಿದರೂ ಅದು ಪುನಃ ಹಿಂದಿರುಗುವದು. ಸ್ವತಃ ಯುದ್ಧವೇ ಯುದ್ಧವನ್ನು ನಿಲ್ಲಿಸುವದು ಎಂಬುದೇ ನಿರೀಕ್ಷೆ. ಯುದ್ಧಕ್ಕಾಗುತ್ತಿರುವ ಖರ್ಚು, ಭಯ, ಪಾಶವೀ ಮನೋವೃತ್ತಿ, ಶಾಂತ ಜೀವನದಲ್ಲಿನ ಅಡತಡೆ, ರಕ್ತಪಾತದ ಹುಚ್ಚು ಎಂತಹ ಅಗಾಧ ಪ್ರಮಾಣವನ್ನು ತಲುಪಿದೆ ಅಥವಾ ತಲುಪುವುದೆಂದರೆ ಮಾನವ ಪೀಳಿಗೆಯು ತನ್ನ ದೈತ್ಯತ್ವವನ್ನು ಆಯಾಸ ಮತ್ತು ಬೇಸರದಿಂದ ಯುದ್ಧದ ಹಿಂದೆ ಎಸೆಯುವದು. ಆದರೆ ಆಯಾಸ, ಜುಗುಪ್ಸೆ, ಭಯ ಮತ್ತು ಕರುಣೆ, ಮಾನವ ಜೀವನ ಮತ್ತು ಶಕ್ತಿಯು ವ್ಯರ್ಥವಾಗುತ್ತಿರುವ ಪ್ರಾಯೋಗಿಕ ಸತ್ಯದ ಮೂಲಕ ಕಣ್ಣುಗಳನ್ನು ತೆರೆಯುವಿಕೆ ಮತ್ತು ಅದರಿಂದ

ಉಂಟಾಗುತ್ತಿರುವ ಹಾನಿ ಮತ್ತು ಅತಿಯಾದ ಖರ್ಚುಗಳು ಸಹ ಶಾಶ್ವತವಾದ ಅಂಶಗಳಲ್ಲ; ಅರಿಯುವಿಕೆಯು ಇನ್ನೂ ನವ ನವೀನವಾಗಿರುವಾಗ ಮಾತ್ರ ಅದು ಪರಿಣಾಮಕಾರಿಯಾಗಿ ಇರುವದು. ನಂತರದಲ್ಲಿ ಎಲ್ಲರೂ ಮರೆತುಬಿಡುವರು. ಮಾನವ ಸ್ವಭಾವವು ಪುನಶ್ಚೇತನಗೊಂಡು ತಾತ್ಕಾಲಿಕವಾಗಿ ಹಿಂದೆ ಸರಿದಿದ್ದ ಸ್ವಭಾವವನ್ನು ಹಿಂಪಡೆಯುವದು. ಒಂದು ದೀರ್ಘವಾದ ಶಾಂತಿ, ಒಂದು ಶಾಂತಿಯ ವ್ಯವಸ್ಥೆಯನ್ನು ಸಹ ಚಿಂತಿಸಿ ಫಲದಾಯಕಗೊಳಿಸಬಹುದು. ಆದರೆ ಮಾನವನ ಹೃದಯವು ಈಗ ಇರುವ ಸ್ಥಿತಿಯಲ್ಲೇ ಇರುವವರೆಗೂ, ಶಾಂತಿಯು ಕದಡಿಹೋಗುವದು ಮತ್ತು ವ್ಯವಸ್ಥೆಯು ಮಾನವನ ಭಾವೋತ್ಕರ್ಷದ ಒತ್ತಡದಲ್ಲಿ ಮುರಿದುಬೀಳುವದು. ಬಹುಶಃ ಯುದ್ಧವು ಇನ್ನು ಮುಂದೆ ಭೌತಿಕ ಅವಶ್ಯಕತೆಯಾಗಿ ಉಳಿದಿಲ್ಲ. ಆದರೆ ಅದು ಇನ್ನೂ ಮಾನಸಿಕ ಅವಶ್ಯಕತೆಯಾಗಿದೆ; ನಮ್ಮ ಒಳಗೆ ಏನು ಇದೆಯೋ ಅದು ಬಾಹ್ಯದಲ್ಲಿ ಪ್ರಕಟವಾಗಲೇಬೇಕು.

ಈ ಸಮಯದಲ್ಲಿ, ದೇವತೆಗಳು ಹಾಸ್ಯಾಸ್ಪದವಾಗಿ ಪ್ರತಿಯೊಂದು ಸುಳ್ಳು ನಂಬಿಕೆ ಮತ್ತು ಭರವಸೆಭರಿತ ಭವಿಷ್ಯ ವಾಣಿಗೆ ಉತ್ತರಿಸುವರು. ಏಕೆಂದರೆ ಇದರಿಂದ ಮಾತ್ರವೇ ನಾವು ನೈಜ ಪರಿಹಾರದ ಕಡೆ ಸಾಗಲು ಸಾಧ್ಯ. ಎಲ್ಲರೂ ಜೊತೆಗಾರರೆಂಬ ಭಾವನೆ ಮಾತ್ರವಲ್ಲ. ಆದರೆ ಎಲ್ಲರೊಂದಿಗೆ ಏಕತ್ವವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಎಲ್ಲರನ್ನೂ ತನ್ನ ಸಹೋದರರೆಂದು ಮಾತ್ರವಲ್ಲ – ಅದು ಬಹಳ ತೆಳುವಾದ ಬಂಧ – ಆದರೆ ಅವರು ತನ್ನ ಸ್ವಂತ ದೇಹದ ಭಾಗವೆಂದು ತಿಳಿಯಬೇಕು. ಮಾನವನು ತನ್ನ ವಿಭಿನ್ನ ಸ್ವಂತ ಮತ್ತು ಸಾಮೂಹಿಕ ಅಹಂಕಾರದ ಭಾವದಲ್ಲಿ ಜೀವಿಸಿರುವದನ್ನು ಬಿಟ್ಟು ಒಂದು ವಿಶಾಲವಾದ ವಿಶ್ವಾತೀತ ಚೇತನದಲ್ಲಿ ಬದುಕಬೇಕು. ಹಾಗೆ ಆದಾಗ ಮಾತ್ರ ಯುದ್ಧದ ವಿದ್ಯಮಾನವು, ಎಲ್ಲಾ ಆಯುಧಗಳೊಂದಿಗೆ ಪುನಃ ಹಿಂದಿರುಗುವ ಸಾಧ್ಯತೆಯಿಲ್ಲದೆ ಆತನಿಂದ ದೂರ ಸರಿಯುವದು. ಈ ಸಮಯದಲ್ಲಿ ಆತನು ಆ ಅಂತಿಮ ಕಲ್ಪನೆಗಳಿಗಾಗಿ ಒದ್ದಾಡುವದು ಸಹ ಒಂದು ಅತ್ಯುತ್ತಮ ಸಂಕೇತ. ಏಕೆಂದರೆ ಆ ಕಲ್ಪನೆಯ ಹಿಂದಿನ ಸತ್ಯವು ಈ ಕ್ಷಣದಲ್ಲಿ ನೈಜತೆಯಾಗಬೇಕೆಂದು ಒತ್ತಡವನ್ನು ಹೇರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/609–11 – ಶ್ರೀ ಅರವಿಂದರು**

# ಯುದ್ಧದ ಪರಿಣಾಮಗಳು

## ಯುದ್ಧ ಮತ್ತು ಬರಗಾಲ

ಈ ಪ್ರಶ್ನೆಗೆ ಒಂದು ಹೊಸ ಅಂಶವನ್ನು ನೀಡುವದೇ ಯುದ್ಧದ ಮೊದಲ ಪರಿಣಾಮಗಳ ಒಂದು ಭಾಗವಾಗಿತ್ತು. ಪುರುಷರು ಮತ್ತು ಸ್ತ್ರೀಯರ ನಡುವಿನ ನಿರಂತರವಾದ ವಿರೋಧಗಳ ಉಪಯೋಗರಹಿತತೆಯನ್ನು ಒಮ್ಮೆಲೆ ಸ್ಪಷ್ಟವಾಗಿ ಗೋಚರಿಸುವಂತೆ ಮಾಡಲಾಯಿತು. ಲಿಂಗಗಳ ಕದನದ ಹಿಂದೆ, ಬಾಹ್ಯ ಸತ್ಯಗಳಿಗೆ ಸಂಬಂಧಿಸಿದಂತೆ, ಪರಿಸ್ಥಿತಿಗಳ ಗುರುತರ ಸ್ಥಿತಿಯು ಯಾವಾಗಲೂ ಬಾಹ್ಯದಲ್ಲಿ ಕಾಣಿಸಿಕೊಳ್ಳದಿರುವ ಮಾನವ ಜನಾಂಗದ ಈ ಎರಡು ಮುಖಗಳ ನಡುವಿನ ನೈಜ ಹೊಂದಾಣಿಕೆಯ ಸ್ಥಿರತೆಯನ್ನು ಅನ್ವೇಷಿಸುವಂತೆ ಮಾಡಿತು.

ಅನೇಕ ಪುರುಷರು ಮಾಡುತ್ತಿದ್ದ ಕಾರ್ಯಗಳನ್ನು ಎಷ್ಟು ಸುಲಭವಾಗಿ ಮಹಿಳೆಯರಿಗೆ ಮಾಡಲು ಶಕ್ಯವಾಯಿತು ಎಂಬುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ಜೊತೆಗೆ ತಮ್ಮ ಕೆಲಸಕ್ಕೆ ಈ ಜೊತೆಗಾರರನ್ನು ಬಹಳ ಹಿಂದೆಯೇ ಸೇರಿಸಿಕೊಂಡು ಬಿಡಬೇಕಿತ್ತು ಎಂದೂ ಅನ್ನಿಸದಿರಲಿಲ್ಲ. ಹೆಂಗಸರು ಬರೀ ಭೋಗದ ವಸ್ತು, ಅಡಿಗೆ ಮಾಡಲು ಮತ್ತು ಮಕ್ಕಳನ್ನು ನೋಡಿಕೊಳ್ಳಲು ಮಾತ್ರ ಸಮರ್ಥಳು ಎಂದು ಭಾವಿಸುವದು ತಪ್ಪು ಎಂಬುದರ ಅರಿವು ಸಹ ಅವರಿಗಾಯಿತು. ನಿಜಕ್ಕೂ ಆ ಕೆಲಸಗಳನ್ನು ಮಾಡುವದು ಅಷ್ಟೇನು ಸುಲಭವಲ್ಲ. ಅದಕ್ಕೂ ಚಾಣಕ್ಷತೆಯು ಅವಶ್ಯಕ. ಆದರೆ ಆಕೆ ಅದು ಮಾತ್ರವಲ್ಲ ಎಂಬುದನ್ನು ಈಗಿನ ಪರಿಸ್ಥಿತಿಗಳು ನಿರೂಪಿಸಿದವು.

ಅತ್ಯಂತ ಕಷ್ಟಕರವಾದ ಭೌತಿಕ ಪರಿಸ್ಥಿತಿಗಳಲ್ಲಿ ಗಾಯಗೊಂಡವರನ್ನು ಕಾಪಾಡುವದು, ಅದರಲ್ಲೂ ವೈರಿಯ ಸಮ್ಮುಖದಲ್ಲಿ ಸುಲಭವಾಗಿರಲಿಲ್ಲ. ಪುರುಷರಿಗೆ ಸಮನಾದ ಸಹನೆ ಮತ್ತು ಭೌತಿಕ ಶಕ್ತಿಯನ್ನು ತಾವು ಸಹ ಹೊಂದಿರುವದರ ಪರಿಚಯವನ್ನು ಅವರಿಗೆ ಸ್ತ್ರೀಯರು ಮಾಡಿದರು. ಆದರೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಎಲ್ಲವನ್ನೂ ವ್ಯವಸ್ಥಿತಗೊಳಿಸುವದರಲ್ಲಿ ತಮಗಿರುವ ಚಾಕಚಕ್ಯತೆಯನ್ನು ತೋರ್ಪಡಿಸಿದರು. ಈ ವ್ಯವಸ್ಥಾಪಕ ಕಾರ್ಯಕ್ಷಮತೆಯನ್ನು ಭಾರತದಲ್ಲಿನ ಬ್ರಾಹ್ಮಣರು ಮುಸಲ್ಮಾನರ ಆಕ್ರಮಣಕ್ಕಿಂತಲೂ ಮೊದಲೇ ಗುರುತಿಸಿದ್ದರು. ಒಂದು ಸುಪ್ರಸಿದ್ಧ ನಾಣ್ಣುಡಿ ಇದೆ. ಅದೇನೆಂದರೆ "ಮಹಿಳೆಯ ಆಡಳಿತದಲ್ಲಿರುವ ಸ್ವತ್ತು ಯಾವಾಗಲೂ ಸಂಪದ್ಭರಿತವಾಗಿರುವದು. ಆದರೆ

ಪಶ್ಚಿಮದ ರಾಷ್ಟ್ರಗಳ ರೋಮನ್ ನಾಗರೀಕತೆಯು ಸಂಪ್ರದಾಯಗಳನ್ನು ತೀರಾ ಆಳವಾಗಿಸಿ ಮಹಿಳೆಯರ ವ್ಯವಸ್ಥಾಪಕ ಶಕ್ತಿಗೆ ಅವಕಾಶವೇ ಇಲ್ಲದಂತೆ ಮಾಡಿದೆ.

ಈ ಯುದ್ಧದಿಂದ ಮಹಿಳೆಯರ ವಿಶೇಷ ಗುಣಗಳು ಮಾತ್ರ ಹೊರಹೊಮ್ಮಿವೆ ಎಂದು ಹೇಳಲಾಗುವದಿಲ್ಲ. ಆಕೆಯ ದುರ್ಬಲತೆಗಳು, ಆಕೆಯ ತಪ್ಪುಗಳು, ಕೀಳು ಮನೋಭಾವನೆಗಳು ಸಹ ಹೊರಗೆ ಕಾಣಿಸಿಕೊಳ್ಳುತ್ತಿವೆ. ನಿಜಕ್ಕೂ ರಾಷ್ಟ್ರಗಳ ಆಳ್ವಿಕೆ ಮಾಡುವ ಕಾರ್ಯದಲ್ಲಿ ಅವರು ಹೊರಬೇಕೆಂದಿರುವ ಜವಾಬ್ದಾರಿಯನ್ನು ನಿಭಾಯಿಸಬೇಕಾದರೆ ಅವರು ಆತ್ಮೋನ್ನತಿಯಲ್ಲಿ ಮತ್ತಷ್ಟು ಪ್ರಗತಿಯನ್ನು ಸಾಧಿಸಬೇಕಾಗಿದೆ. ಅವರ ದೃಷ್ಟಿಕೋನಗಳು ಮತ್ತು ಚಿಂತನೆಗಳು ವಿಶಾಲವಾಗಬೇಕು. ಅವರ ಬೌದ್ಧಿಕ ಮೃದುತ್ವವು ಹೆಚ್ಚಾಗಬೇಕು, ಭಾವನಾತ್ಮಕ ಆಯ್ಕೆಗಳ ಉಪೇಕ್ಷಿತ ಸ್ಥಿತಿಯಿಂದ ಹೊರಬರಬೇಕು. ಇದೆಲ್ಲಾ ಆದಾಗ ಮಾತ್ರ ಅವರು ಸಾರ್ವಜನಿಕ ಹಿತಾಸಕ್ತಿಯ ಕಾರ್ಯಗಳಲ್ಲಿ ಪಾಲ್ಗೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/147–49**

ಮಾನವನ ಪ್ರಜ್ಞೆಯಲ್ಲಿಯ ಬದಲಾವಣೆಯೇ ಭವಿಷ್ಯತ್ಕಾಲದ ಒಂದೇ ಒಂದು ಭರವಸೆ ಮತ್ತು ಆ ಬದಲಾವಣೆಯು ಖಂಡಿತವಾಗಿ ಸಂಭವಿಸುವದು.

ಈ ಬದಲಾವಣೆಗೆ ಜನರು ತಾವಾಗಿಯೇ ಸಹಕರಿಸುವರೋ ಅಥವಾ ಮೇಲೆ ಬೀಳುತ್ತಿರುವ ಪರಿಸ್ಥಿತಿಗಳ ಮೂಲಕ ಅದನ್ನು ಅವರ ಮೇಲೆ ಹೇರಬೇಕಾಗಿದೆಯೇ ಎಂಬುದನ್ನು ಅವರೇ ನಿರ್ಧರಿಸಬೇಕಾಗಿದೆ.

ಆದುದರಿಂದ, ಜಾಗೃತರಾಗಿ ಮತ್ತು ಸಹಕರಿಸಿ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/60**

### ಸತ್ಯ ಮತ್ತು ಹೋರಾಟ

ಅನುಗ್ರಹವು ಒಂದು ರಾಷ್ಟ್ರದ ಪರವಾಗಿ ಅಥವಾ ಇನ್ನೊಂದರ ವಿರುದ್ಧವಾಗಿ ಕ್ರಿಯಾಶೀಲವಾಗುವದು ಎಂಬುದನ್ನು ನಾವು ಹೇಗೆ ನಂಬಲು ಸಾಧ್ಯ? ಅನುಗ್ರಹವು ಸತ್ಯದ ಪರವಾಗಿ ಕೆಲಸ ಮಾಡುವದು. ಪ್ರಪಂಚದ ಇಂದಿನ ಪರಿಸ್ಥಿತಿಯಲ್ಲಿ ಸತ್ಯ ಮತ್ತು ಮಿಥ್ಯೆಗಳೆರಡೂ ಎಲ್ಲಾ ರಾಷ್ಟ್ರಗಳಲ್ಲಿ ಇವೆ. ಮಾನವನ ಮನಸ್ಸೇ

ಚಿಂತಿಸುತ್ತಿರುವದು, ಅದು ಇದು ಸರಿಯಾಗಿದೆ ಅದು ತಪ್ಪು ಎಂದು ಹೇಳುತ್ತಿದೆ – ಸರಿ ಮತ್ತು ತಪ್ಪುಗಳು ಎಲ್ಲಾ ಕಡೆಯಲ್ಲಿ ಇವೆ.

ಸತ್ಯವು ಎಲ್ಲಾ ಹೋರಾಟಗಳು ಮತ್ತು ವೈರುಧ್ಯಗಳ ಮೇಲೆ ಇದೆ.

*

*ಎರಡು ಅಂಶಗಳ ಬಗ್ಗೆ ನನಗೆ ನಿಮ್ಮಿಂದ ಸ್ಪಷ್ಟತೆಯು ಸಿಗುವದೇ?*

*(1) ಒಂದು ಹೋರಾಟದ ಎರಡೂ ಕಡೆಯಿರುವ ಸತ್ಯದ ಪರವಾಗಿ ಅನುಗ್ರಹವು ಕೆಲಸ ಮಾಡುವದಲ್ಲವೇ?*

ಹೌದು.

*ಅಥವಾ ಅದು ಎರಡೂ ಕಡೆ ಮಿಥ್ಯೆಯಿರುವದೆಂಬ ಕಾರಣದಿಂದ ತಾನು ಸುಮ್ಮನಿದ್ದುಬಿಡುವದೇ?*

ಇಲ್ಲ – ನಾನು ಕೆಲಸ ಮಾಡುತ್ತಿರುವದೆಂದು ಹೇಳಿದೆ – ಅದು ನಿರಂತರವಾಗಿ ಕೆಲಸ ಮಾಡುತ್ತಿದೆ.

*(2) ಎರಡನೇ ಮಹಾಯುದ್ಧದ ರೀತಿಯ ಹೋರಾಟದಿಂದ ಈಗಿನ ಯುದ್ಧಗಳು ಮೂಲಭೂತವಾಗಿ ವಿಭಿನ್ನವಾದವೇ? ನಿರ್ಧಾರಿತವಾಗಿ ಮತ್ತು ನಿರ್ದಿಷ್ಟವಾಗಿ ಅನುಗ್ರಹವು ಮಹಾಯುದ್ಧದಲ್ಲಿ ಒಂದು ಕಡೆ ಕೆಲಸ ಮಾಡಿತು – ಕೊನೆಯ ಪಕ್ಷ ಸಮಗ್ರವಾಗಿ.*

ನೀನು ಎರಡು ವಿಷಯಗಳನ್ನು ಮಿಶ್ರಣ ಮಾಡುತ್ತಿರಿವೆ. ಅನುಗ್ರಹದ ಕಾರ್ಯ ಮತ್ತು ಸತ್ಯದ ವಿಜಯದಿಂದ ಅನಿವಾರ್ಯವಾಗಿ ಉಂಟಾಗುವ ಫಲ. ಅವೆರಡು ಬೇರೆ ಬೇರೆ ಹಂತದಲ್ಲಿರುವ ವಿಭಿನ್ನ ವಿಷಯಗಳು.

ಸತ್ಯದ ಪ್ರಗತಿಪರವಾದ ವಿಜಯವು ತನ್ನಂತೆ ತಾನೇ ನಿರ್ದಿಷ್ಟ ಫಲಿತಾಂಶಗಳನ್ನು ಉಂಟುಮಾಡುವದು. ಅವು ಸಂಕೀರ್ಣವೂ ಹಾಗೂ ಯಾವಾಗಲೂ ಸ್ಪಷ್ಟವಾದ ಫಲವನ್ನು ಬಯಸುವ ಮನಸ್ಸಿಗೆ ಅನಿರೀಕ್ಷಿತವಾದುದು ಸಹ ಆಗಿರುವದು. ಕಾಲ ಮತ್ತು ಆಕಾಶಗಳೆರಡರ ಸಂಪೂರ್ಣ ದರ್ಶನ ಮಾತ್ರ ಅದನ್ನು ಅರ್ಥ ಮಾಡಿಕೊಳ್ಳಬಲ್ಲದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/382 – ಶ್ರೀಮಾತೆ**

ವಿಜಯವು ಆಗಮಿಸಿದೆ, ನಿನ್ನ ವಿಜಯ, ಓ ಭಗವಂತನೇ, ಅದಕ್ಕಾಗಿ ನಿನಗೆ ನಾವು ಅನಂತಾನಂತ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ.

ಆದರೆ ಈಗ ನಮ್ಮ ಉತ್ಕಟ ಪ್ರಾರ್ಥನೆಯು ನಿನ್ನ ಕಡೆ ಜಾಗೃತ–ವಾಗುತ್ತಿದೆ. ನಿನ್ನ ಶಕ್ತಿಯಿಂದ ಮತ್ತು ನಿನ್ನ ಶಕ್ತಿಯ ಮೂಲಕವೇ ವಿಜಯಿಗಳು ಜಯಿಸಿರುವದು, ಅವರು ತಮ್ಮ ವಿಜಯದಲ್ಲಿ ಅದನ್ನು ಮರೆಯದಿರುವಂತೆ ಅನುಗ್ರಹಿಸು. ಕಷ್ಟ ಮತ್ತು ದುಃಖದ ಸಮಯದಲ್ಲಿ ಅವರು ನಿನಗೆ ನೀಡಿದ ವಚನಗಳನ್ನು ಉಳಿಸಿಕೊಳ್ಳುವಂತೆ ಮಾಡು. ಯುದ್ಧ ಮಾಡಲು ಅವರು ನಿನ್ನ ನಾಮಧೇಯವನ್ನು ಉಪಯೋಗಿಸಿರುವರು. ಶಾಂತಿಯು ಉಂಟಾಗುತ್ತಿರುವಾಗ ನಿನ್ನ ಅನುಗ್ರಹವನ್ನು ಅವರು ಮರೆಯದಿರಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/44 – ಶ್ರೀಮಾತೆ**

# ಕುರುಕ್ಷೇತ್ರ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

## ವೈಶ್ವಿಕ ನಾಶ

ಗೀತಾಚಾರ್ಯನ ತ್ರಿಪದ ವಿಕ್ರಮಣಗಳನ್ನು ಅನುಸರಿಸಿ, ಅವನ ಇಚ್ಛೆ–ಹೃದಯ–ವಿಚಾರಗಳ ಔನ್ನತ್ಯದೆಡೆಗೆ ಆರೋಹಿಸುವ ಮುನ್ನ, ಅವನ ಪ್ರೇಮ, ಕ್ರಿಯೆ ಮತ್ತು ಜ್ಞಾನದ ಪರಮೋಚ್ಛ ಮಾರ್ಗವನ್ನು ಶೋಧಿಸುವ ಮುನ್ನ ಮರ್ತ್ಯಮಯ ಜೀವನದ ದೃಷ್ಟಿಕೋನದಲ್ಲಿ ಸಕಲ ವಿಶ್ವದ ಅಸ್ತಿತ್ವವನ್ನು ತಥಾವತ್ತಾಗಿ ಬೋಧಿಸುವ ಗೀತೆಯು ಯಾವ ಹಂತದಲ್ಲಿ ಸ್ಫುರಣವಾಯಿತು ಎಂಬುದನ್ನು ಅರಿಯಬೇಕಾಗುತ್ತದೆ. ಏಕೆಂದರೆ, ನಾವು ಗಮನಿಸಿದಂತೆ ಕುರುಕ್ಷೇತ್ರದ ರಣಾಂಗದಲ್ಲಿ ಸಕಲ ಮನುಕುಲದ ಪ್ರತಿನಿಧಿಯಾದ ಅರ್ಜುನನು ತನ್ನ ಆಂತರ್ಯದಲ್ಲಿ ಜರುಗುತ್ತಿದ್ದ ತುಮುಲ ಯುದ್ಧಗಳ ಪ್ರಕ್ಷುಬ್ಧತೆಯಲ್ಲಿ ಹೊಯ್ದಾಡುತ್ತಿರುತ್ತಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅವನು ಅವನಿಗೆ ಸಂಬಂಧಿಸಿದ ಕ್ರಿಯೆ ಮತ್ತು ಅದರ ನಿಯಮಗಳ ಬಗ್ಗೆ ಮಾತ್ರ ಯೋಚಿಸುತ್ತಿರುತ್ತಾನೆ. ಆದರೆ, ಅವನು ವಿಶ್ವನಾಯಕನೆದುರು ಎತ್ತುವ ಪ್ರತಿಯೊಂದು ಪ್ರಶ್ನೆಗಳೂ ಮರ್ತ್ಯ ಜೀವನದ ಒಟ್ಟು ಬದುಕಿನ ಸಾರಸರ್ವಸ್ವದ ಪ್ರಶ್ನೆಯೇ ಆಗಿರುತ್ತದೆ. ಈ ವಿಶ್ವವೆಂದರೆ ಏನು, ಅದು ಏಕೆ, ಹೇಗೆ ಮತ್ತು ಯಾವಾಗ ಅಸ್ತಿತ್ವಕ್ಕೆ

ಬಂದಿತು? ಈ ವಿಶ್ವಾತ್ಮನೆದುರು ಆತ್ಮದ ಪಾತ್ರವೇನು? ಈ ಆತ್ಮವು ಆ ಪರಮಾತ್ಮದೊಡನೆ ತಾದಾತ್ಮ್ಯವನ್ನು ಹೊಂದುವ ಪರಿಯೆಂತು? ಇವೇ ಮುಂತಾದ ವೈಶ್ವಿಕ ಪ್ರಶ್ನೆಗಳನ್ನು ಅರ್ಜುನ(ನರ)ನು ಕೃಷ್ಣ(ನಾರಾಯಣ)ನಿಗೆ ಕೇಳುತ್ತಾನೆ. ಈ ಆಳವೂ–ಅಲಭ್ಯವೂ ಆದ ವಸ್ತು ವಿಷಯಗಳಿಗೆ ಸಂಬಂಧಿಸಿದ ಉತ್ತರಗಳನ್ನು ಗೀತಾಚಾರ್ಯನು ಸಮರ್ಥವಾಗಿ ಬೋಧಿಸುತ್ತಾನೆ. ಆ ಉತ್ತರಗಳು ನವ್ಯ ಜ್ಞಾನವನ್ನು ಉದಿಸಿ ನಮ್ಮನ್ನು ಮುಕ್ತಿಯ ಪ್ರಕಾಶದೆಡೆ ಕರೆದೊಯ್ಯುತ್ತದೆ.

ಆದರೆ, ಈ ವಿಶ್ವವನ್ನು ಹೇಗಿದೆಯೋ ಹಾಗೆಯೇ ಒಪ್ಪಿಕೊಂಡು ಅದರ ಪ್ರಕಾರ ಆಧ್ಯಾತ್ಮಿಕ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಿರುವ ಮಾನವನಿಗೆ ಅಡ್ಡಿ–ಆತಂಕಗಳನ್ನೊಡ್ಡುವ ಆ ಅನೃತ ಶಕ್ತಿಗಳು ಯಾವುವು? ಗೀತೆಯ ಪ್ರಥಮ ಅಧ್ಯಾಯವಾದ ಪ್ರಕಾರ ಯೋಗಸಂಪನ್ನಗೊಳ್ಳಲು ಸಾಧ್ಯವಾಗದ ಅರ್ಜುನನ ದೌರ್ಬಲ್ಯಕ್ಕೆ ಕಾರಣವಾದ ಅದಾವ ಅಂಶವು ಮಾನವನ ಜಾಗೃತ ಮನವನ್ನು ದಿಗಿಲುಗೊಳಿಸಿ ಯೋಗದಿಂದ ಹಿಂಸರಿಯುವಂತೆ ಪ್ರೇರೇಪಿಸುತ್ತಿದೆ? ಈ ವರ್ಣವಿವರ್ಣವಾಗಿ ಹಿರಣ್ಯಗರ್ಭದಂತಿರುವ ಈ ವಿಶ್ವದ ಮೂಲರೂಪದ ಎದುರಿಗೆ ಭ್ರಮೆಯ ಮುಸುಕನ್ನು ಕವಿಸಿ ಆ ಬ್ರಹ್ಮಾಂಡದ ಮೂಲ ಅಂತಃರೂಪವನ್ನು ಅನುಭವಿಸದಂತೆ ತಡೆದು ನಮ್ಮಲ್ಲಿ ನಿರಾಶೆ–ನಿರುತ್ಸಾಹಗಳನ್ನು ಭರಿಸುತ್ತಿರುವ ಆ ಅವ್ಯಕ್ತ ಪರದೆಯು ಯಾವುದು? ಕುರುಕ್ಷೇತ್ರವೆಂಬುದು ಸಕಲ ಚರಾಚರಗಳ ಆಧ್ಯಾತ್ಮಿಕ ನಿರ್ಮಾತೃವಾದ ಭಗವಂತನ ದರ್ಶನದಿಂದ ಅವನು ಸೃಜಿಸಿದ ಸಕಲ ದ್ರವ್ಯಗಳನ್ನು ಮತ್ತೆ ನಾಶಗೈಯುವ ಪ್ರಳಯ ಕಾಲದ ದರ್ಶನದಂತೆ ಬಂದೊದಗಿತ್ತು. ಇದು ಇಡೀ ಸೃಷ್ಟಿಯ ರಚನೆಗೆ ಕಾರಣನಾದ ಸರ್ವಶಕ್ತ ಭಗವಂತನು ಅದರ ನಾಶಕ್ಕೂ ಕಾರಣನಾಗುತ್ತಾನೆ ಎಂಬ ವಿಶ್ವ ಸತ್ಯವನ್ನು ನಮ್ಮೆದುರು ತೆರೆದಿಡುತ್ತದೆ. ಆ ಸೃಷ್ಟಿ–ಸ್ಥಿತಿ–ಲಯಕಾರನ ಕುರಿತಾಗಿ ನಿರ್ದಯ ನುಡಿಗಳನ್ನಾಡುವ ಪುರಾತನ ಗ್ರಂಥಗಳು, "ಆರ್ಷೋತ್ತಮರಾದ ದ್ರಷ್ಟಾರರೂ, ಆರ್ಯೋತ್ತಮರಾದ ವೀರರೂ ಅವನುಣ್ಣುವ ಆಹಾರವಾಗಿದ್ದಾರೆ. ದಿನದಿನದ ಸಾವೆಂಬುದು ಅವನ ಭೋಜನ ಕೂಟದ ಮಸಾಲೆ ಪದಾರ್ಥಗಳಾಗಿವೆ." ಇದು ಬದುಕು ಮತ್ತು ಬದುಕಿನಂತ್ಯದಲಿ ಪ್ರಕಟವಾಗುವ ಆತ್ಮದ ಏಕಮೇವ ಸತ್ಯವಾಗಿದೆ. ಇದನ್ನು ಬಾಹ್ಯ ರೂಪದಲ್ಲಿ ಸಮೀಕ್ಷಿಸುವದಾದರೆ, ಜೀವಾತ್ಮ ಮತ್ತು ಪರಮಾತ್ಮಗಳು ಚಿರಂತನವಾದ ಯುದ್ಧ ಮತ್ತು ಮೃತ್ಯುಗಳ ಮಧ್ಯೆ ತೊಳಲುತ್ತಿರುತ್ತದೆ. ಇನ್ನು ಇದರ ಆಂತರ್ಯವನ್ನು ಅವಲೋಕಿಸುವದಾದರೆ, ಈ ಏಕಾತ್ಮ–ವಿಶ್ವಾತ್ಮಗಳು ಮಹಾಪ್ರಸೃಷ್ಟಿ ಮತ್ತು

ಮಹಾಪ್ರಲಯದಲ್ಲಿ ತನ್ನ ಅಸ್ತಿತವ್ವನ್ನು ಚಿರಂತನವಾಗಿ ಕಾಯ್ದುಕೊಂಡಿರುತ್ತದೆ. ಈ ಜೀವನವೇ ಒಂದು ಯುದ್ಧಭೂಮಿ–ಮೃತ್ಯುಕ್ಷೇತ್ರ! ಇದುವೇ ಕುರುಕ್ಷೇತ್ರ; ಇದುವೇ ಆ ರಣಾಂಗಣದಲ್ಲಿ ಅರ್ಜುನನು ದರ್ಶಿಸುವ ಭಗವಂತನ ರುದ್ರಭೀಕರ ದರ್ಶನವಾಗಿದೆ.

ಹೆರಾಕ್ಲಿಟಸ್‌ನ ಪ್ರಕಾರ, "ಯುದ್ಧವು ಎಲ್ಲದರ ತಂದೆಯಾಗಿದೆ. ಯುದ್ಧವೇ ಎಲ್ಲದಕ್ಕೂ ರಾಜನಾಗಿದೆ" ಮತ್ತು ಗ್ರೀಕ್ ತತ್ತ್ವಶಾಸ್ತ್ರದಲ್ಲಿ ಇದನ್ನು ಅಘುಥೆಮ್ಸ್‌ಗೆ ಹೋಲಿಸಬಹುದು. ಇದನ್ನು ಜೀವನದ ಆಂತರ್ಯ ಎಂದು ಕರೆಯಬಹುದು. ಸತ್ತು–ಅಸತ್ತುಗಳ ದ್ವಂದ್ವದಿಂದ ಅರೂಪವು ರೂಪು ತಾಳಿದಾಗ ಅದನ್ನು ಸೃಷ್ಟಿ ಎಂದು ಕರೆಯಲಾಗುತ್ತದೆ. ಅದರ ಮುಂದುವರಿದ ಭಾಗದಂತೆ ಸೃಜಿತವಾದ ಶಕ್ತಿಗಳು, ಪ್ರವೃತ್ತಿಗಳು, ತತ್ತ್ವಗಳು ಮತ್ತು ಸಂಕುಲಗಳ ಪರಸ್ಪರ ಹೋರಾಟದಿಂದ ಈ ಘರ್ಷಣೆಯು ಮುಂದುವರೆಯುತ್ತದೆ. ತತ್‌ಪರಿಣಾಮವಾಗಿ ಹಳೆಯದು ನಾಶವಾಗಿ ಅದು ನವನವೋನ್ಮೇಷವಾದ ಸೃಷ್ಟಿಗೆ ಕಾರಣವಾಗುತ್ತದೆ. ಹಾಗೂ ನಾಶವಾದ ಪ್ರಾಕ್ತನಮೂಲವು ಎಲ್ಲಿಗೆ ತೆರಳುತ್ತದೆ ಎಂಬುದು ಮಾತ್ರ ಅಜ್ಞಾತವಾಗಿಯೇ ಉಳಿದುಬಿಡುತ್ತದೆ. ಕೆಲವರು ಅದು ಮಹಾಪ್ರಳಯದಲಿ ವಿಲೀನವಾಗುತ್ತದೆ ಎಂದು ಹೇಳಿದರೆ, ಇನ್ನೂ ಕೆಲವರು ಅದು ಸೃಷ್ಟಿ–ಸ್ಥಿತಿ–ಲಯಗಳ ತುದಿಮೊದಲೊಂದಾದ ಚಿರಂತನ ಚಕ್ರದಲಿ ಪುನರಾವರ್ತನೆಯಾಗುತ್ತಾ ಸಾಗುತ್ತದೆ ಎಂದು ಹೇಳುತ್ತಾರೆ. ಈ ವಿಶ್ವ ಚಕ್ರದ ಪರಿಕಲ್ಪನೆಯು ಬಹು ಸ್ಪಷ್ಟವಾದ ನಿಲುವನ್ನು ಪ್ರದರ್ಶಿಸುತ್ತದೆ. ಇದು ಅಪೋಕ್ಯಾಲಿಪ್ಸ್‌ನ ಕಲ್ಪನೆಗೂ ತೀರಾ ನಿಕಟವಾದ ನಿಲುವನ್ನು ಒತ್ತಾಯಿಸುತ್ತದೆ. ಒಟ್ಟಿನಲ್ಲಿ ವಿನಾಶವಿಲ್ಲದೆ ನವ್ಯ ಸೃಷ್ಟಿಯು ಸಾಧ್ಯವಿಲ್ಲ. ದ್ವಂದ್ವಶಕ್ತಿಗಳ ನಿರಂತರ ಘರ್ಷಣೆಯಿರದೆ ಸಮಷ್ಟಿಯು ಸಾಧ್ಯವಿಲ್ಲ. ಇಲ್ಲಿ ಒಂದು ಶಕ್ತಿಯ ನಾಶವು ಇನ್ನೊಂದರ ರಚನೆಗೆ ಕಾರಣವಾಗುತ್ತದೆ. ಇಲ್ಲಿ ಒಂದನ್ನು ತಿಂದು ಇನ್ನೊಂದು ಬದುಕುತ್ತವೆ. ನಮ್ಮ ಚೈತನ್ಯವು ಹುಟ್ಟಿ–ಸತ್ತು–ಮರುಹುಟ್ಟು ಪಡೆವ ಚಕ್ರ ಭ್ರಮಣೆಯಲ್ಲಿ ಸದಾ ಸುತ್ತು ಹಾಕುತ್ತಿರುತ್ತದೆ. ನಮ್ಮ ಭೌತಿಕ ಶರೀರವು ಒಂದು ನಗರದಂತಿದ್ದು, ಅದರ ಮೇಲೆ ನಿರಂತರವಾದ ಆಕ್ರಮಣಕಾರರು ಸುಲಿಗೆ ಮಾಡುತ್ತ ಮುತ್ತಿಗೆ ಹಾಕಿರುತ್ತಾರೆ. ಆದರೂ ನಮ್ಮ ಪ್ರಜ್ಞೆಯೆಂಬ ಕೋಟೆಯು ಸದಾ ಅದನ್ನು ರಕ್ಷಿಸುವ ಹೊಣೆಯನ್ನು ಹೊತ್ತು ನಡೆಯುತ್ತಿರುತ್ತದೆ. ಇದು ನಮ್ಮ ಅಸ್ತಿತ್ವದ ಒಂದು ಮುಖ ಮಾತ್ರ. "ಇಲ್ಲಿ ನೀನು ನಿನ್ನ ಸುತ್ತಲಿನ ಬಂಧುಗಳೊಡನೆ ಹೋರಾಡದೆ ಜಯಿಸಲು ಸಾಧ್ಯವಿಲ್ಲ. ನಿರಂತರವಾದ ಯುದ್ಧ–ಹೋರಾಟಗಳಿಂದ ಇತರರನ್ನು ಸೋಲಿಸದೇ ನಿನಗೆ ಬದುಕಿರಲು ಸಾಧ್ಯವಿಲ್ಲ. ಈ ವಿಶ್ವ ರಚನೆಯ ಸಂದರ್ಭದಲ್ಲಿ ನಾನು

ಮಾಡಿದ ಮೊದಲ ನಿಯಮವೆಂದರೆ, ಪ್ರಲಯವೇ ಹೊಸದೊಂದು ಸೃಷ್ಟಿ–ಸ್ಥಿತಿಗಳಿಗೆ ಮೂಲವಾಗಿದೆ!" ಈ ಆದೇಶದಿಂದಲೇ ಪ್ರಪಂಚವು ನಡೆಯುತ್ತಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/39–40**

## ಯುದ್ಧ ಮತ್ತು ಆತ್ಮಬಲ

ಯುದ್ಧ ಮತ್ತು ವಿನಾಶವೆಂಬುದು ಈ ವಿಶ್ವದ ಸಾರ್ವಕಾಲಿಕ ಸತ್ಯವಾಗಿದ್ದು, ಅದು ನಮ್ಮ ಭೌತಿಕ ಸ್ತರದಲ್ಲಿ ಮಾತ್ರವಲ್ಲದೆ ನಮ್ಮ ಮಾನಸಿಕ ಮತ್ತು ನೈತಿಕ ಅಂಶಗಳಲ್ಲೂ ತನ್ನ ಕಾರ್ಯ ಚಟುವಟಿಕೆಯನ್ನು ನಿರ್ವಹಿಸುತ್ತಿರುತ್ತದೆ. ನಮ್ಮ ಬೌದ್ಧಿಕ, ಸಾಮಾಜಿಕ, ರಾಜಕೀಯ ಮತ್ತು ನೈತಿಕ ಜೀವನದಲ್ಲಿ ಹೋರಾಟ–ವನ್ನೆದುರಿಸದೇ ನಾವು ಯಾವ ಸಾಧನೆಯನ್ನೂ ಮಾಡಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. ಈ ಬದುಕನ್ನು ಬದುಕುವುದು ಮತ್ತು ಈ ಬದುಕಿನ ಮಾರ್ಗದಲ್ಲಿ ಕಂಟಕಗಳನ್ನೊಡ್ಡುವ ದ್ವಂದ್ವ ಶಕ್ತಿಗಳನ್ನು ನಿರ್ಮೂಲಿಸಿ ಬದುಕಲು ಪ್ರಯತ್ನಿಸುವದರ ಹಿಂದೆ ಯುದ್ಧದ ಛಾಯೆಯು ನೆಲೆಸಿರುತ್ತದೆ. ಈ ಬುವಿಯ ಸಕಲ ಮರ್ತ್ಯ–ದ್ರವ್ಯಗಳು ತಮಗೆ ಯಾವುದೇ ಹಾನಿಯು ಸಂಭವಿಸದಂತೆ ಕಷ್ಟ–ಕಾರ್ಪಣ್ಯಗಳು ಎದುರಾಗದಂತೆ ಈಗಿರುವ ಹಂತದಿಂದ ಉನ್ನತವೂ–ಔನ್ನತ್ಯವೂ ಆದ ಸ್ತರಕ್ಕೆ ಆರೋಹಿಸಲು ಯಾವುದೇ ಭೌತಿಕ ತತ್ತ್ವಗಳಿಂದ ಸಾಧ್ಯವಾಗದು. ಯುದ್ಧ ಮತ್ತು ದೈಹಿಕ ಹಿಂಸೆಯ ಮೂಲಕ ನಮ್ಮನ್ನು ನಾಶಪಡಿಸಲು ಬರುವ ಶಕ್ತಿಯ ಎದುರಾಗಿ ನಮ್ಮ ಆತ್ಮಬಲವನ್ನು ಬಳಸಬೇಕಾಗುತ್ತದೆ. ನಮ್ಮ ಈ ಆತ್ಮಬಲವು ಸಧೃಡವಾಗುವವರೆಗೂ ಅಸುರೀ ಶಕ್ತಿಗಳು ರಾಷ್ಟ ಮತ್ತು ಜನಾಂಗದ ಮೇಲೆ ನಿರಂತರವಾದ ಹಲ್ಲೆಯನ್ನು ಮಾಡುತ್ತಲೇ ಇರುತ್ತದೆ. ಆ ಸಂದರ್ಭದಲ್ಲಿ ಯಾವುದೇ ವಿರೋಧವನ್ನು ತೋರದೆ ನಿರ್ಲಿಪ್ತರಾಗಿ ಇಂದ್ರಿಯ ನಿಗ್ರಹವೆಂಬಂತೆ ಆ ಹಿಂಸೆಯನ್ನು ಅನುಭವಿಸುತ್ತ ನೀವು ನಿಮ್ಮ ಇಡೀ ಜೀವನವನ್ನು ಹಾಳುಮಾಡಿಕೊಂಡು ಬಿಡುತ್ತೀರಿ. ಆದರೂ ನಿಮ್ಮ ಆ ಆದರ್ಶವೂ ಸಹ ಒಂದು ದಿನ ಉತ್ತಮ ಅಭಿವೃದ್ಧಿಗೆ ಕಾರಣವಾಗಬಹುದು. ಆದರೆ, ಅದು ಆತ್ಮಬಲದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಯಾರು ಆತ್ಮಬಲದಿಂದ ಅಸುರೀ ಶಕ್ತಿಗಳ ಎದುರು ನಿಲ್ಲುತ್ತಾರೋ ಅವರಿಗೆ ಸೋಲೆಂಬುದಿರದು. ಅದು ರುದ್ರಾಕ್ಷದಂತೆ ಭಯಂಕರವಾದ ಆಸ್ಫೋಟನೆಗೆ ಕಾರಣವಾಗುತ್ತದೆ. ಯಾರು ಆ ಆತ್ಮದ ರುದ್ರಭೀಕರ ಚಕ್ಷುವನ್ನು ತೆರೆದು ಎದುರಿಗಿರುವ ದುಷ್ಟ ಶಕ್ತಿಗಳನ್ನು ಸಂಹರಿಸುತ್ತಾರೋ ಅವರಿಗೆ

ಮಾತ್ರ ಅದರ ಅದ್ಭುತವಾದ ಪರಿಣಾಮಗಳ ಅನುಭವವಾಗುತ್ತದೆ. ಆ ಪ್ರಳಯ ಕಾಲದಲ್ಲಿ ಅಸುರೀ ಶಕ್ತಿಗಳೂ ಮತ್ತು ಅದಕ್ಕೆ ಸಹಾಯಕವಾಗಿ ನಿಂತ ಅನೃತ ಚೇತನಗಳೂ ಅದೆಷ್ಟು ಘೋರತರವಾಗಿ ಅಂತ್ಯವಾಗುತ್ತವೆ ಎಂಬುದನ್ನು ಊಹಿಸಲಾಗದು. ಕೆಡುಕನ್ನು ಕೆಡುಕಿನಿಂದಲೇ ಪರಿಹರಿಸಬೇಕು. ಮತ್ತು ಆ ಹಿಂಸೆಯನ್ನು ಅನುಭವಿಸುತ್ತ ಸಂವೇದನಾ ಶೀಲರಾಗಿ ಕುಳಿತುಕೊಂಡಷ್ಟು ಅದರ ಸಾಮರ್ಥ್ಯ ಹೆಚ್ಚುತ್ತಲೇ ಹೋಗುತ್ತದೆ. ಅದರ ವಿನಾಶವ ದೂರವಾಗುತ್ತಲೇ ಹೋಗುತ್ತದೆ.

ಇದಲ್ಲದೆ, ನಾವು ಪ್ರತಿಬಾರಿ ನಮ್ಮ ಆತ್ಮಬಲವನ್ನು ಎದುರಾಳಿಯ ಮೇಲೆ ಪ್ರಯೋಗಿಸಿದಾಗ ಅದು ಕರ್ಮದ ಫಲವನ್ನು ಬಿತ್ತುತ್ತದೆ. ಅದರ ಪರಿಣಾಮವಾಗಿ ಉಂಟಾಗುವ ಪ್ರತಿಫಲವನ್ನು ನಿಯಂತ್ರಿಸಲು ನಮ್ಮಲ್ಲಿ ಯಾವ ಸಾಮರ್ಥ್ಯವೂ ಉಳಿಯುವದಿಲ್ಲ. ಉದಾಹರಣೆಗೆ: ವಸಿಷ್ಠರು ತಮ್ಮನ್ನು ಹಿಂಸಿಸಲೆಂದು ಬಂದ ವಿಶ್ವಾಮಿತ್ರ ಮತ್ತು ಹೂಣರು, ಶಾಕರು ಹಾಗೂ ಪಲ್ಲವರ ಸೈನ್ಯದ ಮೇಲೆ ಆತ್ಮಬಲವನ್ನು ಬಳಸುತ್ತಾರೆ. ಹೀಗೆ ಸೌಮ್ಯ–ನಿರ್ಲಿಪ್ತನಾದ ವ್ಯಕ್ತಿಯೋರ್ವನು ಹಿಂಸೆ ಮತ್ತು ಆಕ್ರಮಣಶೀಲರಾದ ದುಷ್ಟಶಕ್ತಿಗಳ ವಿರುದ್ಧ ವೈಶ್ವಿಕ ಶಕ್ತಿಗಳನ್ನೇ ಪ್ರತೀಕಾರಕ್ಕಾಗಿ ಜಾಗೃತಗೊಳಿಸುತ್ತಾನೆ. ಅಸುರೀ ಶಕ್ತಿಗಳ ಪ್ರತಿನಿಧಿಗಳಾಗಿ ದುಷ್ಟತನವನ್ನೇ ಮೈಗೂಡಿಸಿಕೊಂಡರು ಒಂದಲ್ಲ ಒಂದು ದಿನ ಘೋರತರವಾಗಿ ಅಂತ್ಯವನ್ನು ಕಾಣುತ್ತಾರೆ. ಅಂದು ಅವರ ನಾಶವು ಅತೀ ಭೀಕರವೂ–ದಾರುಣವೂ ಆಗಿರುತ್ತದೆ. ಆದರೆ, ಅಲ್ಲಿಯವರೆಗೂ ಅವರನ್ನು ಹಾಗೇಯೇ, ಅವರ ದುಷ್ಟ ಮಾರ್ಗದಲ್ಲಿಯೇ ಚಲಿಸಲು ಬಿಡುವುದು ಕರುಣಾಜನಕ. ಒಂದು ಅವರನ್ನು ಆ ಮಾರ್ಗದಿಂದ ಹಿಂಸರಿಯುವಂತೆ ಪ್ರೇರೇಪಿಸಬೇಕು. ಇಲ್ಲ, ಅವರನ್ನು ಆ ದಾರುಣ–ಯಾತನಾಮಯವಾಗಿ ಅಂತ್ಯದಿಂದ ಮುಕ್ತಗೊಳಿಸಿ ಸುಲಭ ನಾಶಕ್ಕೆ ಒಳಪಡಿಸಬೇಕು. ಈ ಯುದ್ಧ ಮತ್ತು ವಿನಾಶಗಳು ಈ ಜಗತ್ತಿನಿಂದ ದೂರವಾಗಬೇಕಾದರೆ, ಅವು ತಮ್ಮ ಕರ್ಮಬಂಧವನ್ನು ಕಳೆದುಕೊಂಡು ಶುದ್ಧಹಸ್ತರೂ–ಶುದ್ಧಾತ್ಮರೂ ಆಗಿರಬೇಕು. ಅದರ ಮೂಲವು ಮಾನವ ದೃಷ್ಟಿಯಿಂದ ಕಣ್ಮರೆಯಾಗಬೇಕು. ದುಷ್ಟತನದ ವಿರುದ್ಧ ಪ್ರತಿರೋಧವನ್ನು ತೋರಲು ಇಷ್ಟವಿಲ್ಲದ ಅಥವಾ ಅದನ್ನೆದುರಿಸಲು ಅಸಮರ್ಥವಾಗಿರುವ ಜಡತ್ವ–ನಿಶ್ಚಲತೆಗಳು ನಿಯತಿಯನ್ನೇ ಹಾಳುಗೆಡಹುತ್ತವೆ. ಜಡತ್ವ, ತಮಸ್ಸು, ನಿರ್ಲಿಪ್ತತೆಗಳು ರಾಜಸಕ್ಕಿಂತಲೂ ಭೀಕರವಾಗಿರುತ್ತವೆ. ಏಕೆಂದರೆ, ರಾಜಸವು ನಾಶಪಡಿಸುವ

ದ್ರವ್ಯಗಳಿಗಿಂತಲೂ ಅದು ನಿರ್ಮಿಸುವ ದ್ರವ್ಯಗಳು ಹೆಚ್ಚಿನದಾಗಿರುತ್ತದೆ. ಆದರೆ, ನಮ್ಮ ನಿರ್ಲಿಪ್ತತೆಯು ಏನನ್ನೂ ಸೃಷ್ಟಿಸುವದಿಲ್ಲ. ಬದಲಿಗೆ ಅದರ ನಿಶ್ಚಲ ಪ್ರವೃತ್ತಿಯು ಅಸ್ತಿತ್ವದ ನಾಶಕ್ಕೆ ಕಾರಣವಾಗುತ್ತದೆ. ನಮ್ಮಲ್ಲಿರುವ ಯಾವ ಜಡ ಭಾವನೆಯು ನಮ್ಮನ್ನು ಯುದ್ಧದಿಂದ, ಹಿಂಸೆಯ ಪ್ರತಿರೋಧದಿಂದ ದೂರವಾಗಿರುವಂತೆ ಪ್ರಚೋದಿಸುತ್ತಿರುತ್ತದೆಯೋ ಕೇವಲ ನಿರ್ಲಿಪ್ತತೆಯನ್ನೇ ಸಾಧುವೆಂದು ಬಗೆದು ನಮ್ಮನ್ನು ಕೈಕಟ್ಟಿ ಕುಳಿತುಕೊಳ್ಳುವಂತೆ ಮಾಡುತ್ತದೆಯೋ ಅದು ನಮ್ಮ ನೈತಿಕ ಅಸ್ತಿತ್ವಕ್ಕೆ ಸಹಕಾರಿಯಾಗಬಹುದು. ಆದರೆ, ಅದು ಹೆಚ್ಚಾದರೆ ನಮ್ಮಲ್ಲಿರುವ ಸಂಹಾರಕ ಅಂಶವನ್ನೇ ಬತ್ತಿಸಿಬಿಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/42–43**

## ಯುದ್ಧ–ವಿನಾಶಗಳೇ ಸರ್ವಸ್ವವಲ್ಲ

ಯುದ್ಧ–ವಿನಾಶಗಳೇ ಸರ್ವಸ್ವವಲ್ಲ; ಈ ವಿಶ್ವದಲ್ಲಿ ಸಮನ್ವಯ–ಸಹಬಾಳ್ವೆಯ ಜೊತೆಜೊತೆಗೆ ದ್ವಂದ್ವ–ಕದನಗಳೂ ಇರುತ್ತವೆ; ಅಹಮಿಕೆಯಿಂದ ಉತ್ಪನ್ನವಾದ ಶಕ್ತಿಗಿಂತಲೂ ಪ್ರೇಮದಿಂದ ಸ್ಫುರಣವಾದ ಶಕ್ತಿಯು ಅಧಿಕತಮವಾದ ಸಾಮರ್ಥ್ಯವನ್ನು ಹೊಂದಿರುತ್ತದೆ. ಇತರರನ್ನು ನಮ್ಮ ಅನುಕೂಲಕ್ಕೆ ಬಗ್ಗಿಸಿಕೊಳ್ಳುವದರ ಜೊತೆಗೆ ಬೇರೊಬ್ಬರ ಅನುಕೂಲಕ್ಕಾಗಿ ನಾವು ತ್ಯಾಗ ಮಾಡುವ ಪ್ರಮೇಯಗಳೂ ಸಮಾನಾಂತರವಾಗಿ ಕಾರ್ಯನಿರ್ವಹಿಸುತ್ತಿರುತ್ತವೆ. ಆದರೆ, ಇವುಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಗಮನಿಸುವದಾದರೆ, ಅದು ನಮ್ಮ ವಿರುದ್ಧ ನಿಲ್ಲುವ ಶಕ್ತಿಯನ್ನು ನಿರ್ಲಕ್ಷಿಸುವದರ ಜೊತೆಗೆ ಅದರ ಕುರಿತಾಗಿ ಪ್ರಚೋದನೆ–ಗೊಳಪಡದೆ ನಿರ್ಲಿಪ್ತ ಭಾವನೆಯನ್ನು ಜಾಗೃತಗೊಳಿಸುತ್ತದೆ. ಆದರೆ, ಒಮ್ಮೊಮ್ಮೆ ಆ ವೈರುಧ್ಯಗಳ ಅಟಾಟೋಪವು ತಾರಕಕ್ಕೇರಿದಾಗ ನಮ್ಮ ಸ್ವಯಂ ರಕ್ಷಣೆಯ ಸೂತ್ರವನ್ನು ಹಿಡಿದು ಅದರ ವಿರುದ್ಧ ಸಿಡಿದೇಳುವ ಅಂತಃಶಕ್ತಿಯನ್ನೂ ಸಹ ತುಂಬುತ್ತದೆ. ಸಮನ್ವಯವು ನಮ್ಮ ಬದುಕನ್ನು ನಾಶಮಾಡಲು ಬರುವ ಶಕ್ತಿಗೆದುರಾಗಿ ನಿಂತು ಸ್ಪಧಿಸುವ ಯುದ್ಧ, ಅಹಮಿಕೆ ಮತ್ತು ಸ್ವ–ಗೌರವದ ಸೇವಕನಾಗಿದೆ. ಅದು ಸಮಯಕ್ಕೆ ತಕ್ಕಂತೆ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಇನ್ನು ಪ್ರೇಮವು ಮೃತ್ಯುವಿನೊಡನೆ ಸಮಾನಾಂತರವಾಗಿ ಚಲಿಸುವ ಶಕ್ತಿಯಾಗಿದೆ. ಮಾನವನ ಅಹಮಿಕೆಯಿಂದ ಜಾಗೃತವಾಗಿ ಇಳಿದು ಬರುವ ದಿವ್ಯ ಶಕ್ತಿ–ಭವ್ಯ ಶಕ್ತಿಗಳೇ ಕದನ, ರಕ್ತಪಾತ ಮತ್ತು ವಿನಾಶಕ್ಕೆ ಮೂಲಕಾರಣಗಳಾಗಿವೆ. ಇದಕ್ಕೆ ಅಪವಾದವೆಂಬಂತೆ

ಮಾನವನ ತ್ಯಾಗದ ಮನೋಭಾವನೆಯು ಅತ್ಯಂತ ಶ್ರೇಷ್ಠ ಮತ್ತು ಉದಾತ್ತವಾದ ಭೂಮಿಕೆಗಳಾಗಿವೆ. ಆದರೆ, ಅದರ ಅತ್ಯುಚ್ಚ ಮಟ್ಟದಲ್ಲಿ ಅದು ಮಾನವನ ಅಭೀಪ್ಸೆಗಳನ್ನು ಕೈಗೂಡಿಸಿಕೊಳ್ಳಲು ಮೃತ್ಯುವಿನೆದುರು ಅವನನ್ನು ಮಣಿಯುವಂತೆ ಮಾಡುತ್ತದೆ. ಸಾವಿನ ಬಲಿಪೀಠದ ಮೇಲೆ ಅವನನ್ನು ಬಲಿಪಶುವಾಗಿ ಯೂಪಸ್ತಂಭಕ್ಕೆ ಬಿಗಿದು ಕಟ್ಟುತ್ತದೆ. ತನ್ನ ಮರಿಗಳ ರಕ್ಷಣೆಗೋಸ್ಕರ ಬೇಟೆಯಾಡಲೆಂದು ಬರುವ ವ್ಯಾಘ್ರದೆದುರು ನಿಂತು ಸಾವನ್ನೆದುರಿಸುವ ತಾಯಿ ಹಕ್ಕಿ, ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಪಂಚ ಪ್ರಾಣಗಳನೇ ಪಣಕಿಡುವ ದೇಶಭಕ್ತ, ಇವು ತ್ಯಾಗದ ಅತ್ಯುನ್ನತ ಉದಾಹರಣೆಗಳಾಗಿವೆ.

## ಇದೆಲ್ಲವೂ ಮಾತೃ ಸ್ವರೂಪವೇ ಆಗಿದೆ

ಅಸ್ತಿತ್ವದಲ್ಲಿರುವ ಪ್ರತಿಯೊಂದು ಕಣವೂ ಆ ದ್ರವ್ಯದ ಆರಂಭಿಕ ಕಣವೇ ಆಗಿರುವಂತೆ ತೋರಿಬರುತ್ತದೆ. ಆದರೆ, ಅದನ್ನು ಹೇಗೆ ಜಯಿಸಬೇಕೆಂಬುದು ಮಾತ್ರ ತಿಳಿದಿಲ್ಲ. ಏಕೆಂದರೆ, ಅದನ್ನು ಜಯಿಸಬೇಕಾದರೆ ಅದರ ಮೂಲಸ್ವರೂಪವನ್ನು ದರ್ಶಿಸಬೇಕಾಗುತ್ತದೆ. ಅದಕ್ಕೆ ಶಾಂತ–ನ್ಯಾಯಯುತವಾದ ದರ್ಶನಾಸಾಮರ್ಥ್ಯದ ಅವಶ್ಯಕತೆಯಿರುತ್ತದೆ. ಆ ದರ್ಶನಾಸಾಮರ್ಥ್ಯವನ್ನು ಸಂಪಾದಿಸಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಏಕೆಂದರೆ, ನಾವದನ್ನು ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡುತ್ತಿಲ್ಲ. ನಮ್ಮ ಗುರಿಯು ಏನೇ ಇರಲಿ, ಅದನ್ನು ದಕ್ಕಿಸಿಕೊಳ್ಳಲಿಕ್ಕಿರುವ ಪರಿಹಾರ ಯಾವುದೇ ಇರಲಿ, ಮೊದಲು ನಾವು ಅದರ ಮೂಲ ಸ್ವರೂಪವನ್ನು ಅರಿತುಕೊಳ್ಳಬೇಕು. ಪರಮಾಣುವಿನ ಮೂಲಸ್ವರೂಪವನ್ನು ಅರಿತುಕೊಳ್ಳುವದೆಂದರೆ ಪರತತ್ತ್ವವನ್ನು ಅರಿತುಕೊಳ್ಳುವುದೇ ಆಗಿದೆ. ಏಕೆಂದರೆ, ಪರಮಾಣು–ಪರತತ್ತ್ವಗಳು ಪರಸ್ಪರ ಬೇರೆ–ಬೇರೆಯಾಗಿಲ್ಲ. ಅವನ್ನು ಒಂದರಿಂದ ಇನ್ನೊಂದನ್ನು ಬೇರ್ಪಡಿಸಲು ಮತ್ತು ಈ ವಿಶ್ವದ ಅಸ್ತಿಭಾರಕ್ಕೆ ಕಾರಣನಾದ ವಿರಾಟ್ ಪುರುಷನಿಂದ ಈ ಸೃಷ್ಟಿ ನಿಯಮಗಳನ್ನು ಕಸಿದುಕೊಳ್ಳು ಸಾಧ್ಯವಿಲ್ಲ. ಇಷ್ಟಾದರೂ ಅಸಮರ್ಥರಾದ ನಾವು ಯಾವುದೋ ರೂಪದಲ್ಲಿ ಸ್ವಯಂ–ಸಮಾಧಾನ ಹೊಂದಲು ಪ್ರಯತ್ನಿಸುತ್ತಿರುತ್ತೇವೆ. ಅದರ ಒಂದು ಭಾಗವಾಗಿ ಆ ಸೃಷ್ಟಿಕರ್ತ ಭಗವಂತನನ್ನು ಪ್ರೇಮ–ಕಾರುಣ್ಯದ ದೈವ; ಒಳ್ಳೆಯ ದೈವ; ನ್ಯಾಯಯುತ–ಸದ್ಗುಣಶೀಲ ದೈವ; ನೀತಿವಂತ ದೈವವೆಂದು ವಿಭಾಗಿಸಿ ಈ ಗುಣಲಕ್ಷಣಗಳಿಂದ ಹೊರಗುಳಿದ ಅವನ ಅಸ್ತಿತ್ವದ ಅನಂತ ಸ್ವರೂಪಗಳನ್ನು ದೈವವಲ್ಲವೆಂದೂ, ಅದು ಪೈಶಾಚಿಕ ಶಕ್ತಿಯಿಂದ ರೂಪುಗೊಂಡ

ದುಷ್ಟ ಕಾರ್ಯಗಳನ್ನು ಮಾಡುವ ಅನೃತ ಶಕ್ತಿಯೆಂದೂ ಕರೆದುಬಿಡುತ್ತೇವೆ. ಪ್ರಕಾಶದ ಅಧಿದೈವತನಾದ ಅಹುರ್ ಮಜ್ದಾನ ವಿರುದ್ಧ ಕತ್ತಲೆಯನ್ನು ಕರೆಸುವ ವಿನಾಶಕಾರಿ ವಿಧ್ವಂಸಕನಾದ ಅಹ್ರಿಮಾನ್‌ನು ಮೂಲತಃ ಪರಿಪೂರ್ಣವಾಗಿದ್ದ ವೈಶ್ವಿಕ ಶಕ್ತಿಯನ್ನು ಹಾಳುಗೆಡಹುತ್ತಾನೆ. ಆ ಪಾಪದ ಫಲವೇ ಪ್ರವಾಹ ರೂಪದಲ್ಲಿ ಹರಿದುಬಂದು ಮಾನವನಲ್ಲಿ ಸ್ವಾರ್ಥ–ಪಾಪಿ ಭಾವನೆಯನ್ನು ತುಂಬುತ್ತಿದೆ. ಮನುಷ್ಯನು ಪ್ರಾಣಿ ಜಗತ್ತಿನಲ್ಲಿ ಸೃಜಿಸಿದ ಸಾವು ಮತ್ತು ಭಕ್ಷಣೆಯ ಸಾಮಾನ್ಯ ನಿಯಮಕ್ಕೂ ಪ್ರಕೃತಿಯು ತಾ ಸೃಜಿಸಿದ ಪ್ರಪಂಚವನ್ನು ಮತ್ತೆ ವಿನಾಶದೊಳು ನೂಕುವ ವಿಶ್ವ ನಿಯತಿಗೂ ಯಾವುದೇ ವ್ಯತ್ಯಾಸವಿಲ್ಲ. ಈ ಸೃಷ್ಟಿ–ಸ್ಥಿತಿ–ಲಯಕಾರಕವಾದ ನಿಗೂಢ ವಿಶ್ವ ಶಕ್ತಿಯು ಏಕಮೇವ ಭಗವಂತನ ತ್ರಿಮೂರ್ತಿ ರೂಪದಲ್ಲಿ ಈ ಜಗತ್ತನ್ನು ನಡೆಸುತ್ತಿವೆ ಎಂಬ ಸತ್ಯವನ್ನು ಪ್ರಚುರಪಡಿಸಿದ ಭಾರತೀಯ ತತ್ತ್ವವನ್ನು ಯಾವುದೇ ಭಯವಿಲ್ಲದೆ ಒಪ್ಪಿಕೊಂಡು ಅದನ್ನು ತಥಾವತ್ ಸ್ಫುರಿಸುವ ಧೈರ್ಯವು ಭಾರತವನ್ನು ಹೊರತುಪಡಿಸಿದ ಕೆಲವಾರು ವಿದೇಶಿ ಧರ್ಮಗಳಿಗೆ ಮಾತ್ರ ಸಾಧ್ಯವಿದೆ. ಈ ನಿಗೂಢ ವಿಶ್ವ ಶಕ್ತಿಯು ಕೃಪಾಳುವಾದ ದುರ್ಗೆಯ ರೂಪದಲ್ಲಿ ಮಾತ್ರವಲ್ಲದೆ, ರುದ್ರಭೀಕರವಾದ ಕಾಳಿಯ ರೂಪದಲ್ಲಿಯೂ ದರ್ಶನವೀಯುತ್ತದೆ. ಆ ಕಾಳಿಯು ತನ್ನ ರಕ್ತಮಯವಾದ ಭಯಾನಕ ನೃತ್ಯದ ಮೂಲಕ ಈ ವಿಶ್ವದಲ್ಲಿ ಜಾಗೃತವಾಗಿರುವ ಶಕ್ತಿಯ ಪ್ರತಿರೂಪವನ್ನು ಬಿಂಬಿಸುತ್ತಾಳೆ. “ಇವಳೂ ಕೂಡ ಮಾತೃ ಸ್ವರೂಪಳೇ ಆಗಿದ್ದಾಳೆ. ಇವಳೂ ಸಹ ಭಗವಂತನ ಅಂಶಾವತಾರಳೇ ಆಗಿದ್ದಾಳೆ. ನಿನ್ನಲ್ಲಿ ಶಕ್ತಿಯಿದ್ದರೆ ಇವಳನ್ನೂ ಪೂಜಿಸು!” ಎಂಬ ವಾಣಿಯನ್ನು ಸಾರುತ್ತಾಳೆ. ಹೀಗೆ ಪ್ರಾಮಾಣಿಕವೂ–ಧೈರ್ಯಶಾಲಿಯೂ ಆದ ಭಾರತೀಯ ಧರ್ಮವು ಇತರ ಧರ್ಮಗಳಿಗಿಂತ ಆಳವೂ–ವಿಶಾಲವೂ ಆದ ಆಧ್ಯಾತ್ಮಿಕತೆಯನ್ನು ರೂಪಿಸುವಲ್ಲಿ ಸಫಲವಾಗಿದೆ. ಏಕೆಂದರೆ, ಭಾರತೀಯ ಧರ್ಮದ ಆಧ್ಯಾತ್ಮಿಕ ಸ್ತರಕ್ಕೆ ಸತ್ಯವೇ ಅಡಿಪಾಯವಾಗಿದೆ. ಮತ್ತು ಧೈರ್ಯವೇ ಅದರ ಆತ್ಮವಾಗಿದೆ. “ತಸ್ಯೈ ಸತ್ಯಂ ಯಾತನಂ!”

**ಕುರುಕ್ಷೇತ್ರ ಯುದ್ಧವನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು**

ಯುದ್ಧ–ವಿನಾಶಗಳೇ ಈ ವಿಶ್ವದ ಆದಿ–ಅಂತ್ಯ(ಅಲ್ಫಾ–ಒಮೆಗಾ)ಗಳಲ್ಲ. ಸಮನ್ವಯವು ಯುದ್ಧಕ್ಕಿಂತ ಹಿರಿದಾದ ಅಸ್ತಿತ್ವವನ್ನು ಹೊಂದಿಲ್ಲ. ಪ್ರೇಮವು ಮೃತ್ಯುವಿಗಿಂತಲೂ ದಿವ್ಯವಾದ ಅಂಶವಾಗಿದೆ. ನಾವು ಆತ್ಮಬಲವನ್ನು ಭೌತಿಕ

ಬಲದಿಂದಲೂ, ಶಾಂತಿಯನ್ನು ಯುದ್ಧದಿಂದಲೂ, ಸಮನ್ವಯವನ್ನು ದ್ವಂದ್ವದಿಂದಲೂ, ಪ್ರೇಮವನ್ನು ವಿನಾಶದಿಂದಲೂ, ಸಮಷ್ಟಿಯನ್ನು ಅಹಮಿಕೆಯಿಂದಲೂ, ಮೃತ್ಯುವಿನಿಂದ ಅಮರತ್ವವನ್ನೂ ಗೆಲ್ಲಲು ಸಾಧ್ಯವಿಲ್ಲ. ಆ ಭಗವಂತನು ಕೇವಲ ಲಯಕಾರಕನಷ್ಟೇ ಅಲ್ಲ ಅವನು ಶ್ರೇಯ–ಪ್ರೇಯದ ಚಿದ್ವಿಲಾಸವನ್ನು ಹರಿಸುವ ಮಿತ್ರನಾಗಿದ್ದಾನೆ; ಅವನು ತ್ರಿಮೂರ್ತಿ ರೂಪದಲ್ಲಿ ನಮ್ಮಿಂದ ದೂರವಾಗಿ ನೆಲೆಸಿಲ್ಲ ಬದಲಿಗೆ ಅತಿಮಾನುಷ ಶಕ್ತಿಯ ರೂಪದಲ್ಲಿ ನಮಗೆ ಅತಿ ಹತ್ತಿರವಾಗಿ ನೆಲೆಸಿದ್ದಾನೆ; ಕಾಳಿಯು ರುದ್ರಭೀಕರ ರೂಪದಿಂದ ವಿನಾಶವನ್ನು ಪ್ರತಿನಿಧಿಸುವದರ ಜೊತೆಜೊತೆಗೆ ಪ್ರೇಮ ಮತ್ತು ಮಮತೆಯ ಮೂರ್ತಿಯಾದ ಮಾತೆಯ ಪ್ರತಿರೂಪಳೂ ಆಗಿದ್ದಾಳೆ; ಅವತಾರಿ ಕೃಷ್ಣನು, ಕುರುಕ್ಷೇತ್ರಕ್ಕೆ ಕಾರಣೀಭೂತನೂ, ದಿವ್ಯತೆಯ ಅಂಶವತಾರನೂ, ಮನುಕುಲದ ಮಾರ್ಗಪರಿಣಾಯಕನಾದ ಪಾರ್ಥಸಾರಥಿಯೂ, ಏಕಾತ್ಮಗಳನು ಪರಮಾತ್ಮದೆಡೆ ಮೊಗಮಾಡಿಸುವ ದೈವನೂ, ಜಂಗಮ ಜಿಷ್ಣುಗಳನು ಸ್ಥಾಣುವಿಷ್ಣುವಾಗಿಸುವ ಅಧಿಪತಿಯೂ ಆಗಿದ್ದಾನೆ. ಅವನು ನಮ್ಮನ್ನು ಕಲ್ಲು–ಮುಳ್ಳುಗಳ ಹಾದಿಯಲ್ಲೇ ನಡೆಸುತ್ತಿರಲಿ, ಕದನ–ಕೋಲಾಹಲಗಳ ಸುಳಿಯೊಳಗೆ ಮುಳುಗೇಳಿಸುತಲಿರಲಿ, ದ್ವಂದ್ವ–ಗೊಂದಲಗಳ ಮೂಲಕವೇ ಹೆಜ್ಜೆಯಿರಿಸುತ್ತಿರಲಿ ಒಟ್ಟಿನಲ್ಲಿ ಅವನು ನಮ್ಮನ್ನು ಈ ವಿಶ್ವದ ಅತೀಂದ್ರಿಯ ಮೂಲದೆಡೆಗೆ, ಆ ದಿವ್ಯತೆಯ ಅಂತಿಮ ಆರೋಹಣ ತಾಣದೆಡೆಗೆ ಕರೆದೊಯ್ಯುತ್ತಾನೆ. ಆ ಅತೀಂದ್ರಿಯ ಸ್ತರವು ಹೇಗಿದೆ? ಅದರ ಮೂಲವೆಲ್ಲಿ? ಅದನ್ನು ತಲುಪಲಿಕ್ಕಿರುವ ಮಾರ್ಗವಾವುದು? ಇವೆ ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾದರೆ, ಮೊದಲು ನಾವು ಈ ವಿಶ್ವವು ಹೇಗಿದೆಯೋ ಹಾಗೆಯೇ ಅದನ್ನು ಸಾಕ್ಷಾತ್ಕಾರಪಡಿಸಿಕೊಳ್ಳಬೇಕಿರುತ್ತದೆ. ಈ ವಿಶ್ವದ ಮೂಲರೂಪದೆದುರಿಗೆ ಮುಸುಕಿದ ಮಂಜಿನ ಪರದೆಯನ್ನು ಸರಿಸಬೇಕಿದೆ. ಆನಂತರವೇ ವಿಕಸನದ ನಿಃಶ್ರೇಣಿಯ ಮಾರ್ಗವು ತಾನೇತಾನಾಗಿ ತೆರೆದುಕೊಳ್ಳುತ್ತದೆ. ಇದನ್ನು ಸಂಪಾದಿಸಲು ನಾವು ಕುರುಕ್ಷೇತ್ರದ ನೀತಿಯನ್ನು ಒಪ್ಪಿಕೊಳ್ಳಲೇಬೇಕು; ನಾವು ಚಿರಂತನತ್ವವನ್ನು ಪಡೆಯಲು ಮೃತ್ಯುವಿನ ನಿಯತಿಗೆ ತಲೆಬಾಗಲೇಬೇಕು; ನಮ್ಮ ಜೀವನ–ಮರಣಗಳ ಜ್ಞಾನವನ್ನು ಹೊಂದಲು ಅರ್ಜುನನ ರೀತಿ ಅಂತಃಚಕ್ಷುವಿನಿಂದ ಕಾಣ್ಕೆಯನ್ನು ದರ್ಶಿಸುವ ಸಾಮರ್ಥ್ಯವನ್ನು ಹೊಂದಬೇಕು. ಮತ್ತು ನಮ್ಮ ಅಂತರಾತ್ಮಾಯನದ ಧ್ವನಿಯಿಂದ ಆ ಭಗವಂತನ ಕುರಿತು ಮೊರೆಯಬೇಕು, ಆಗಮಾತ್ರ ಆ ಸೃಷ್ಟಿಕಾರನು ತನ್ನ ವಿಶ್ವ ರೂಪವನ್ನು ತೆರೆದು ತೋರುತ್ತಾರೆ. ಅವನ ದಿವ್ಯ ವಾಣಿಯನ್ನು ಸ್ಫುರಿಸುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/43–46 – ಶ್ರೀ ಅರವಿಂದರು**

## ರುದ್ರನ ಋಣಭಾರ

*ಶ್ರೀ ಅರವಿಂದರು ತಮ್ಮ ಗೀತಾ ಪ್ರಬಂಧದಲ್ಲಿ, "ರುದ್ರನ ಋಣಭಾರವನ್ನು ತೀರಿಸುವವರೆಗೂ ವಿಷ್ಣುವಿನ ನಿಯಮವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ" ಎಂದು ಹೇಳಿದ್ದಾರೆ.*

*ಇದರ ಅರ್ಥವೇನು ಶ್ರೀಮಾತೆ? ಪ್ರಸ್ತುತ ಭಾರತದ ಪರಿಸ್ಥಿತಿಯು ನಾವು ಭರಿಸಬೇಕಿರುವ ರುದ್ರನ ಋಣಭಾರದ ಪ್ರತೀಕವಾಗಿದೆಯೇ?*

ಸದ್ಯದ ಪರಿಸ್ಥಿತಿಗೆ ಕಾರಣವೇನೆಂದು ಕೇಳುವವರಿಗಾಗಿ ನಾನು ಈ ಮುಂಚಿತವಾಗಿಯೇ ಸಿದ್ಧಪಡಿಸಿದ ಸಂದೇಶವನ್ನು ನಿಮ್ಮ ಅವಗಾಹನೆಗಾಗಿ ಇಲ್ಲಿ ಇಡುತ್ತಿದ್ದೇನೆ. ನಿಮ್ಮ ಪ್ರಶ್ನೆಗೆ ಅದರಲ್ಲಿ ಉತ್ತರವನ್ನು ಕಂಡುಕೊಳ್ಳಬಹುದು.

ಮನುಷ್ಯನ ಹೃದಯವು ಶಾಂತಿಯನ್ನು ಧಾರಣೆ ಹೊಂದಲು ಯೋಗ್ಯವಾಗುವವರೆಗೂ ಅದರೊಳಗೆ ಸತ್ಯ ಶಾಂತಿಯು ಇಳಿದು ಬರಲು ಸಾಧ್ಯವಿಲ್ಲ; ರುದ್ರನ ಋಣಭಾರವನ್ನು ತೀರಿಸುವವರೆಗೂ ವಿಷ್ಣುವಿನ ನಿಯಮವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ. ಹಾಗಾದರೆ, ಇನ್ನೂ ವಿಕಸನದ ಹಂತದಲ್ಲಿಯೇ ಇರುವ ಮನುಕುಲಕ್ಕೆ ಪ್ರೇಮ ಮತ್ತು ಸಮನ್ವಯದ ನಿಯಮವನ್ನು ಬೋಧಿಸುವುದು ಹೇಗೆ? ಅದಕ್ಕಾಗಿ ನಮಗೆ ಪ್ರೇಮ ಮತ್ತು ಸಮನ್ವಯದ ಪಾಠವನ್ನು ತೀಡುವ ಗುರುಗಳ ಅವಶ್ಯಕತೆಯಿದೆ. ಅವರ ಬೋಧನೆಯ ಮಾರ್ಗದಲ್ಲಿ ನಡೆದು ಆ ಅಂತಿಮ ಮೋಕ್ಷ ಪಥವನ್ನು ಹೊಂದಬೇಕು. ಆದರೆ, ಮರ್ತ್ಯದಲ್ಲಿ ಮಡಗಿರುವ ಕಾಲದ ಆತ್ಮವು ಪರಿಪೂರ್ಣವಾಗಿ ಸಿದ್ಧವಾಗುವವರೆಗೆ ನಮ್ಮ ಆಂತರ್ಯ ಮತ್ತು ಬಾಹ್ಯ ಅಸ್ತಿತ್ವಗಳು ತತ್‌ಕ್ಷಣದ ಗೆಲುವನ್ನು ಹೊಂದಲು ಸಾಧ್ಯವಿಲ್ಲ. ಇದನ್ನು ಸಾಧಿಸಲೆಂದೇ ಕ್ರಿಸ್ತ–ಬುದ್ಧರುಗಳು ಬಂದು ಹೋಗಿದ್ದಾರೆ. ಇಷ್ಟಾದರೂ ರುದ್ರನು ಮಾತ್ರ ಇನ್ನೂ ಈ ವಿಶ್ವವನ್ನು ತನ್ನ ಕೈಯಲ್ಲೇ ಇಟ್ಟುಕೊಂಡಿದ್ದಾನೆ. ಹಾಗೂ ಅಹಮಿಕೆಯ ಶಕ್ತಿಯಿಂದ ಪ್ರೇರಿತರಾದವರು ಮತ್ತು ಆ ಅಹಮಿಕೆಯ ಸೇವಕರಾಗಿ ದುಡಿಯುವ ಅನೃತಗಳು ಮಾನವ ಕುಲವನ್ನು ಉಗ್ರವಾಗಿ ಹಿಂಸಿಸುತ್ತಲೇ ಇದೆ. ಜೊತೆಗೆ ಆ ಅನೃತದ ವಿರುದ್ಧ ಸೆಟೆದೆದ್ದ ಸಾಹಸಿಗಳ ಕತ್ತಿಯು ಝಳಪಿಸುತ್ತಲೇ ಇದೆ. ಆ ಅನೃತದ ವಿರುದ್ಧ ಧ್ವನಿಯೆತ್ತಿದ ದ್ರಷ್ಟಾರರ ಕೂಗು ಮೊಳಗುತ್ತಲೇ ಇದೆ. ಈ ದ್ವಂದ್ವವು ಚಿರಂತನವಾಗಿ ನಡೆಯುತ್ತಲೇ ಇದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/364** **– ಶ್ರೀಮಾತೆ**

# ಯುದ್ಧ ಮತ್ತು ಭಗವದ್ಗೀತೆ

**– ಅನು: ಪುಟ್ಟು ಕುಲಕರ್ಣಿ**

## ಮಾನವ ಮತ್ತು ಜೀವನದ ಹೋರಾಟ

ಈ ರೀತಿಯಾಗಿ, ಭಗವದ್ಗೀತೆಯ ಸಾರ್ವಕಾಲಿಕವಾಗಿರುವ ಉದಾರತೆಯ ಆಧಾರದಲ್ಲಿ ಗಮನಿಸುವದಾದರೆ ಮತ್ತು ಸ್ವೀಕರಿಸಬೇಕಾದರೆ, ಅದರಲ್ಲಿ ರೂಪಿತಗೊಂಡಿರುವ ಸುಸ್ಪಷ್ಟ ದೃಷ್ಟಿಕೋನ ಮತ್ತು ವಿಶ್ವದ ಸ್ಪಷ್ಟ ಸ್ವರೂಪದ ಬಗೆಗೆ ಹಾಗು ಅದರ ಪ್ರಕ್ರಿಯೆಯನ್ನು ನಾವು ನಮ್ಮ ಚಿಂತನದಲ್ಲಿ ಗ್ರಹಿಸಿಕೊಳ್ಳಲು ಅತ್ಯಾವಶ್ಯವಾಗಿರುವ ಧೈರ್ಯವನ್ನು ಹೊಂದಿಯೇ ಇದನ್ನು ಸ್ವೀಕರಿಸಬೇಕಾಗುತ್ತದೆ.

ಕುರುಕ್ಷೇತ್ರದಲ್ಲಿ ಅರ್ಜುನನ ಸಾರಥಿಯಾಗಿರುವ ಈ ದೈವೀ ಪುರುಷನು ಸರ್ವ ಲೋಕಗಳ ಪ್ರಭುವಾಗಿ ಮತ್ತು ಅಸ್ತಿತ್ವದಲ್ಲಿರುವ ಸರ್ವ ಜೀವ–ಜಂತುಗಳ ಮಿತ್ರವಾಗಿ, ಜೊತೆಜೊತೆಗೆ ಸರ್ವಜ್ಞನೂ ಆಗಿ, ಎಲ್ಲಕ್ಕಿಂತ ಮುಖ್ಯವಾಗಿ ಮಾರ್ಗದರ್ಶಕನಾಗಿ ತನ್ನನ್ನೇ ತಾನು ಪ್ರಕಟಪಡಿಸಿಕೊಳ್ಳುತ್ತಾನೆ. ಅದೇ ಸಮಯದಲ್ಲಿಯೇ 'ಈ ಜನರ ವಿನಾಶವನ್ನೂ ರೂಪಿಸಿಕೊಂಡೇ ಜನಿಸಿರುವ ಕಾಲ ಪುರುಷ(ವಿನಾಶ ಪುರುಷ)ನಾಗಿ ಕಾಣುತ್ತಾನೆ.

ಹಿಂದೂ ಧರ್ಮದ ಸಾರವೇ ಆಗಿರುವ ಉದಾರತೆಯನ್ನು ಆಧರಿಸಿರುವ ಚೈತನ್ಯವನ್ನೇ ಅನುಸರಿಸುತ್ತಿರುವ ಗೀತೆಯು, ಇದನ್ನೇ ದೇವರು ಎಂದೂ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿದೆ. ಈ ವ್ಯವಸ್ಥೆಯಿಂದ ಯಾವುದೇ ವಾಮ ಮಾರ್ಗದಿಂದಾಗಲೀ ಅಥವಾ ಅನ್ಯ ಮಾರ್ಗದಿಂದಾಗಲೀ ಪಲಾಯನ ಗೈಯಲು ಯತ್ನಿಸುವದಿಲ್ಲ. ಲೋಕದ ಸಹಜ ಗುಣಧರ್ಮವಾಗಿರುವ ನಿಗೂಢತೆಯಿಂದ ನುಣುಚಿಕೊಳ್ಳಲೂ ಪ್ರಯತ್ನಿಸುವದಿಲ್ಲ. ನಾವು ಕಾಣುತ್ತಿರುವ ವಾಸ್ತವಿಕ ಅನುಭವಗಳನ್ನು ನೀಡುತ್ತಿರುವ ಸ್ಥಿತಿಯನ್ನು ಕೇವಲ ಕ್ರೂರ ಮತ್ತು ತಿರಸ್ಕಾರಪೂರ್ಣವಾಗಿರುವ ಸಂಗತಿಗಳಿಂದಲೇ ತುಂಬಿದೆ ಎಂದು ಮತ್ತು ಕೇವಲ ಯಾಂತ್ರಿಕವಾಗಿರುವ ಭೌತಿಕ ಶಕ್ತಿಯ ಪ್ರದರ್ಶನವಾಗಿದೆ ಎಂದು ಪರಿಗಣಿಸದಿದ್ದರೆ, ಅಥವಾ ಅಸ್ತಿತ್ವವೇ ಇಲ್ಲದ ಹಂತದಿಂದ ಜನಿತಗೊಳ್ಳುವ ಜೊತೆಗೆ ಆತ್ಮದ ನಿಷ್ಕ್ರಿಯಾವಸ್ಥೆಯಲ್ಲಿ ಜನಿತಗೊಳ್ಳುವ ಸ್ವಪ್ನಗಳ ವಿಕಾಸವೆಂದಾಗಲೀ ಮತ್ತು ಕೇವಲ ದುಃಸ್ವಪ್ನಗಳಲ್ಲಿ ಪ್ರತಿಫಲಿಸುವ ಭ್ರಮಾಪೂರಿತ ಕಲ್ಪನೆಗಳಂತೆ ಮತ್ತು ಅವುಗಳ ಯಾಂತ್ರಿಕ ಸ್ವರೂಪದ ಲೀಲೆಯಂತೆ ಪರಿಗಣಿಸದಿದ್ದರೆ, ಆಗ ಅದು ಯಾವುದೇ ರೀತಿಯಲ್ಲಿ ವಿಚಲನೆಗೆ ಒಳಗಾಗುವದಿಲ್ಲ.

ಬೇರೆ ಯಾವುದೇ ಕಾರಣದಿಂದಲೂ ಅಲ್ಲಿ ಪಾತ್ರವನ್ನು ಹೊಂದಿರುವದಿಲ್ಲ. ಗೀತೆಯೇ ಸಮ್ಮತಿಸಿರುವಂತೆ, ದೇವರ ಅಸ್ತಿತ್ವವನ್ನು – ಅತೀಂದ್ರಿಯದ ಅಸ್ತಿತ್ವವನ್ನು ಸ್ವೀಕರಿಸಿದರೆ, ಆಗ ದೇವನು, ಈ ಲೋಕದಲ್ಲಿಯೇ ಲೋಕಗಳನ್ನೂ ಸೃಷ್ಟಿಸುತ್ತಾ ತನ್ನನ್ನೂ ಪ್ರಕಟಗೊಳಿಸಿಕೊಳ್ಳುತ್ತಾನೆ. ಆದರೆ ಯಾವುದೇ ರೀತಿಯಲ್ಲಿಯೂ ಅವನು ಯಾವುದಕ್ಕೂ ದಾಸನಾಗಿರುವದಿಲ್ಲ, ತನ್ನ ಸೃಜನಾತ್ಮಕವಾಗಿರುವ ಚೇತನದ ಮೂಲಕ, ಪ್ರಕೃತಿ ಅಥವಾ ಶಕ್ತಿಯ (ಮಾಯಾ, ಪ್ರಕೃತಿ ಅಥವಾ ಶಕ್ತಿ) ದಾಸನೂ ಆಗಿರುವದಿಲ್ಲ. ಅವುಗಳಿಗೆಲ್ಲ ಒಡೆಯನಾಗಿರುತ್ತಾನೆ. ತನ್ನದೇ ನಿರ್ಮಿತಿಯಾಗಿರುವ ಈ ವಿಶ್ವವನ್ನು ಧಾರಣ ಮಾಡಿಕೊಂಡೇ, ಯೋಜನಾಬದ್ಧತೆಯಲ್ಲಿಯೇ – ನಿಯತಿಯಂತೆಯೇ – ತನ್ನದೇ ಆದ ಸ್ವರೂಪದ ಪ್ರಾಣಿ ಪ್ರಪಂಚ ಮತ್ತು ಮನುಷ್ಯ ಗಣ ಮತ್ತು ರಾಕ್ಷಸ ಕುಲಗಳ ಮೂಲಕ ಭ್ರಮಿತಗೊಳ್ಳುವದಿಲ್ಲ ಜೊತೆಗೆ ವಿಫಲತೆಯನ್ನೂ ಹೊಂದುವದಿಲ್ಲ. ಪ್ರಕಟಣಗೊಂಡಿರುವದೆಲ್ಲವೂ ಅವನದೇ ಅಭಿವ್ಯಕ್ತಿಯಾಗಿದ್ದು, ಮತ್ತು ಪ್ರತಿಯೊಂದಕ್ಕೂ ಜವಾಬ್ದಾರಿಯಾಗಿರುವಂತೆಯೇ ಇದ್ದರೂ, ಆ ಪ್ರಕಟಣೆಯೂ ಸ್ವಯಂ ಹೊಣೆಗಾರಿಕೆಯನ್ನು ಅರಿತುಕೊಂಡಿರಬೇಕು ಎನ್ನುವ ಆಂತರ್ಯದಲ್ಲಿಯೇ ನಿರ್ಮಿತಿಗೊಳಿಸಿರುತ್ತಾನೆ. ಇಂತಹ ಮಹತ್ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಅರಿತುಕೊಂಡೇ ಮಾನವನು ಸಂಪೂರ್ಣವಾಗಿ ವಿಶ್ವಾಸದಿಂದಲೇ ಕಾರ್ಯಾರಂಭ ಮಾಡಬೇಕಾಗುತ್ತದೆ.

ಶಕ್ತಿಶಕ್ತಿಗಳ ಪ್ರದರ್ಶನದಲ್ಲಿ ಮತ್ತು ಹೋರಾಟಗಳಲ್ಲಿ ರೂಪುಗೊಳ್ಳುತ್ತಿರುವ ಅಸ್ತವ್ಯಸ್ತತೆ, ಅವ್ಯವಸ್ಥೆ, ಗೂಢವಾಗಿರುವ ಅಸ್ಪಷ್ಟ ಬಲಗಳ ಜೊತೆಗೆ ಘರ್ಷಣೆ, ನಿತ್ಯ ನಿರಂತರವಾಗಿ ನಡೆಯುತ್ತಿರುವ ಪರಿವರ್ತನೆ–ಬದಲಾವಣೆಗಳು, ಇವೆಲ್ಲಕ್ಕೂ ಮುಖ್ಯವಾಗಿ ಸಾವಿನಿಂದ ಬದುಕಿ ಉಳಿಯುವ, ನೋವುಗಳಿಂದ ಮುಕ್ತರಾಗುವ, ದುಷ್ಟತನದಿಂದ ವಿನಾಶಕ್ಕೊಳಗಾಗುವ, ಸಂಕಟಗಳಿಂದ ಬೇಯುವ, ವಿನಾಶದಿಂದ ಸರ್ವ ದಿಕ್ಕುಗಳಿಂದಲೂ ಬೆದರಿಕೆಗೆ ಒಳಗಾಗುತ್ತಿರುವ ಈ ಜಗತ್ತಿನಲ್ಲಿ 'ಸ್ವತಃ' ತನ್ನನ್ನು ತಾನು ಕಂಡುಕೊಳ್ಳುವ ಮೂಲಕ ಜೊತೆಗೆ ಈ ಸ್ಥಿತಿಯಲ್ಲಿಯೇ ದೇವರ ಅಸ್ತಿತ್ವವೂ ಇದೆ ಎನ್ನುವದನ್ನು ವಿಶ್ವಾಸಪೂರ್ವಕವಾಗಿ ಸ್ವೀಕರಿಸುವ ಮೂಲಕ ಈ ನಿಗೂಢತೆಯನ್ನು ಸ್ವೀಕರಿಸಬೇಕಾಗುತ್ತದೆ. ಇಷ್ಟೆಲ್ಲಾ ಇದ್ದರೂ ಇಲ್ಲಿಯೇ ಪರಿಹಾರವೂ ಇರುತ್ತದೆ ನಮ್ಮ ಅಜ್ಞಾನದ ಸ್ಥಿತಿಯಲ್ಲಿಯೂ ಸಹಿತ ಅದನ್ನು ಮೀರಿ, 'ಪರಿಸ್ಥಿತಿಯನ್ನು ಸಮಾಧಾನಗೊಳಿಸುವ ವಿಶೇಷ ಪ್ರಜ್ಞಾನವನ್ನು ಅವನು ಹೊಂದಿದ್ದಾನೆ. ಅದಕ್ಕಾಗಿ ಅವನು ಸೂಕ್ತವಾದ ನಿಲುವನ್ನೂ ನಿರ್ಣಯವನ್ನೂ ತೆಗೆದುಕೊಳ್ಳಬೇಕು.' ಈ

ವಿಶ್ವಾಸವನ್ನು ಹೊಂದಿದ್ದೇ ಆದಲ್ಲಿ, ದೇವನಿಗೂ ಸಹಿತ, 'ನೀನು ನನ್ನನ್ನು ಕೊಂದರೂ ಸಹಿತ ನಿನ್ನಲ್ಲಿ ನನಗೆ ಅಚಲ ವಿಶ್ವಾಸವಿದೆ' ಎನ್ನುವ ನಿಲುವಿನಿಂದ ದೂರವಾಗಬಾರದು. ಇದು ಸಂಪೂರ್ಣವಾಗಿ ಶರಣಾಗತಿಯನ್ನು ಹೊಂದಿರುವ ಆಸ್ತಿಕ ಮನೋಭಾವದ ಆತ್ಮವಿಶ್ವಾಸವಾಗಲೀ ಅಥವಾ ನಂಬಿಕೆ ಮತ್ತು ಸಕ್ರಿಯ ದೃಢತೆಯಲ್ಲಿ ಸರ್ವ ಧರ್ಮಗಳ ಸಮನ್ವಯದಲ್ಲಿ ರೂಪಣೆಗೊಂಡಿರುವ ಚಿಂತನಾ ವಿಕಾಸದಲ್ಲಾಗಲಿ ಅಲ್ಲದೇ ನಾಸ್ತಿಕ ಮನೋಭೂಮಿಕೆಯಲ್ಲಿ ಇದ್ದರೂ ಸಹಿತ ಇಲ್ಲಿ ಯಾವುದೇ ವ್ಯತ್ಯಾಸವು ನಿರ್ಮಾಣಗೊಳ್ಳುವದಿಲ್ಲ. ಇದು ಎಲ್ಲವನ್ನೂ ಎಲ್ಲರನ್ನೂ ಎಲ್ಲ ಕಾಲಕ್ಕೂ ಸಮತೆಯಲ್ಲಿಯೇ ಸ್ವೀಕರಿಸುವ ಹಂತವಾಗಿರುತ್ತದೆ. ಅಪ್ಪಿಕೊಳ್ಳುತ್ತದೆ. ಒಪ್ಪಿಕೊಳ್ಳುತ್ತದೆ. ಪ್ರಪಂಚದಲ್ಲಿ ರೂಪುಗೊಂಡಿರುವ ಅಪಶ್ರುತಿಗಳು, ದೇವರ ಕುರಿತು ರೂಪಣೆಗೊಂಡಿರುವ ಉನ್ನತೋನ್ನತವಾಗಿರು ಚಿಂತನಾಸರಣಿಗಳು ತತ್ತ್ವಗಳು ಅಥವಾ ಪ್ರಕೃತಿಯಲ್ಲಿ ಸಂಪೂರ್ಣ ಭಕ್ತಿಪೂರ್ವಕವಾಗಿ ಸಮರ್ಪಣೆಗೊಳ್ಳುವದು ವಿಶ್ವಾಸವಿಡುವದು ಮತ್ತು ಈ ಮೂಲಕ ಸಮನ್ವಯಗೊಳ್ಳಲು ಅನುಕೂಲ ಒದಗುತ್ತದೆ. ಈ ರೀತಿಯ ಎಲ್ಲ ಮೂರೂ ಹಂತಗಳನ್ನು ಏಕಕಾಲಕ್ಕೇ ನಿರ್ವಹಿಸಿ ಜಯವನ್ನು ಸಾಧಿಸಲು ಮಾರ್ಗ ರೂಪಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/47–48**

## ಯುದ್ಧ ಮತ್ತು ಶಾಂತಿ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

### ಯುದ್ಧದ ಅನಿವಾರ್ಯತೆ

*ಪೃಥ್ವಿಯ ವಿಕಸನಕ್ಕೆ ಈ ಎಲ್ಲ ಯುದ್ಧಗಳು ಅನಿವಾರ್ಯವೆ?*

ಮಾನವ ವಿಕಾಸದ ಒಂದು ಹಂತದಲ್ಲಿ ಯುದ್ಧಗಳು ಅನಿವಾರ್ಯವಾಗಿವೆ. ಇತಿಹಾಸಪೂರ್ವ ಸಮಯದಲ್ಲಿ ಇಡೀ ಜೀವನವು ಒಂದು ಯುದ್ಧವಾಗಿತ್ತು; ಮತ್ತು ವರ್ತಮಾನ ಕಾಲದವರಗೆ ಮಾನವ ಇತಿಹಾಸವು ಯುದ್ಧಗಳ ಒಂದು ದೀರ್ಘವಾದ ಇತಿಹಾಸವಾಗಿದೆ. ಯುದ್ಧಗಳು, ಜೀವನದ ಹೋರಾಟಗಳಿಂದ ಮತ್ತು ಅಹಂಕಾರಿಕ ಆಕ್ರಮಣಶೀಲತೆಯಿಂದ ನಿಯಂತ್ರಿಸಲ್ಪಟ್ಟ ಪ್ರಜ್ಞೆಯ ಒಂದು ಸ್ಥಿತಿಯ ಸಹಜ ಪರಿಣಾಮಗಳಾಗಿವೆ. ಮತ್ತು ಪ್ರಸ್ತುತ ಸಮಯದಲ್ಲಿ, ಶಾಂತಿಯೆಡೆಗಿನ ಮಾನವ ಪ್ರಯತ್ನಗಳ ಹೊರತಾಗಿಯೂ, ಇನ್ನು ಮುಂದೆ, ಯುದ್ಧವು ಒಂದು ತಪ್ಪಿಸಲಾಗದ

ದುರಂತವಲ್ಲ ಎನ್ನುವ ಭರವಸೆಯನ್ನು ನೀಡುವಂಥದ್ದು ಅಲ್ಲಿ ಯಾವುದೂ ಇಲ್ಲ. ವಾಸ್ತವವಾಗಿ, ಈ ಕ್ಷಣದಲ್ಲಿ, ಜಗತ್ತಿನ ಹಲವು ಭಾಗಗಳಲ್ಲಿ, ಯುದ್ಧದ ಸ್ಥಿತಿಯು (ಎಲ್ಲರಿಗೂ ತಿಳಿದಿರುವ ಅಥವಾ ಶೀತಲ) ಅಸ್ತಿತ್ವದಲ್ಲಿವೆ?

ಜೊತೆಗೆ, ಪ್ರಥ್ವಿಯ ಮೇಲೆ ಸಂಭವಿಸುವುದೆಲ್ಲವೂ ಅದರ ಪ್ರಗತಿಯೆಡೆಗೆ ಅಗತ್ಯವಾಗಿ ಒಯ್ಯುತ್ತದೆ. ಹಾಗಾಗಿ ಯುದ್ಧಗಳು, ಧೈರ್ಯದ, ತಾಳ್ಮೆಯ, ಅಭಯತೆಯ ಪರಂಪರೆಗಳಾಗಿವೆ; ಅದರ ಸಮಯ ಮುಗಿದಿದ್ದರೂ ಅದು ಕಣ್ಮರೆಯಾಗಲು ನಿರಾಕರಿಸುವಂಥ ಭೂತವನ್ನು ನಾಶಮಾಡಲು ಅವುಗಳು ಸಹಾಯ ಮಾಡಬಹುದು, ಮತ್ತು ಅವುಗಳು ಹೊಸ ವಿಷಯಗಳಿಗೆ ಅವಕಾಶ ಮಾಡಿಕೊಡುತ್ತವೆ. ಕುರುಕ್ಷೇತ್ರದ ಯುದ್ಧದಂತೆ, ಯುದ್ಧಗಳು, ದರ್ಪ ತೋರುವ ಅಥವಾ ವಿನಾಶಕಾರಿ ಜನಾಂಗದಿಂದ ಭೂಮಿಯನ್ನು ಪಾರುಮಾಡುವ ಒಂದು ಮಾರ್ಗವಾಗಬಹುದು. ಹಾಗಾದಾಗ, ನ್ಯಾಯ ಹಾಗೂ ಸತ್ಯಗಳು ಪೃಥ್ವಿಯನ್ನು ಆಳುವಂತಾಗಬಹುದು. ಅವುಗಳು, ಅಪಾಯದ ಉಪಸ್ಥಿತಿಯ ಮೂಲಕ, ತುಂಬಾ ತಾಮಸಿಕವಾದ ಪ್ರಜ್ಞೆಯ ಜಡತೆಯನ್ನು ಅಲ್ಲಾಡಿಸಬಹುದು ಮತ್ತು ಸುಪ್ತ ಶಕ್ತಿಗಳನ್ನು ಜಾಗೃತಗೊಳಿಸಬಹುದು. ಅಂತಿಮವಾಗಿ, ಇದಕ್ಕೆ ವ್ಯತಿರಿಕ್ತವಾಗಿ, ಮತ್ತು ಅವುಗಳೊಂದಿಗೆ ಬರುವ ಮತ್ತು ಅನುಸರಿಸುವ ಭೀಕರತೆಗಳಿಂದಾಗಿ, ಅಂತಹ ಅನಾಗರಿಕ ಮತ್ತು ಹಿಂಸಾತ್ಮಕ ರೂಪವನ್ನು ಅನಗತ್ಯವಾಗಿಸಲು ಪರಿಣಾಮಕಾರಿ ಮಾರ್ಗವನ್ನು ಹುಡುಕಲು ಮನುಷ್ಯರನ್ನು ಅವುಗಳು ಪ್ರೇರೇಪಿಸಬಹುದು.

ಭೂಮಿಯ ವಿಕಾಸಕ್ಕೆ ಅನಗತ್ಯವಾದ ಪ್ರತಿಯೊಂದೂ ತಾನಾಗಿಯೇ ಇಲ್ಲದಂತಾಗುತ್ತದೆ.

> *"ಅವುಗಳು (ಯುದ್ಧಗಳು), ಕಣ್ಮರೆಯಾಗಲು ನಿರಾಕರಿಸುವಂಥ ಭೂತವನ್ನು (ಅದರ ಸಮಯ ಮುಗಿದಿದ್ದರೂ) ನಾಶಮಾಡಲು ಸಹಾಯ ಮಾಡಬಹುದು, ಮತ್ತು ಅವುಗಳು ಹೊಸ ವಿಷಯಗಳಿಗೆ ಅವಕಾಶ ಮಾಡಿಕೊಡುತ್ತವೆ." ಈಗ ಪೃಥ್ವಿಯ ಮೇಲೆ ಅತಿಮಾನಸದ ಅವತರಣವಾಗಿರುವುದರಿಂದ, ಸದ್ಯದ ಜಗತ್ತಿನ ಸ್ಥಿತಿಯನ್ನು ಬದಲಾಯಿಸಲು ಯುದ್ಧದ ಅವಶ್ಯಕತೆ ಇದೆಯೆ? ಎಂದು ನೀವು ಬರೆದಿದ್ದೀರಿ.*

ಎಲ್ಲವೂ ದೇಶಗಳ ಗ್ರಹಣಶೀಲತೆಯ ಮೇಲೆ ಅವಲಂಬಿಸಿರುತ್ತದೆ. ಅವುಗಳು ಹೊಸ ಶಕ್ತಿಗಳ ಪ್ರಭಾವಕ್ಕೆ ವ್ಯಾಪಕವಾಗಿ ಹಾಗೂ ಕ್ಷಿಪ್ರವಾಗಿ ತೆರೆದುಕೊಂಡರೆ ಮತ್ತು ಅವುಗಳ

ಭಾವನೆಗಳಲ್ಲಿ ಹಾಗೂ ಕ್ರಿಯೆಗಳಲ್ಲಿ ಸಾಕಷ್ಟು ಕ್ಷಿಪ್ರವಾಗಿ ಅವುಗಳು ಬದಲಾವಣೆ ಹೊಂದಿದರೆ, ಯುದ್ಧವನ್ನು ತಪ್ಪಿಸಬಹುದು. ಆದರೆ ಅದು ಯಾವಾಗಲೂ ಹೆದರಿಸುವಂತಿರುತ್ತದೆ ಮತ್ತು ಯಾವಾಗಲೂ ತಾತ್ಕಾಲಿಕ ತಡೆಯಲ್ಲಿರುತ್ತದೆ; ಪ್ರತಿಯೊಂದು ದೋಷ, ಪ್ರಜ್ಞೆಯ ಪ್ರತಿಯೊಂದು ಮಸುಕಾಗುವಿಕೆಯು (ಯುದ್ಧದ) ಭೀತಿಯನ್ನು ಹೆಚ್ಚಿಸುತ್ತದೆ.

ಮತ್ತು ಕೊನೆಯ ವಿಶ್ಲೇಷಣೆಯಲ್ಲಿ ಎಲ್ಲವೂ ನಿಜವಾಗಿ ದೈವೀ ಅನುಗ್ರಹವನ್ನು ಅವಲಂಬಿಸಿರುತ್ತದೆ ಮತ್ತು ನಾವು ಆತ್ಮವಿಶ್ವಾಸ ಮತ್ತು ಪ್ರಶಾಂತತೆಯೊಂದಿಗೆ ಭವಿಷ್ಯದ ಕಡೆಗೆ ನೋಡಬೇಕು, ಅದೇ ಸಮಯದಲ್ಲಿ ನಮಗೆ ಸಾಧ್ಯವಾದಷ್ಟು ವೇಗವಾಗಿ ಪ್ರಗತಿ ಹೊಂದುತ್ತಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/52–53 – ಶ್ರೀಮಾತೆ**

## ಯುದ್ಧ ಮತ್ತು ಐಕ್ಯತೆ

ವಿಶ್ವ–ರಾಷ್ಟ್ರದ ರಚನೆಯ ಪ್ರವೃತ್ತಿಯಲ್ಲಿ, ಪ್ರಜ್ಞೆಯು ಎಷ್ಟೇ ಸುಪ್ತ, ಅಸ್ಪಷ್ಟ ಮತ್ತು ನಿರಾಕಾರವಾಗಿದ್ದರೂ, ಸೇನೆಯ ಅವಶ್ಯಕತೆಯು ಬೃಹತ್ತಾಗಿ ಗೋಚರವಾಗುಂಥ ಕೆಲಸವನ್ನು ಮಾಡಲು ಪ್ರಾರಂಭಿಸಿದೆ. ಪ್ರಪಂಚದ ಜನರು ಜೀವನದ ಶಿಥಿಲವಾದ ಮತ್ತು ಅಸ್ತವ್ಯಸ್ತವಾಗಿರುವ ಏಕತೆಯನ್ನು ಈಗಾಗಲೇ ಹೊಂದಿದ್ದಾರೆ, ಇದರಲ್ಲಿ ಯಾರೂ ಪ್ರತ್ಯೇಕವಾದ, ಸ್ವತಂತ್ರವಾದ ಮತ್ತು ಸ್ವ–ಅವಲಂಬಿತ ಅಸ್ತಿತ್ವವನ್ನು ಮುನ್ನಡೆಸಲು ಸಾಧ್ಯವಿಲ್ಲ. ಪ್ರತಿಯೊಬ್ಬನೂ ತನ್ನ ಸಂಸ್ಕೃತಿಯಲ್ಲಿ, ರಾಜಕೀಯ ಪ್ರವೃತ್ತಿಗಳಲ್ಲಿ ಮತ್ತು ಆರ್ಥಿಕ ಅಸ್ತಿತ್ವದಲ್ಲಿ, ವಿಶ್ವದ ಇತರ ಭಾಗಗಳಲ್ಲಿನ ಘಟನೆಗಳ ಮತ್ತು ಕ್ರಿಯೆಗಳ ಪ್ರಭಾವ ಮತ್ತು ಪರಿಣಾಮವನ್ನು ಅನುಭವಿಸುತ್ತಾನೆ. ಪ್ರತಿಯೊಬ್ಬನೂ, ಸೂಕ್ಷ್ಮವಾಗಿ ಅಥವಾ ನೇರವಾಗಿ, ಸಮಸ್ತದ ಜೀವನದಿಂದ ಮರೆಮಾಡಲ್ಪಟ್ಟ ಅದರ ಪ್ರತ್ಯೇಕ ಜೀವನವನ್ನು ಅನುಭವಿಸುತ್ತಾನೆ. ಪ್ರಬಲ ಪಶ್ಚಿಮದಿಂದ (ದೇಶಗಳು) ಏಷ್ಯಾ ಮತ್ತು ಆಫ್ರಿಕಾ ಖಂಡಗಳ ವಿಜ್ಞಾನ, ಅಂತರರಾಷ್ಟ್ರೀಯ ವಾಣಿಜ್ಯ ಮತ್ತು ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರವೇಶವು ಈ ದೊಡ್ಡ ಬದಲಾವಣೆಯ ಮಧ್ಯವರ್ತಿಗಳಾಗಿವೆ. ಈ ಬಂಧಮುಕ್ತ ಅಜ್ಞಾತ ಮತ್ತು ಅಂತರ್ನಿಹಿತ ಏಕತೆಯಲ್ಲಿಯೂ ಸಹ, ದೊಡ್ಡ ಯುದ್ಧಗಳ ಸಂಭವನೀಯತೆ ಅಥವಾ ಸಾಧ್ಯತೆಯು ಇಡೀ ಮಾನವ ಕುಲಕ್ಕೆ ಕ್ಷೋಭೆಯ ಒಂದು ಪ್ರಬಲ ಅಂಶವಾಗಿದೆ. ಒಂದು ದಿನ ಮಾನವ ಕುಲಕ್ಕೆ ಮಾರಣಾಂತಿಕ–ವಾಗಬಹುದಾದ ಕ್ಷೋಭೆಯು ಇದಾಗಿದೆ. ಯುರೋಪ ಯದ್ಧಕ್ಕಿಂತಲೂ ಮೊದಲು,

ಎಲ್ಲರಿಗೂ ಮಾರಕವಾಗಬಹುದಾದ ಒಂದು (ದೇಶದ) ಅಥವಾ ಎರಡು (ದೇಶಗಳ) ನಡುವಿನ ತಿಕ್ಕಾಟವನ್ನು ತಪ್ಪಿಸುವ ಅಥವಾ ಕಡಿಮೆಗೊಳಿಸುವ ಅವಶ್ಯಕತೆಯು ತೀವ್ರವಾಗಿ ಭಾವಿಸಲ್ಪಟ್ಟಿತು ಮತ್ತು ಉತ್ತಮ ಉದ್ದೇಶ ಹೊಂದಿದ ಆದರೆ ಅಶಕ್ತ ಹಾಗೂ ಪ್ರಮಾದವೆಸಗುವ ಯೋಜನೆಗಳನ್ನು ತಾತ್ಕಾಲಿಕವಾಗಿ (ಅಂತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು) ಪರಿಚಯಿಸಲಾಯಿತು. ಈ ಯಾವುದೇ ತಾತ್ಕಾಲಿಕಗಳು ಸಹನೀಯವಾಗಿ ಪರಿಣಾಮಕಾರಿಯಾಗಿದ್ದರೆ, ಪ್ರಪಂಚವು ಅದರ ಪ್ರಸ್ತುತ ಅತೃಪ್ತಿಕರ ಷರತ್ತುಗಳೊಂದಿಗೆ ದೀರ್ಘ ಕಾಲದವರೆಗೆ ಸಂತುಷ್ಟವಾಗಿ ಉಳಿದಿರಬಹುದಿತ್ತು ಮತ್ತು ನಿಕಟ ಅಂತರರಾಷ್ಟ್ರೀಯ ಸಂಘಟನೆಯ ತುರ್ತಾದ ಅಗತ್ಯತೆಯನ್ನು ಮನುಕುಲದ ಸಾಮಾನ್ಯ ಮನಸ್ಸಿನ ಮೇಲೆ ಬಲವಂತವಾಗಿ ಹೇರುತ್ತಿರಲಿಲ್ಲ. ಆದರೆ ಯುರೋಪಿಯನ್ ಘರ್ಷಣೆಯು ಹಳೆಯ ಅಸ್ತವ್ಯಸ್ತವಾಗಿರುವ ಆಡಳಿತದ ಅನಿರ್ದಿಷ್ಟ ಮುಂದುವರಿಕೆಯನ್ನು ಅಸಾಧ್ಯವನ್ನಾಗಿ ಮಾಡಿದೆ. ದುರಂತದ ಯಾವುದೇ ಪುನರಾವರ್ತನೆಯನ್ನು ತಪ್ಪಿಸುವ ಅವಶ್ಯಕತೆಯು ಒಂದು ಕಾಲಕ್ಕೆ ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟಿತ್ತು. ಅಂತರರಾಷ್ಟ್ರೀಯ ಶಾಂತಿಯನ್ನು ಉಳಿಸಿಕೊಳ್ಳುವ ಒಂದು ವಿಧಾನವನ್ನು ಮತ್ತು ಅಪಾಯಕಾರಿ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ವಿಲೇವಾರಿ ಮಾಡುವ ಅಧಿಕಾರವನ್ನು ಹೊಂದಿರುವಂಥ ಹಾಗೂ ಮಾನವ ಕುಲದ ಏಕತೆಯ ಹೊಸ ದೃಷ್ಟಿಕೋನದಿಂದ ಮಾನವ ಕುಲದ ನಡುವಿನ ಅಂತರ್ಯುದ್ಧವೆಂದು ನಾವು ಏನನ್ನು ಕರೆಯುತ್ತೇವೆಯೋ ಅದನ್ನು ತಡೆಯುವಂಥ ಒಂದು ಪ್ರಾಧಿಕಾರವನ್ನು ಹೇಗಾದರೂ ಸರಿ ಹುಟ್ಟುಹಾಕಬೇಕಾಗಿದೆ ಅಥವಾ ನಿರ್ಮಿಸಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/476**

**ಅಂತರರಾಷ್ಟ್ರೀಯ ಶಾಂತಿಯ ಷರತ್ತುಗಳು**

ಅಂತರರಾಷ್ಟ್ರೀಯ ಶಾಂತಿಗೆ ಬೇಕಾದ ಅವಶ್ಯಕ ಷರತ್ತುಗಳ ಕುರಿತು, ಹೆಚ್ಚು ಕಡಿಮೆ, ಅಧಿಕಾರಯುತವಾಗಿ, ಅನೇಕ ಕಲ್ಪನೆಗಳನ್ನು ಮಂಡಿಸಲಾಯಿತು. ಇವುಗಳಲ್ಲಿ ಅತ್ಯಂತ ಮೂರ್ಖತನದಿಂದ ಕೂಡಿದ್ದು ಏಕ ಪಕ್ಷೀಯ ಪ್ರಚಾರದಿಂದ ಸೃಷ್ಟಿಯಾದಂಥ ಭ್ರಮೆ. ಅದೇನೆಂದರೆ, ಜಗತ್ತಿನ ಭವಿಷ್ಯದ ಶಾಂತಿಯನ್ನು ಕಾಪಾಡಲು ಅವಶ್ಯವಾಗಿ ಬೇಕಾದ ಏಕೈಕ ಮತ್ತು ಪರ್ಯಾಪ್ತ ಸಂಗತಿ ಯಾವುದೆಂದರೆ, ಜರ್ಮನಿಯ ಸೈನ್ಯಾಡಳಿತದ ಸರ್ವನಾಶ ಎನ್ನುವ ಕಲ್ಪನೆ. ಸೈನಿಕ ಪ್ರಭಾವ, ಜರ್ಮನಿಯ ರಾಜಕೀಯ ಹಾಗೂ ವಾಣಿಜ್ಯ ಮಹತ್ವಾಕಾಂಕ್ಷೆಗಳು ಮತ್ತು ಅವಳ ಪರಿಮಿತ ಭೌಗೋಳಿಕ ಸ್ಥಾನದ

ತೀವ್ರ ಸಂವೇದನೆ ಹಾಗೂ ಸ್ನೇಹಪರವಲ್ಲದ ಮೈತ್ರಿಯಿಂದ ಅವಳ ಸುತ್ತುವರೆಯುಕೆಯು ಈ ವಿಶೇಷವಾದ ಯುದ್ಧದ ತಕ್ಷಣದ ನೈತಿಕ ಕಾರಣಗಳಾಗಿದ್ದವು; ಆದರೆ ನಿಜವಾದ ಕಾರಣ ಅಂತರರಾಷ್ಟ್ರೀಯ ಪರಿಸ್ಥಿತಿ ಮತ್ತು ರಾಷ್ಟ್ರೀಯ ಜೀವನದ ಮನೋವಿಜ್ಞಾನದಲ್ಲಿತ್ತು. ಈ ಮನೋವಿಜ್ಞಾನದ ಮುಖ್ಯ ಲಕ್ಷಣವೆಂದರೆ, ರಾಷ್ಟ್ರ ಭಕ್ತಿಯ ಪವಿತ್ರ ಹೆಸರಿನಡಿ ರಾಷ್ಟ್ರೀಯ ಆತ್ಮಪ್ರತಿಷ್ಠೆಯ ಪ್ರಾಬಲ್ಯ ಮತ್ತು ಆರಾಧನೆ. ಪ್ರತಿಯೊಂದು ರಾಷ್ಟ್ರೀಯ ಆತ್ಮವು, ಪ್ರತಿಯೊಂದು ಸುವ್ಯವಸ್ಥಿತ ಜೀವನದಂತೆ, ಎರಡು ವಿಧದ ಸ್ವಯಂ ನೆರವೇರಿಕೆಯನ್ನು ಬಯಸುತ್ತದೆ; ಆಳವಾದ ಮತ್ತು ವ್ಯಾಪಕ ಅಥವಾ ವಿಸ್ತಾರವಾದ ನೆರವೇರಿಕೆ. ಅದರ ಸಂಸ್ಕೃತಿಯ ವಿಸ್ತರಣೆ, ಅದರ ರಾಜಕೀಯ ವ್ಯಾಪ್ತಿಯ ಹೆಚ್ಚಳ, ಪ್ರಭುತ್ವ, ಶಕ್ತಿ ಅಥವಾ ಪ್ರಭಾವ ಮತ್ತು ಪ್ರಪಂಚದ ಅದರ ವಾಣಿಜ್ಯ ಶೋಷಣೆಯ ಅಗಾಧ ವಿಶಾಲತೆಯು ಇಲ್ಲದಿದ್ದರೆ ಅದರ ಗಡಿಯೊಳಗಿನ ಅದರ ಸಂಸ್ಕೃತಿ, ರಾಜಕೀಯ ಶಕ್ತಿ ಮತ್ತು ಆರ್ಥಿಕ ಸಮೃದ್ಧಿಯನ್ನು ಆಳವಾಗಿಸುವುದು ಮತ್ತು ಸಮೃದ್ಧಗೊಳಿಸುವುದು ಸಾಕಾಗುವುದಿಲ್ಲವೆಂದು ಭಾವಿಸಲಾಯಿತು. ಈ ಸಹಜ ಹಾಗೂ ಹುಟ್ಟು ಗುಣ ಬಯಕೆಯು ಒಂದು ಅಸಹಜ ನಡತೆಯ ಕುಸಿತವಲ್ಲ ಆದರೆ ಸ್ವಾರ್ಥಪರ ಜೀವನದ ಸಹಜ ಪ್ರವೃತ್ತಿಯಾಗಿದೆ; ಮತ್ತು ಪ್ರಸ್ತುತದಲ್ಲಿ ಯಾವ ಜೀವನವು ಸ್ವಾರ್ಥಪರ ಜೀವನವಾಗಿಲ್ಲ? ಆದರೆ ಅದನ್ನು ಶಾಂತಿಯುತ ಮತ್ತು ಆಕ್ರಮಣಕಾರಿಯಲ್ಲದ ಸಾಧನಗಳ ಮೂಲಕ ಒಂದು ಸೀಮಿತ ಪ್ರಮಾಣದವರೆಗೆ ಮಾತ್ರ ತೃಪ್ತಿಪಡಿಸಬಹುದು. ಮತ್ತು ಎಲ್ಲಿ ಅದು ತನ್ನನ್ನು ತಾನು ಜಯಿಸಬಹುದು ಎಂದು ಯೋಚಿಸುವ ಅಡ್ಡಿಗಳಿಂದ ತಡೆಯಲ್ಪಟ್ಟಿದೆ ಎಂದು ಭಾವಿಸುತ್ತದೆಯೋ, ತಡೆಗೋಡೆಗಳಿಂದ ವಿರೋಧಿಸಲ್ಪಟ್ಟಿದೆಯೋ, ಸುತ್ತುವರೆಯಲ್ಪಟ್ಟಿದೆಯೋ, ತನ್ನ ಅವಶ್ಯಕತೆಗಳಿಗೆ ಮತ್ತು ಶಕ್ತಿಗೆ ಅನುಗುಣವಾಗಿಲ್ಲ ಎಂದು ಭಾವಿಸುವ ಸ್ವಾಮ್ಯದ ಮತ್ತು ಒಡೆತನದ ಪಾಲಿನಿಂದ ಅಸಂತೃಪ್ತವಾಗಿದೆಯೋ, ಅಥವಾ ಅದಕ್ಕೆ ಎಲ್ಲಿ ವಿಸ್ತರಣೆಗೆ ಹೊಸ ಸಾಧ್ಯತೆಗಳು ಮುಕ್ತವಾಗಿವೆಯೋ ಅದರಲ್ಲಿ ಮಾತ್ರ ಅದರ ಶಕ್ತಿಯು ಅದಕ್ಕೆ ಬಯಸಿದ ಪಾಲನ್ನು ಪಡೆದುಕೊಳ್ಳಬಹುದು, ಅದು ತಕ್ಷಣ ಯಾವುದಾದರೂ ರೀತಿಯ ಬಲದ ಬಳಕೆಗೆ ಪ್ರೇರೇಪಿಸಲ್ಪಡುತ್ತದೆ ಮತ್ತು ಅದಕ್ಕೆ ಎದುರಾಗಬಹುದಾದ ಪ್ರತಿರೋಧದ ಪ್ರಮಾಣದಿಂದ ಮಾತ್ರ ನಿಯಂತ್ರಿಸಲು ಸಾಧ್ಯವಿದೆ. ಜಯಿಸಲು ಅದು ಅಸಂಘಟಿತ ಅಥವಾ ಕೆಟ್ಟದಾಗಿ–ಸಂಘಟಿತವಾದ ಜನರ ದುರ್ಬಲ ವಿರೋಧವನ್ನು ಹೊಂದಿದ್ದರೆ, ಅದು ಹಿಂಜರಿಯುವುದಿಲ್ಲ; ಅದು ಹೆದರಲು ಶಕ್ತಿಶಾಲಿ ಎದುರಾಳಿಗಳ ವಿರೋಧವನ್ನು ಹೊಂದಿದ್ದರೆ, ಅದು ತಾತ್ಕಾಲಿಕವಾಗಿ ನಿಲ್ಲುತ್ತದೆ, ಮೈತ್ರಿಗಳನ್ನು ಹುಡುಕುತ್ತದೆ ಅಥವಾ ತನ್ನ ಸಮಯಕ್ಕಾಗಿ ಕಾಯುತ್ತದೆ. ಈ ವಿಸ್ತಾರವಾದ

ಪ್ರವೃತ್ತಿ ಮತ್ತು ಸ್ವಾರ್ಥಪರತೆಯ ಏಕಸ್ವಾಮ್ಯವನ್ನು ಜರ್ಮನಿಯು ಹೊಂದಿರಲಿಲ್ಲ; ಆದರೆ ಅದರ ಸ್ವಾರ್ಥಪರತೆಯು ಅತ್ಯುತ್ತಮ ಸಂಘಟಿತ ಮತ್ತು ಕನಿಷ್ಠ ತೃಪ್ತಿಯುಳ್ಳದ್ದಾಗಿತ್ತು. ಮತ್ತು ಅದು ಅತ್ಯಂತ ಕಿರಿಯ, ಒರಟಾದ, ಅತಿ ಹಸಿವಿನಿಂದ ಬಳಲುತ್ತಿರುವ, ಅತ್ಯಂತ ಆತ್ಮವಿಶ್ವಾಸ ಮತ್ತು ಪ್ರತಿಷ್ಠೆಯ, ಅದರ ಬಯಕೆಗಳ ಸ್ವಯಂ–ನ್ಯಾಯಬದ್ಧ ಕ್ರೂರತೆಯ ಬಗ್ಗೆ ಹೆಚ್ಚು ತೃಪ್ತಿಯುಳ್ಳದ್ದಾಗಿತ್ತು. ಜರ್ಮನ್ ಸೈನಿಕ ಆಡಳಿತದ ತಡೆಯುವಿಕೆಯು, ಕೊಂಚ ಸಮಯದವರೆಗೆ, ಬಹುಮುಖ ವಾಣಿಜ್ಯ ಹೋರಾಟದ ತೀವ್ರತೆಯನ್ನು ಸ್ವಲ್ಪ ಕಡಿಮೆ ಮಾಡಬಹುದು, ಆದರೆ ಅದು, ಅಪಾಯಕಾರಿ ಮತ್ತು ಪ್ರಕ್ಷುಬ್ಧ ಪ್ರತಿಸ್ಪರ್ಧಿಯನ್ನು ತೆಗೆದುಹಾಕುವ ಮೂಲಕ ಅದನ್ನು ಕೊನೆಗೊಳಿಸಲು ಸಾಧ್ಯವಿಲ್ಲ. ಯಾವುದೇ ರೀತಿಯ ಸೈನಿಕ ಆಡಳಿತವು ಉಳಿದುಕೊಂಡಿರುವವರೆಗೂ, ರಾಜಕೀಯ ಅಥವಾ ವಾಣಿಜ್ಯ ಉಲ್ಬಣಗೊಳ್ಳುವ ಕ್ಷೇತ್ರಗಳು ಇರುವವರೆಗೆ ಮತ್ತು ರಾಷ್ಟ್ರೀಯ ಸ್ವಾರ್ಥಪರತೆಗಳು ಇರುವವರೆಗೆ ಮತ್ತು ಅವುಗಳು ಪವಿತ್ರವಾಗಿರವವರೆಗೆ ಮತ್ತು ಅಂತರ್ಗತ ವಿಸ್ತರಣೆಯ ಬಗ್ಗೆ ಅಂತಿಮ ಪರಿಶೀಲನೆ ಇಲ್ಲದಿರುವವರೆಗೆ, ಯುದ್ಧವು ಯಾವಾಗಲೂ ಒಂದು ಸಾಧ್ಯತೆಯಾಗಿರುತ್ತದೆ ಮತ್ತು ಬಹುಶಃ ಮಾನವ ಜನರ ಜೀವನದ ಅವಶ್ಯಕತೆಯಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/477–78**

**ರಾಷ್ಟ್ರಗಳ ಒಕ್ಕೂಟ**

ದೊಡ್ಡ ಪ್ರಾಧಿಕಾರಗಳಿಂದ ಮಂಡಿಸಲ್ಪಟ್ಟ ಮತ್ತೊಂದು ವಿಚಾರದ ಹಿಂದೆ ಮುಕ್ತ ಹಾಗೂ ಪ್ರಜಾ ಸತ್ತಾತ್ಮಕ ರಾಷ್ಟ್ರಗಳ ಒಂದು ಒಕ್ಕೂಟವಿತ್ತು, ಅದು ಒತ್ತಡದಿಂದ ಅಥವಾ (ಅವಶ್ಯಕತೆ ಇದ್ದರೆ) ಬಲ ಪ್ರಯೋಗದಿಂದ ಶಾಂತಿಯನ್ನು ಕಾಪಾಡುತ್ತಿತ್ತು. ಒಂದು ವೇಳೆ ಈ ಪರಿಹಾರವು ಸಾಧಾರಣವಾಗಿದ್ದರೆ ಇದು ಆ ಸಮಸ್ಯೆಗೆ ಎಂದಿಗೂ ಪರಿಹಾರವಲ್ಲ ಮತ್ತು ಬೇರೆಯದಕ್ಕಿಂತ ತೃಪ್ತಿಕರವಲ್ಲ. ಅದೊಂದು ಹಳೆಯ ವಿಚಾರವಾಗಿದೆ, ನೆಪೋಲಿಯನ್‌ನ ಪತನದ ನಂತರ ಮೆಟರ್ನಿ ಎನ್ನುವವನು ರೂಢಿಯಲ್ಲಿ ತಂದಂಥ ವಿಚಾರವು ಇದಾಗಿದೆ; ಸರ್ವಾಧಿಕಾರಿಗಳ ಒಂದು ಪವಿತ್ರ ಮೈತ್ರಿಯ ಬದಲಿಗೆ ಮಾತ್ರ ಶಾಂತಿ ಮತ್ತು ರಾಜ ಪ್ರಭುತ್ವದ ವ್ಯವಸ್ಥೆಯನ್ನು ಕಾಪಾಡಲು ಮತ್ತು ಪ್ರಜಾ ಪ್ರಭುತ್ವವನ್ನು ಬಾಧಿಸಲು, ಮುಕ್ತ – ಮತ್ತು ಸಾರ್ವಭೌಮ ಒಕ್ಕೂಟವನ್ನು ಹೊಂದಲು – ಜನರು ಪ್ರಜಾ ಪ್ರಭುತ್ವವನ್ನು ಜಾರಿಗೊಳಿಸಲು ಮತ್ತು ಶಾಂತಿಯನ್ನು ಕಾಪಾಡಲು ಅದು ಪ್ರಸ್ತಾಪಿಸಲ್ಪಟ್ಟಿತು. ಹೊಸ ಒಕ್ಕೂಟವು ಹಳೆಯ ಒಕ್ಕೂಟದ

ದಾರಿಯಲ್ಲಿ ಸಾಗುತ್ತದೆ ಎನ್ನುವುದು ಬಹುಮಟ್ಟಿಗೆ ನಿಖರವಾದ ಸಂಗತಿಯಾಗಿದೆ; ಒಕ್ಕೂಟದ ಅಂಗ ಪ್ರಭಾವಗಳ ಆಸಕ್ತಿಗಳು ಮತ್ತು ಮಹದಾಸೆಗಳು ಸಾಕಷ್ಟು ಪ್ರತ್ಯೇಕಗೊಂಡಾಗ, ಅಥವಾ 1848ರಲ್ಲಿ ದಬ್ಬಾಳಿಕೆಗೆ ಒಳಗಾದ ಪ್ರಜಾ ಪ್ರಭುತ್ವದ ಭಯಂಕರ ಪುನರುಜ್ಜೀವಿತದಿಂದ ಹೊಸ ಪರಿಸ್ಥಿತಿ ಉಂಟಾದಾಗ ಅಥವಾ ಯುವ ಪ್ರಚಂಡರ, ಸಮಾಜವಾದದ, ಮತ್ತು ಮಧ್ಯಮ ವರ್ಗ–ಪ್ರಜಾ ಜಗತ್ತಿನ ಹಳೆಯ ಒಲಿಂಪಿಯನ್ದೇವರುಗಳ ನಡುವೆ ಭವಿಷ್ಯದಲ್ಲಿ ನಡೆಯುವ ಅನಿವಾರ್ಯ ದ್ವಂದ್ವ ಯುದ್ಧದಂತಹ ಪರಿಸ್ಥಿತಿ ಉಂಟಾದಾಗ ಅದು ತಕ್ಷಣವೇ ಒಡೆದು ಚೂರಾಗುತ್ತದೆ ಅಥವಾ ಮುರಿದು ಬೀಳುತ್ತದೆ. ಆ ಸಂಘರ್ಷವು ಈಗಾಗಲೇ ಕ್ರಾಂತಿಕಾರಿ ರಷಿಯಾದಲ್ಲಿ ತನ್ನ ಭಯಂಕರ ನೆರಳನ್ನು ರೂಪಿಸುತ್ತಿತ್ತು, ಈಗ ಅದು ಒಂದು ರೂಪ ತಾಳಿದೆ ಮತ್ತು ಯುರೋಪ್ ಖಂಡದ ಎಲ್ಲೆಡೆಯು ಹರಡಲು ಹೆಚ್ಚು ಕಾಲ ವಿಳಂಬವಾಗಲಾರದು. ಯುದ್ಧ ಮತ್ತು ಅದರ ನಂತರದ ಪರಿಣಾಮಗಳು ತಾತ್ಕಾಲಿಕವಾಗಿ ನಿಲಂಬನಗೊಂಡಿವೆ ಆದರೆ ವಾಸ್ತವದಲ್ಲಿ ಅದರ ಆಗಮನವನ್ನು ತ್ವರಿತಗೊಳಿಸಿರಬಹುದು ಮತ್ತು ಅದರ ಬಲವನ್ನು ವರ್ಧನೆ ಮಾಡಿರಬಹುದು. ಒಂದು ಕಾರಣವಾಗಲಿ ಅಥವಾ ಇನ್ನೊಂದು ಕಾರಣವಾಗಿರಲಿ ಅಥವಾ ಎರಡೂ ಒಟ್ಟಿಗೆ ಒಂದು ನಿರ್ದಿಷ್ಟ ವಿಸರ್ಜನೆಯನ್ನು ತರುತ್ತದೆ. ಯಾವುದೇ ಸ್ವಯಂಪ್ರೇರಿತ ಒಕ್ಕೂಟವು ಅದರ ಸ್ವಭಾವದಲ್ಲಿ ಶಾಶ್ವತವಾಗಿರಲು ಸಾಧ್ಯವಿಲ್ಲ. ಅದನ್ನು ಬೆಂಬಲಿಸಿದ ಕಲ್ಪನೆಗಳು ಬದಲಾಗುತ್ತವೆ; ಅದನ್ನು ಸಾಧ್ಯವಾಗಿಸಿದ ಮತ್ತು ಪರಿಣಾಮಕಾರಿಯಾಗಿ ಮಾಡಿದ ಹಿತಾಸಕ್ತಿಗಳು ಮಾರಣಾಂತಿಕವಾಗಿ ಮಾರ್ಪಾಡಾಗುತ್ತವೆ ಅಥವಾ ಹಳತಾಗುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/478**

## ಪ್ರಜಾ ತಂತ್ರಗಳು ಮತ್ತು ಯುದ್ಧ

ಇರುವ ಭಾವನೆ ಏನಾಗಿದೆ ಎಂದರೆ, ಪ್ರಜಾ ಪ್ರಭುತ್ವಗಳು ಯುದ್ಧಕ್ಕೆ ಹೋಗಲು ರಾಜ ಪ್ರಭುತ್ವಗಳಿಗಿಂತ ಕಡಿಮೆ ಸಿದ್ಧವಾಗಿರುತ್ತವೆ; ಆದರೆ ಇದು ಒಂದು ನಿರ್ದಿಷ್ಟ ಪರಿಮಾಣದವರೆಗೆ ಮಾತ್ರ ನಿಜ. ಪ್ರಜಾ ಪ್ರಭುತ್ವಗಳು ಎಂದು ಕರೆಯಲ್ಪಡುವ ಮಧ್ಯಮ – ವರ್ಗ ರಾಷ್ಟ್ರಗಳು ಸಾಂವಿಧಾನಿಕ ರಾಜಪ್ರಭುತ್ವ ಅಥವಾ ಮಧ್ಯಮ ವರ್ಗದ ಗಣರಾಜ್ಯದ ರೂಪದಲ್ಲಿವೆ. ಆದರೆ ಎಲ್ಲೆಡೆ ಮಧ್ಯಮ ವರ್ಗವು, ಕೆಲವು ಮಾರ್ಪಾಡುಗಳೊಂದಿಗೆ, ರಾಜತಾಂತ್ರಿಕ ಅಭ್ಯಾಸಗಳನ್ನು, ರಾಜಪ್ರಭುತ್ವದ ಅಥವಾ (ಮುಂಚಿನ) ಶ್ರೀಮಂತ ಸರ್ಕಾರಗಳ ವಿದೇಶಿ ನೀತಿಗಳನ್ನು ಮತ್ತು ಅಂತರರಾಷ್ಟ್ರೀಯ ವಿಚಾರಗಳನ್ನು ಆಕ್ರಮಿಸಿಕೊಂಡಿತು.[1] ಈ ನಿರಂತರತೆಯು ಆಳುವ ವರ್ಗದ

ಮನೋಭಾವದ ಸಹಜ ನಿಯಮವಾಗಿ ಇರುವ ಹಾಗೆ ಕಾಣುತ್ತದೆ. ಜರ್ಮನಿಯಲ್ಲಿ ಇದು ಶ್ರೀಮಂತ ಮತ್ತು ಬಂಡವಾಳಶಾಹಿ ವರ್ಗವು ಸೇರಿ ಅಖಿಲ ಜರ್ಮನ್ ಪಕ್ಷವನ್ನು ರೂಪಿಸಿತ್ತು, ಅದು ಉತ್ಪ್ರೇಕ್ಷಿತ ಮತ್ತು ಬಹುತೇಕ ಹುಚ್ಚುತನದ ಮಹತ್ವಾಕಾಂಕ್ಷೆಗಳೊಂದಿಗೆ ರಚಿಸಲ್ಪಟ್ಟಿತು. ನವ ರಷಿಯಾದಲ್ಲಿ, ಅದರ ಅಲ್ಪಾವಧಿಯ ಆಳ್ವಿಕೆಯಲ್ಲಿ, ಮಧ್ಯಮ ವರ್ಗವು, ಆಂತರಿಕ ವ್ಯವಹಾರಗಳಲ್ಲಿ ಜಾ?ರ ಆಡಳಿತದ (Czardom) ರಾಜಕೀಯ ವಿಚಾರಗಳನ್ನು ತಿರಸ್ಕರಿಸಿತು ಮತ್ತು ಸರ್ವಾಧಿಕಾರತ್ವವನ್ನು ಉರುಳಿಸಲು ಸಹಾಯ ಮಾಡಿತು, ಆದರೆ ಬಾಹ್ಯ ವ್ಯವಹಾರಗಳಲ್ಲಿ (ಜರ್ಮನ್‌ರ ಪ್ರಭಾವವನ್ನು ಬಿಟ್ಟು) ಅದರ ವಿಚಾರಗಳನ್ನು ಉಳಿಸಿಕೊಂಡು ರಷಿಯಾದ ಅಭಿವೃದ್ಧಿಗೆ ಹಾಗೂ ಕಾನ್ಸ್ಟಾಂಟಿನೋಪಲ್ (Constantinople) ನಗರವನ್ನು ಸ್ವಾಧೀನಪಡಿಸಿಕೊಳ್ಳಲು ನೆರವಾಯಿತು. ನಿಶ್ಚಯವಾಗಿ, ಅಲ್ಲೊಂದು ಮಹತ್ವದ ವ್ಯತ್ಯಾಸವಿದೆ. ರಾಜ ಪ್ರಭುತ್ವದ ಅಥವಾ ನಿರಂಕುಶ ಪ್ರಭುತ್ವದ ರಾಷ್ಟ್ರ ಎನ್ನುವುದು ತನ್ನ ಮನೋಭಾವದಲ್ಲಿ ರಾಜಕೀಯವಾಗಿದೆ ಮತ್ತು ಮೊದಲ ಪ್ರಾಶಸ್ತ್ಯ ಪ್ರದೇಶಗಳ ವಿಸ್ತರಣೆ ಮತ್ತು ರಾಷ್ಟ್ರಗಳ ನಡುವೆ ರಾಜಕೀಯ ಪ್ರಾಧಾನ್ಯತೆಯನ್ನು ಅಥವಾ ಅಧಿನಾಯಕತ್ವವನ್ನು ಸಾಧಿಸಲು ಪ್ರಯತ್ನಿಸುತ್ತದೆ. ವಾಣಿಜ್ಯ ಉದ್ದೇಶಗಳು ಕೇವಲ ನಂತರದ ಸ್ಥಾನದಲ್ಲಿ ಬರುತ್ತವೆ, ಇವು ಮೊದಲಿನವುಗಳಿಗೆ ಅನುಷಂಗಿಕವಾಗಿರುತ್ತವೆ. ಮಧ್ಯಮ ವರ್ಗದ ರಾಷ್ಟ್ರದಲ್ಲಿ ವ್ಯತಿರಿಕ್ತವಾದ ವ್ಯವಸ್ಥೆ ಚಾಲ್ತಿಯಲ್ಲಿರುತ್ತದೆ; ಏಕೆಂದರೆ, ಅದು ಮುಖ್ಯವಾಗಿ ಮಾರುಕಟ್ಟೆಗಳನ್ನು ವಶ ಮಾಡಿಕೊಳ್ಳಲು ಮತ್ತು ಸಂಪತ್ತಿನ ಹೊಸ ಕ್ಷೇತ್ರಗಳ ನೇತೃತ್ವ ಹೊಂದಲು, ವಸಾಹತುಗಳನ್ನು ರಚಿಸಲು ಅಥವಾ ಅಧೀನ ವಸಾಹತುಗಳನ್ನು ಜಯಿಸಲು ಹೊಂಚು ಹಾಕುತ್ತಿರುತ್ತದೆ. ಈ ವಸಾಹತುಗಳನ್ನು ಆರ್ಥಿಕವಾಗಿ ಮತ್ತು ಔದ್ಯೋಗಿಕವಾಗಿ ಮತ್ತು ರಾಜಕೀಯವಾಗಿ ಎತ್ತರಕ್ಕೇರಿದ ಮೇಲೆ ಮಾತ್ರ ಒಂದು ಸಾಧನವನ್ನಾಗಿ ಈ ಅಮೂಲ್ಯವಾದ ಉದ್ದೇಶಕ್ಕಾಗಿ (ಲಾಭಕ್ಕಾಗಿ) ಬಳಸಿಕೊಳ್ಳಬಹುದು. ಅಲ್ಲದೆ, ರಾಜಶಾಹಿ ಅಥವಾ ಶ್ರೀಮಂತ ರಾಜಕಾರಣಿಗಳು ಯುದ್ಧವನ್ನು ಬಹುತೇಕ ತಮ್ಮ ಮೊದಲ ಸಾಧನವನ್ನಾಗಿ ಬಳಸಿಕೊಂಡರು. ಅವನು ತನ್ನ ರಾಜತಾಂತ್ರಿಕತೆಗೆ ಸಿಕ್ಕ ಪ್ರತಿಕ್ರಿಯೆ ಬಗ್ಗೆ ಅತೃಪ್ತನಾದ ತಕ್ಷಣ, ಅವನು ಖಡ್ಗ ಅಥವಾ ಬಂದೂಕನ್ನು ಹಿಡಿದುಕೊಂಡ. ಮಧ್ಯಮ ವರ್ಗದ ರಾಜಕಾರಣಿಗಳು ಹಿಂಜರಿಯುತ್ತಾರೆ, ಲೆಕ್ಕ ಹಾಕುತ್ತಾರೆ,

1. ಹಾಗೆಯೇ ಸಮಾಜವಾದ ರಾಷ್ಟ್ರ ರಷಿಯಾ ಕೂಡ ಈ ವಿಚಾರಗಳನ್ನು ಹಾಗೂ ಅಭ್ಯಾಸಗಳನ್ನು ಝಾರ ಅವರಿಂದ ಸ್ವಲ್ಪ ಬದಲಾವಣೆಯೊಂದಿಗೆ ಅಥವಾ ಬದಲಾವಣೆ ಇಲ್ಲದೆಯೆ ತನ್ನದಾಗಿಸಿಕೊಂಡಿದೆ.

ರಾಜತಾಂತ್ರಿಕತೆಗೆ ಹೆಚ್ಚಿನ ಅವಕಾಶ ಕೊಡುತ್ತಾರೆ, ಚೌಕಾಶಿಗಳ, ವ್ಯವಸ್ಥೆಗಳ, ಶಾಂತಿಯುತ ಒತ್ತಡದ, ಶಕ್ತಿ ಪ್ರದರ್ಶನಗಳ ಮೂಲಕ ತಮ್ಮ ಗುರಿಗಳನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ಕೊನೆಗೆ ಅವನು ಯುದ್ಧಕ್ಕೆ ಹೋಗಲು ಸಿದ್ಧನಾಗಿರುತ್ತಾನೆ, ಆದರೆ ಈ ಎಲ್ಲಾ ಉಪಾಯಗಳು ವಿಫಲವಾದಾಗ ಮಾತ್ರ ಮತ್ತು ಗುರಿ ಸಾಧಿಸುವ ಮಾರ್ಗಗಳು ಸಮಂಜಸವಾಗಿದ್ದರೆ ಮಾತ್ರ ಹಾಗೂ ಯುದ್ಧದ ದೊಡ್ಡ ಹೂಡಿಕೆಯು ಯಶಸ್ಸಿನ ಬಲವಾದ ಅವಕಾಶ ಮತ್ತು ಗಟ್ಟಿಯಾದ ಲಾಭವನ್ನು ವಾಗ್ದಾನ ಮಾಡಿದರೆ ಮಾತ್ರ. ಆದರೆ ಮತ್ತೊಂದು ಕಡೆಯಿಂದ, ಮಧ್ಯಮ ವರ್ಗದ ಪ್ರಜಾತಂತ್ರ ರಾಷ್ಟ್ರವು ಅಸಾಧಾರಣವಾದ, ಅದರ ಬಗ್ಗೆ ಅತ್ಯಂತ ಶಕ್ತಿಶಾಲಿ ರಾಜರುಗಳು ಮತ್ತು ಶ್ರೀಮಂತರೂ ಕೂಡ ಕನಸು ಕಾಣಲಾಗದಂತಹ ಸೈನಿಕ ಸಂಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಮತ್ತು ಇದು ದೊಡ್ಡ ಯುದ್ಧಗಳ ಪ್ರಾರಂಭವನ್ನು ವಿಳಂಬ ಮಾಡುವ ಪ್ರವೃತ್ತಿ ಹೊಂದಿದ್ದರೆ, ಅವುಗಳ ಅಂತಿಮ ಆಗಮನವನ್ನು ಖಚಿತವಾಗಿಸುವ ಮತ್ತು ಅವುಗಳ ಪ್ರಮಾಣವನ್ನು ಅಪರಿಮಿತವಾಗಿ ಮಾಡುವ, ಈಗಿನ ದಿನಗಳಲ್ಲಿ ಲೆಕ್ಕಾಚಾರಕ್ಕೆ ನಿಲುಕದ ಮತ್ತು ಅಳೆಯಲಾಗದ ಪ್ರವೃತ್ತಿಯನ್ನೂ ಹೊಂದಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/480**

**ಜಾಗತಿಕ ಸನ್ನಿವೇಶ**

ಈ ನೆರವೇರುವಿಕೆಯು, ಪ್ರಸ್ತುತ ಅಂತರರಾಷ್ಟ್ರೀಯ ಪರಿಸ್ಥಿತಿಗಳ ಬದಲಿಗೆ, ಖಂಡಿತವಾಗಿ ಒಂದು ಜಾಗತಿಕ ಸನ್ನಿವೇಶದ ಸೃಷ್ಟಿಯನ್ನು ಸಂಕೇತಿಸುತ್ತದೆ. ಅಂತರರಾಷ್ಟ್ರೀಯ ಪ್ರಾಧಿಕಾರವು ಬರೀ ವಿವಾದಗಳ ತೀರ್ಪುಗಾರನಾಗಿ ಮಾತ್ರವಲ್ಲದೆ ಕಾನೂನಿನ ಹಾಗೂ ಅವುಗಳ ನಿರ್ವಹಣೆಯ ಹಿಂದಿನ ಪರಮ ಶಕ್ತಿಯ ಮೂಲವಾದಾಗ ಮಾತ್ರ ಅದನ್ನು ಯಥಾವತ್ತಾಗಿ ಪರಿಣಾಮಕಾರಿಯಾಗಿ ಅಸ್ತಿತ್ವದಲ್ಲಿ ತರಬಹುದು. ತನ್ನ ಆದೇಶಗಳನ್ನು ವಿರೋಧಿಸುವ ದೇಶಗಳ ಅಥವಾ ವರ್ಗಗಳ ವಿರುದ್ಧ, ಕೇವಲ ರಾಜಕೀಯವಲ್ಲದೆ ವಾಣಿಜ್ಯ, ಔದ್ಯೋಗಿಕ ಮತ್ತು ಇತರೇ ಸಂಘರ್ಷಗಳನ್ನು ತಡೆಯಲು, ಅಥವಾ ಕನಿಷ್ಠ ಅವುಗಳನ್ನು ಶಾಂತಿಯುತ ಕಾನೂನು ಮತ್ತು ಮಧ್ಯಸ್ಥಿಕೆಯ ಮೂಲಕವಲ್ಲದೆ ಬೇರೆ ರೀತಿಯಲ್ಲಿ ನಿರ್ಧರಿಸುವುದನ್ನು ತಡೆಯಲು, ಹಿಂಸಾತ್ಮಕ ಬದಲಾವಣೆ ಮತ್ತು ಕ್ರಾಂತಿಯ ಯಾವುದೇ ಪ್ರಯತ್ನವನ್ನು ಹತ್ತಿಕ್ಕಲು, ಜಾಗತಿಕ ಸನ್ನಿವೇಶ, ಅದು ಎಷ್ಟೇ ಶಕ್ತಿಶಾಲಿಯಾಗಿದ್ದರೂ, ಇನ್ನೂ ಎಲ್ಲ ಶಕ್ತಿಯನ್ನು ತನ್ನ ಸ್ವಂತ ಕೈಗಳಲ್ಲಿ ಕೇಂದ್ರೀಕರಿಸುವ ಅಗತ್ಯವಿರುತ್ತದೆ. ಮನುಷ್ಯ ತಾನು ಏನಾಗಿರುವನೋ

ಹಾಗೆ ಇರುವವರೆಗೆ, ಎಲ್ಲಾ ಆದರ್ಶವಾದಗಳ ಮತ್ತು ಉದಾರ ನೆಮ್ಮದಿಯ ಭರವಸೆಗಳ ಹೊರತಾಗಿಯೂ, ಬಲವು ಅವನ ಜೀವನದ ಅಂತಿಮ ನಿರ್ಣಾಯಕ ಮತ್ತು ಆಡಳಿತಗಾರನಾಗಿ ಉಳಿಯಲೇಬೇಕು ಮತ್ತು ಅದನ್ನು ಹೊಂದಿರುವವನೇ ನಿಜವಾದ ಪ್ರಭುವಾಗುತ್ತಾನೆ. ಸಾಮಾನ್ಯ ಸಮಯದಲ್ಲಿ ಬಲವು ತನ್ನ ಪ್ರಾಕೃತಿಕ ಉಪಸ್ಥಿತಿಯನ್ನು ಮರೆಮಾಚಬಹುದು ಮತ್ತು ಹೋಲಿಸಿದರೆ ಅದು ಸೌಮ್ಯ ಮತ್ತು ಸುಸಂಸ್ಕೃತ ರೂಪಗಳಲ್ಲಿ ಮಾತ್ರ ಕಾಣಿಸಿಕೊಳ್ಳಬಹುದು, ಏಕೆಂದರೆ ಕಾರಾಗೃಹ ಮತ್ತು ಗಲ್ಲಿಗೇರಿಸುವವನು ಇನ್ನೂ ಸಾಮಾಜಿಕ ವ್ಯವಸ್ಥೆಯ ಎರಡು ಮುಖ್ಯ ಆಧಾರ ಸ್ತಂಭಗಳು, ಅಲ್ಲವೇ? – ಆದರೆ ಅದು ನಮ್ಮ ನಾಗರೀಕತೆಯ ಆಕರ್ಷಕ ಮುಖ ಲಕ್ಷಣಗಳನ್ನು ಮೌನವಾಗಿ ಬೆಂಬಲಿಸುತ್ತಾ ಇದೆ ಮತ್ತು ಯಾವಾಗಲಾದರೂ ಅವಶ್ಯವಿದ್ದಾಗ, ಸಾಮಾಜಿಕ ಜಗತ್ತಿನ ಕ್ರಮಬದ್ಧವಾದ ಆದರೆ ಇನ್ನೂ ದುರ್ಬಲವಾದ ದೇವರುಗಳ ಕಾರ್ಯಗಳಲ್ಲಿ ಮಧ್ಯಪ್ರವೇಶಿಸಲು ಸಿದ್ಧವಾಗಿದೆ. ಚದುರಿಸಲ್ಪಟ್ಟಾಗ, ಶಕ್ತಿಯು ಪ್ರಕೃತಿಯ ಮುಕ್ತ ಕ್ರಿಯೆಗಳನ್ನು ಪೂರ್ಣಗೊಳಿಸುತ್ತದೆ ಮತ್ತು ಜೀವನದ ಸೇವಕನಾಗಿದೆ ಆದರೆ ವೈಷಮ್ಯ ಮತ್ತು ಹೋರಾಟದ ಸೇವಕನೂ ಆಗಿದೆ; ಕೇಂದ್ರೀಕೃತವಾದಾಗ, ಅದು ಸಂಘಟನೆಯ ಆಧಾರವಾಗುತ್ತದೆ ಮತ್ತು ವ್ಯವಸ್ಥೆಯ ಪಾಶವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/483–84**

## ಯುದ್ಧದ ನಿರ್ಮೂಲನೆ

ರಾಷ್ಟ್ರೀಯ ಸೈನ್ಯಗಳನ್ನು ತೆಗೆದು ಹಾಕಿದಾಗ ಮಾತ್ರ ಯುದ್ಧವನ್ನು ನಿರ್ಮೂಲನೆ ಮಾಡಬಹುದು, ಮತ್ತು ಆಗಲೂ ತೊಂದರೆ ತೆಗೆದುಕೊಂಡು, ಮಾನವ ಕುಲಕ್ಕೆ ಹೇಗೆ ರೂಪಿಸಬೇಕೆಂದು ಇನ್ನೂ ಗೊತ್ತಿಲ್ಲದ ಬೇರೆ ಆಡಳಿತ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದರಿಂದ ಅಥವಾ ಅದನ್ನು ರಚಿಸಲ್ಪಟಾಗ, ಕೊಂಚ ಸಮಯದವರೆಗೆ ಅದನ್ನು ಪರಿಪೂರ್ಣವಾಗಿ ಬಳಕೆ ಮಾಡಲು ಸಾಧ್ಯವಾಗದು. ಮತ್ತು ರಾಷ್ಟ್ರೀಯ ಸೈನ್ಯಗಳನ್ನು ರದ್ದು ಮಾಡುವ ಯಾವುದೇ ಸಾಧ್ಯತೆಯು ಅಲ್ಲಿರುವುದಿಲ್ಲ; ಏಕೆಂದರೆ ಪ್ರತಿ ದೇಶವು ಇತರ ಎಲ್ಲಾ ದೇಶಗಳನ್ನು ತುಂಬಾ ಅನುಮಾನಿಸುವುದರಿಂದ, ತುಂಬಾ ಆಕಾಂಕ್ಷೆಗಳನ್ನು ಮತ್ತು ಹೆಬ್ಬಯಕೆಗಳನ್ನು ಹೊಂದಿರುವುದರಿಂದ ಸಶಸ್ತ್ರವಾಗಿರ–ಬೇಕಾಗುತ್ತದೆ, ಬೇರೆ ಯಾವದಕ್ಕೂ ಅಲ್ಲದಿದ್ದರೂ, ತನ್ನ ಮಾರುಕಟ್ಟೆಗಳನ್ನು ರಕ್ಷಿಸಲು ಮತ್ತು ತನ್ನ ಆಳ್ವಿಕೆಗಳನ್ನು, ವಸಾಹತುಗಳನ್ನು, ಅಧೀನದಲ್ಲಿರುವ ಜನರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಶಸ್ತ್ರವಾಗಿರಬೇಕಾಗುತ್ತದೆ. ವಾಣಿಜ್ಯ ಮಹದಾಸೆಗಳು

ಮತ್ತು ಪ್ರತಿಸ್ಪರ್ಧೆಗಳು, ರಾಜಕೀಯ ಹೆಮ್ಮೆ, ಕನಸುಗಳು, ತೀವ್ರವಾದ ಬಯಕೆಗಳು, ಅಸೂಯೆಗಳು ಇವೆಲ್ಲಾ ಮಂತ್ರ ದಂಡದ ಸ್ಪರ್ಶದಿಂದ ಕಣ್ಮರೆಯಾಗುವುದಿಲ್ಲ, ಏಕೆಂದರೆ ಯೂರೋಪ್ ಖಂಡವು ಬಹಳ ದಿನಗಳಿಂದ ಬೆಳೆದುಬಂದ ಆಕಾಂಕ್ಷೆಗಳ, ಅಸೂಯೆಗಳ ಮತ್ತು ದ್ವೇಷಗಳ ಹುಚ್ಚುತನದ ಘರ್ಷಣೆಯಲ್ಲಿ ತನ್ನ ಜನಸಂಖ್ಯೆಯನ್ನು ಕಡಿಮೆ ಮಾಡಿಕೊಂಡಿದೆ ಮತ್ತು ಮೂರು ವರ್ಷಗಳಲ್ಲಿ ದಶಕಗಳ ಸಂಪನ್ಮೂಲಗಳನ್ನು ಯುದ್ಧದ ಕುದಿಯುವ ಕುಂಡದಲ್ಲಿ ಎಸೆದಿದೆ. ನಮ್ಮ ಸಂಕಷ್ಟಕ್ಕೆ ಒಳಪಟ್ಟ ಮತ್ತು ಮುಗ್ಗರಿಸುತ್ತಿರುವ ಮನುಷ್ಯ ಜೀವನದಿಂದ ಯುದ್ಧವನ್ನು ಮತ್ತು ಅಂತರರಾಷ್ಟ್ರೀಯ ಘರ್ಷಣೆಗಳನ್ನು ತೊಡೆದು ಹಾಕುವಂಥ "ಅದ್ಭುತ, ಸಮೃದ್ಧ ಮತ್ತು ವಿಚಿತ್ರ"ವಾದ ಯಾವುದೋ ಒಂದು ಸಂಗತಿಯಲ್ಲಿ ರಾಷ್ಟ್ರಗಳ ಮನೋಭಾವವು ಪರಿವರ್ತನೆಯಾಗುವ ಮೊದಲು, ಜಾಗೃತಿಯು ಇನ್ನೂ ಆಳಕ್ಕೆ ಹೋಗಬೇಕು, ಕ್ರಿಯೆಯ ಇನ್ನೂ ಶುದ್ಧವಾದ ಮೂಲಗಳನ್ನು ಹಿಡಿದುಕೊಳ್ಳಬೇಕು. ರಾಷ್ಟ್ರೀಯ ಅಹಂಭಾವವು ಉಳಿದಿರುವಾಗ, ವ್ಯಾಜ್ಯಗಳ ಮಾರ್ಗಗಳು ಉಳಿದಿರುವಾಗ, ಅದರ ಕಾರಣಗಳು, ಅವಕಾಶಗಳು, ನೆಪಗಳು ಎಂದಿಗೂ ಕಮ್ಮಿಯಾಗುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/489–90**

## ಅಸ್ಪಷ್ಟ ಪರಿಹಾರ

ಸೇನೆಗಳ ಮತ್ತು ಶಸ್ತ್ರಗಳ ಮೇಲಿನ ಪ್ರತಿಬಂಧವು ಒಂದು ಅಸ್ಪಷ್ಟ ಪರಿಹಾರವಾಗಿದೆ. ಒಂದು ವೇಳೆ ಪರಿಣಾಮಕಾರಿಯಾದ ಅಂತರರಾಷ್ಟ್ರೀಯ ನಿಯಂತ್ರಣದ ಒಂದು ಮಾರ್ಗ ಸಿಕ್ಕಿದಾಗಲೂ, ಯುದ್ಧದ ಘರ್ಷಣೆಯು ವಾಸ್ತವವಾಗಿ ಬಂದಾಕ್ಷಣ ಅದು ಕಾರ್ಯ ಮಾಡುವುದನ್ನು ನಿಲ್ಲಿಸಿಬಿಡುತ್ತದೆ. ಯುರೋಪಿನ ಸಂಘರ್ಷವು ಅದನ್ನು ತೋರಿಸಿದೆ, ಯುದ್ಧದ ಸಮಯದಲ್ಲಿ, ಒಂದು ದೇಶವನ್ನು ಭಾರೀ ಆಯುಧಗಳ ಒಂದು ಉದ್ದಿಮೆಯನ್ನಾಗಿ ಪರಿವರ್ತಿಸಬಹುದು ಮತ್ತು ಒಂದು ರಾಷ್ಟ್ರ ತನ್ನ ಎಲ್ಲಾ ಶಾಂತಿಯುತ ಮಾನವ ಸಾಮರ್ಥ್ಯವನ್ನು ಸೇನೆಯಾಗಿ ಪರಿವರ್ತಿಸಬಹುದು. ಒಂದು ಚಿಕ್ಕ ಮತ್ತು ಅಮುಖ್ಯವಾದ ಸೇನಾ ಶಕ್ತಿಯಿಂದ ಶುರುವಾದ ಇಂಗ್ಲಂಡ್ ದೇಶವು, ಒಂದೇ ವರ್ಷದಲ್ಲಿ ಲಕ್ಷಾಂತರ ಜನರನ್ನು ಬೆಳೆಸಲು ಮತ್ತು ಎರಡು ವರ್ಷಗಳಲ್ಲಿ ಅವರನ್ನು ತರಬೇತುಗೊಳಿಸಿ ಅಣಿಮಾಡಲು ಮತ್ತು ಅವರನ್ನು ಪರಿಣಾಮಕಾರಿಯಾಗಿ ಒತ್ತಡದಲ್ಲಿ ಹಾಕಲು ಸಮರ್ಥವಾಗಿತ್ತು. ಈ ದೃಷ್ಟಾಂತ ಪಾಠವು, ಸೇನೆಗಳ ಮತ್ತು ಶಸ್ತ್ರಗಳ ಮೇಲಿನ ಪ್ರತಿಬಂಧವು ಶಾಂತಿಯಲ್ಲಿ ರಾಷ್ಟ್ರೀಯ ಹೊರೆಯನ್ನು ಕಡಿಮೆ

ಮಾತ್ರ ಮಾಡಬಹುದು ಎನ್ನುವುದನ್ನು ತೋರಿಸಲು ಸಾಕಾಗಿದೆ, ಆ ವಾಸ್ತವಾಂಶದಿಂದ ಸಂಘರ್ಷಕ್ಕೆ ಹೆಚ್ಚು ಸಂಪನ್ಮೂಲಗಳನ್ನು ಬಿಡಬೇಕಾಗುತ್ತದೆ, ಆದರೆ ಯುದ್ಧದ ವಿನಾಶಕಾರಿ ತೀವ್ರತೆ ಮತ್ತು ವಿಸ್ತರಿಸುವುದನ್ನು ತಡೆಯಲು ಅಥವಾ ಕಡಿಮೆ ಮಾಡಲು ಸಾಧ್ಯವಿಲ್ಲ. ಅದರ ಹಿಂದೆ ಹೆಚ್ಚು ಪರಿಣಾಮಕಾರಿಯಾದ ನಿರ್ಬಂಧದೊಂದಿಗೆ ಇರುವ ಶಕ್ತಿಶಾಲಿ ಅಂತರರಾಷ್ಟ್ರೀಯ ಕಾನೂನಿನ ನಿರ್ಮಾಣವು ಕೂಡ ಖಚಿತ ಅಥವಾ ಪರಿಪೂರ್ಣ ಪರಿಹಾರ ಆಗಿರಲಾರದು. ಬೇಕಾಗಿದ್ದು ಇದು ಎಂದು ಪದೇಪದೇ ಒತ್ತಿ ಹೇಳಲ್ಪಟ್ಟಿತ್ತು; ರಾಷ್ಟ್ರದ ಕಾನೂನಿನಂತೆ, ವ್ಯಕ್ತಿಗಳ, ಕುಟುಂಬಗಳ ಅಥವಾ ಕುಲಗಳ ನಡುವಿನ ವಿವಾದಗಳನ್ನು ಶಕ್ತಿಯ ಮಧ್ಯಸ್ಥಿಕೆಯಿಂದ ಇತ್ಯರ್ಥಪಡಿಸುವ ಹಳೆಯ ಅನಾಗರಿಕ ವಿಧಾನವನ್ನು ಕಾನೂನುಬದ್ಧಗೊಳಿಸಿದಂತೆ ಮತ್ತು ನಿಗ್ರಹಿಸಿದಂತೆಯೇ, ರಾಷ್ಟ್ರಗಳ ಜೀವನದಲ್ಲಿ ಇದೇ ರೀತಿಯ ಬೆಳವಣಿಗೆ ಸಾಧ್ಯವಾಗಬೇಕು. ಬಹುಶಃ ಕೊನೆಗೆ; ಆದರೆ ಅದು ತಕ್ಷಣವೇ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ನಿರೀಕ್ಷಿಸುವುದು ಕಾನೂನಿನ ಪರಿಣಾಮಕಾರಿ ಅಧಿಕಾರದ ನೈಜ ಆಧಾರವನ್ನು ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರದ ಘಟಕಗಳ ಮತ್ತು ಪ್ರಾರಂಭಿಸಲು ಪ್ರಸ್ತಾಪಿಸಲಾಗಿರುವ ಕೆಟ್ಟದಾಗಿ ಅಭಿವೃದ್ಧಿಪಡಿಸಿದ ಅಂತರರಾಷ್ಟ್ರೀಯ ಸಾಮರಸ್ಯ ಘಟಕಗಳ ನಡುವಿನ ವ್ಯತ್ಯಾಸವನ್ನು ನಿರ್ಲಕ್ಷಿಸುವಂತೆ ಆಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/391**

## ಅಧಿಕಾರ ಮತ್ತು ಕಾನೂನು

ಒಂದು ದೇಶ ಅಥವಾ ಸಮುದಾಯದಲ್ಲಿ ಕಾನೂನಿನ ಅಧಿಕಾರವು ನಿಜವಾಗಿಯೂ ಮನುಷ್ಯರು ರಚಿಸಿದ ನಿಯಮಗಳು ಮತ್ತು ಶಾಸನಗಳಲ್ಲಿ ಇರುವ ಯಾವುದೇ ಕಥಿತ ಅತೀಂದ್ರಿಯ "ಘನತೆ" ಅಥವಾ ಅತೀಂದ್ರಯ ಶಕ್ತಿಯನ್ನು ಅವಲಂಬಿಸಿಲ್ಲ. ಅದರ ನಿಜವಾದ ಶಕ್ತಿಯ ಮೂಲಗಳು ಎರಡು, ಮೊದಲನೆಯದಾಗಿ, ಬಹುಮತದವರ ಅಥವಾ ಪ್ರಭಾವಶಾಲಿ ಅಲ್ಪ ಸಂಖ್ಯಾತರ ಅಥವಾ ಸಂಪೂರ್ಣ ಸಮುದಾಯದ ಬಲವಾದ ಆಸಕ್ತಿಯನ್ನು ಕಾಪಾಡಿಕೊಳ್ಳುವುದರಲ್ಲಿ, ಮತ್ತು ಎರಡನೆಯದಾಗಿ, ಆ ಆಸಕ್ತಿಯನ್ನು ಪರಿಣಾಮಕಾರಿಯಾಗಿಸುವಂಥ ಏಕೈಕ ಸಶಸ್ತ್ರ ಪಡೆ, ಆರಕ್ಷಕ ಮತ್ತು ಸೇನಾ ಪಡೆಯನ್ನು ಹೊಂದಿರುವುದರಲ್ಲಿ. ನ್ಯಾಯದ ರೂಪಕ ಖಡ್ಗವು ಮಾತ್ರ ಕಾರ್ಯ ನಿರ್ವಹಿಸಬಹುದು, ಏಕೆಂದರೆ ಅದರ ತೀರ್ಪುಗಳನ್ನು ಮತ್ತು ಬಂಡಾಯದ ಹಾಗೂ ಭಿನ್ನ ಮತದ ವಿರುದ್ಧ ದಂಡನೆಗಳನ್ನು ಜಾರಿಮಾಡಲು

ಅದರ ಹಿಂದೆ ನಿಜವಾದ ಖಡ್ಗವಿರುವುದರಿಂದ. ಮತ್ತು ಈ ಸಶಸ್ತ್ರ ಪಡೆಯ ಸ್ವಭಾವವು ಏನೆಂದರೆ, ಅದು ಯಾರಿಗೂ, ಯಾವುದೇ ವ್ಯಕ್ತಿಗೂ ಅಥವಾ ಸಮುದಾಯದ ಅಂಗ ಸಮೂಹಕ್ಕೆ ಸೇರದೆ, ಕೇವಲ ರಾಷ್ಟ್ರ, ರಾಜ ಅಥವಾ ಆಳುವ ವರ್ಗ ಅಥವಾ ಸಾರ್ವಭೌಮ ಅಧಿಕಾರ ಕೇಂದ್ರೀಕೃತವಾಗಿರುವ ಸಂಸ್ಥೆಗೆ ಮಾತ್ರ ಸೇರಿದೆ. ರಾಷ್ಟ್ರದ ಸಶಸ್ತ್ರ ಪಡೆ ಸಮತೋಲಿತವಾಗಿದ್ದರೆ ಅಥವಾ ಗುಂಪುಗಳಿಗೆ ಮತ್ತು ವ್ಯಕ್ತಿಗಳಿಗೆ ಸೇರಿದ ಮತ್ತು ಕೇಂದ್ರೀಯ ನಿಯಂತ್ರಣದಿಂದ ಯಾವುದೇ ಮಟ್ಟದಲ್ಲಿ ಮುಕ್ತವಾದ ಅಥವಾ ಅವರ ಶಕ್ತಿಯನ್ನು ಆಳುವ ಅಧಿಕಾರದ ವಿರುದ್ಧ ಉಪಯೋಗಿಸುವ ಸಾಮರ್ಥ್ಯ ಹೊಂದಿರುವ ಇತರ ಸಶಸ್ತ್ರ ಪಡೆಗಳ ಅಸ್ತಿತ್ವದಿಂದ ಅದರ ಸಫಲತೆಯು ಕಡಿಮೆಯಾದರೆ ಅಲ್ಲಿ ಯಾವುದೇ ಸುರಕ್ಷತೆ ಇರಲು ಸಾಧ್ಯವಿಲ್ಲ. ಹಾಗಿದ್ದರೂ, ಏಕೈಕ ಮತ್ತು ಕೇಂದ್ರೀಕೃತ ಸಶಸ್ತ್ರ ಪಡೆಯಿಂದ ಬೆಂಬಲಿತವಾದ ಅಧಿಕಾರವಿದ್ದರೂ, ಕಾನೂನು, ವ್ಯಕ್ತಿಗಳ ಮತ್ತು ವರ್ಗಗಳ ನಡುವಿನ ಕಲಹವನ್ನು ತಡೆಯಲು ಸಾಧ್ಯವಾಗಿಲ್ಲ, ಏಕೆಂದರೆ ಅದು ಕಲಹಗಳ ಮಾನಸಿಕ, ಆರ್ಥಿಕ ಮತ್ತು ಇತರ ಕಾರಣಗಳನ್ನು ತೆಗೆದುಹಾಕಲು ಸಾಧ್ಯವಾಗಿಲ್ಲ. ಅದರ ದಂಡನೆಗಳೊಂದಿಗೆ ಅಪರಾಧವು ಯಾವಾಗಲೂ ಒಂದು ರೀತಿಯ ಪರಸ್ಪರ ಹಿಂಸೆ, ಒಂದು ರೀತಿಯ ದಂಗೆ ಮತ್ತು ನಾಗರಿಕ ಸಂಘರ್ಷವಾಗಿದೆ, ಮತ್ತು ಅತ್ಯಂತ ಉತ್ತಮವಾಗಿ ಹತೋಟಿಯಲ್ಲಿ ಇಡಲ್ಪಟ್ಟ ಮತ್ತು ಕಾನೂನಿಗೆ ಬದ್ಧವಾದ ಸಮುದಾಯಗಳಲ್ಲಿಯೂ ಸಹ ಅಪರಾಧವು ಇನ್ನೂ ಹೆಚ್ಚು ವ್ಯಾಪಕವಾಗಿದೆ. ಇಡೀ ಸಮುದಾಯವು ಪ್ರಬಲ ಭಾವನೆಗಳು ಮತ್ತು ಪರಿಣಾಮಕಾರಿ ವ್ಯವಸ್ಥೆಯ ವಿರುದ್ಧ ಇದ್ದರೂ ಸಹ ಅಪರಾಧವನ್ನು ಸಂಘಟಿತವಾಗಿ ನಡೆಸಲು ಸಾಧ್ಯವಿದೆ. ಆದರೆ ಸಾಮಾನ್ಯವಾಗಿ ಅದು ತನ್ನ ಶಕ್ತಿಯನ್ನು ದೀರ್ಘ ಕಾಲ ಉಳಿಸಿಕೊಳ್ಳಲು ಅಥವಾ ಸ್ಥಿರಗೊಳಿಸಲು ಸಾಧ್ಯವಿಲ್ಲ. ಆದರೆ ಇನ್ನೂ ಮುಖ್ಯವಾದ ವಿಷಯವೇನೆಂದರೆ, ಕಾನೂನು ಸಂಘಟಿತ ರಾಷ್ಟ್ರದ ಒಳಗಿನ ನಾಗರೀಕ ಕಲಹ ಮತ್ತು ಹಿಂಸಾತ್ಮಕ ಅಥವಾ ಸಶಸ್ತ್ರ ವೈಷಮ್ಯದ ಸಾಧ್ಯತೆಯನ್ನು ಕಡಿಮೆ ಮಾಡಿದರೂ ಅದನ್ನು ತಡೆಯಲು ಸಾಧ್ಯವಾಗಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/391–92**

## ಯುದ್ಧಗಳು ನಿರ್ಮೂಲನೆಯಾದರೂ ಸಹ

ಆದ್ದರಿಂದ, ಒಂದು ಅಂತರರಾಷ್ಟ್ರೀಯ ರಾಷ್ಟ್ರದ ನಿಜವಾದ ವಿಕಾಸ ಆಗುವವರೆಗೆ, ಅದು ರಾಷ್ಟ್ರಗಳ ಕೇವಲ ಭದ್ರವಿಲ್ಲದ ವಾಣಿಜ್ಯಕೂಟ ಆಗಿರದೆ ಅಥವಾ ರಾಷ್ಟ್ರೀಯ

ಆಡಳಿತದ ಪ್ರತಿನಿಧಿಗಳ ಮುಖಸ್ತುತಿ ಆಗಿರದೆ, ಆದರ್ಶವಾದಿಗಳು ಕನಸು ಕಂಡ ಶಾಂತಿ ಮತ್ತು ಏಕತೆಯ ಆಳ್ವಿಕೆ ಈ ರಾಜಕೀಯ ಅಥವಾ ಆಡಳಿತಾತ್ಮಕ ವಿಧಾನಗಳಿಂದ ಎಂದಿಗೂ ಸಾಧ್ಯವಾಗುವುದಿಲ್ಲ, ಅಥವಾ ಸಾಧ್ಯವಾದರೂ, ಅದು ಎಂದಿಗೂ ಸುರಕ್ಷಿತ–ವಾಗಿರಲಾರದು. ಯುದ್ಧವನ್ನು ನಿರ್ಮೂಲನೆ ಮಾಡಿದರೂ ಸಹ, ದೇಶದಲ್ಲಿ ವ್ಯಕ್ತಿಗಳ ನಡುವೆ ಅಪರಾಧಗಳು ಇರುವಂತೆ, ಅಥವಾ ವರ್ಗಗಳ ನಡುವಿನ ಯುದ್ಧದಲ್ಲಿ ವಿನಾಶಕಾರಿ ಸಾಮಾನ್ಯ ಮುಷ್ಕರಗಳಂತಹ ಇತರ ಮಾರ್ಗಗಳನ್ನು ಉಪಯೋಗಿಸುವಂತೆ, ಇಲ್ಲಿ ಕೂಡ ಸಂಘರ್ಷದ ಇತರ ಮಾರ್ಗಗಳು ಬೆಳೆಯಬಹುದು, ಬಹುಶಃ ಯುದ್ಧಕ್ಕಿಂತ ಹೆಚ್ಚು ಹಾನಿಕಾರಕ ಆಗಿರಬಹುದು. ಮತ್ತು ಅವುಗಳು ಪ್ರಕೃತಿಯ ಆರ್ಥಿಕತೆಯಲ್ಲಿ ಅಗತ್ಯ ಮತ್ತು ಅನಿವಾರ್ಯವಾಗಿರುತ್ತವೆ, ಕೇವಲ ಸ್ವಾರ್ಥಪರ ವೈಷಮ್ಯ ಮತ್ತು ಹುಚ್ಚುತನ ಹಾಗೂ ಮಹದಾಸೆಗಳ ಮನೋವೈಜ್ಞಾನಿಕ ಅಗತ್ಯತೆಯನ್ನು ಪೂರೈಸಲು ಮಾತ್ರವಲ್ಲದೆ, ಅನ್ಯಾಯದ, ದಮನಿಸಲ್ಪಟ್ಟ ಹಕ್ಕುಗಳ ಮತ್ತು ತಡೆಯಲ್ಪಟ್ಟ ಸಾಧ್ಯತೆಗಳ ಭಾವನೆಗಳಿಗೆ ಒಂದು ಸಾಧನ ಮತ್ತು ಆಯುಧ ಕೂಡ. ಕಾನೂನು ಯಾವಾಗಲೂ ಒಂದೇ ಆಗಿರುತ್ತದೆ, ಯಾವುದೇ ಕ್ರಿಯೆಯ ಮೂಲದಲ್ಲಿ ಅಹಂಭಾವವಿದ್ದರೆ, ಅದು ತನ್ನದೇ ಆದ ಯೋಗ್ಯ ಪರಿಣಾಮಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ತಾಳಿಕೊಳ್ಳಲೇಬೇಕು. ಮತ್ತು, ಬಾಹ್ಯ ಆಡಳಿತ ವ್ಯವಸ್ಥೆಗಳ ಮೂಲಕ ಅವುಗಳನ್ನು ಎಷ್ಟೇ ಕಡಿಮೆ ಮಾಡಿದರೂ ಮತ್ತು ಹತೋಟಿಯಲ್ಲಿಟ್ಟರೂ, ಅವುಗಳ ಅಂತಿಮ ಆಸ್ಫೋಟ ಖಂಡಿತ. ಆ ಆಸ್ಫೋಟವನ್ನು ವಿಳಂಬ ಮಾಡಬಹುದು ಆದರೆ ಶಾಶ್ವತವಾಗಿ ತಡೆಯಲು ಸಾಧ್ಯವಿಲ್ಲ.

ಶಕ್ತಿಶಾಲಿ ಕೇಂದ್ರೀಯ ನಿಯಂತ್ರಣವಿಲ್ಲದೆ ಯಾವುದೇ ಶಿಥಿಲವಾದ ನಿರ್ಮಾಣವು ತೃಪ್ತಿಕರವಾಗಿರಲು, ಪರಿಣಾಮಕಾರಿಯಾಗಿರಲು ಅಥವಾ ಶಾಶ್ವತವಾಗಿರಲು ಸಾಧ್ಯವಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಒಂದು ವೇಳೆ ಅದು ಎಷ್ಟೇ ಕಡಿಮೆ ಶಿಥಿಲವಾಗಿದ್ದರೂ, ನಿಕಟ ಭವಿಷ್ಯದಲ್ಲಿ ವಿಕಸನ ಹೊಂದಬಹುದೆಂದು ತೋರುವಂಥ ಯಾವುದೇ ಸಂಗತಿಗಿಂತಲೂ ಹೆಚ್ಚು ನಿಬಿಡವಾಗಿದ್ದರೂ ಸಹ ಆ ನಿರ್ಮಾಣವು ತೃಪ್ತಿಕರವಾಗಿರಲು, ಪರಿಣಾಮಕಾರಿಯಾಗಿರಲು ಅಥವಾ ಶಾಶ್ವತವಾಗಿರಲು ಸಾಧ್ಯವಿಲ್ಲ. ವಿಷಯಗಳ ಸ್ವರೂಪದಲ್ಲಿ, ಒಂದು ಎರಡನೇ ಹಂತ, ಹೆಚ್ಚಿನ ಬಿಗಿತದತ್ತ ಒಂದು ಕ್ರಿಯೆ, ರಾಷ್ಟ್ರೀಯ ಸ್ವಾತಂತ್ರ್ಯಗಳ ನಿರ್ಬಂಧಿಸುವಿಕೆ ಮತ್ತು ಭೂಮಿಯ ಜನರ ಮೇಲೆ ಏಕರೂಪದ ನಿಯಂತ್ರಣವನ್ನು ಹೊಂದಿರುವ ಒಂದು ವಿಶಿಷ್ಟವಾದ ಕೇಂದ್ರೀಯ ಪ್ರಾಧಿಕಾರದ ಸ್ಥಾಪನೆ ಅಲ್ಲಿ ಇರಲೇಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/394 – ಶ್ರೀ ಅರವಿಂದರು**

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನು: ಜಾನ್ವಿ**

### 37

### ಎರಡನೆಯ ಸರಣಿ:
### ಅಧ್ಯಾಯ – 3
### ಪರಮೇಶ್ವರ (3/2)

ಮರಣ ಸಮಯದಲ್ಲಿ ಮನಸ್ಸಿನ ಸ್ಥಿತಿ ಮತ್ತು ವಿಚಾರಗಳ ಬಗ್ಗೆ ಗೀತೆ ಬಹಳ ಮಹತ್ವ ನೀಡುತ್ತದೆ. ಚೈತನ್ಯ(ಅಥವಾ ಪ್ರಜ್ಞೆ)ದಲ್ಲಿರುವ ಸೃಜನಶೀಲ ಶಕ್ತಿಯನ್ನು ನಾವು ಗುರುತಿಸದಿದ್ದರೆ, ಗೀತೆಯು ಈ ರೀತಿಯ ಮನಃಸ್ಥಿತಿಗೆ ನೀಡುವ ಮಹತ್ವವನ್ನು ತಿಳಿದುಕೊಳ್ಳುವುದು ಕಠಿಣವಾಗುವುದು. ನಮ್ಮ ವಿಚಾರ, ಸಂಕಲ್ಪ, ಆಂತರಿಕ ದೃಷ್ಟಿ ಮತ್ತು ಶ್ರದ್ಧೆಗಳು ಯಾವುದಕ್ಕೆ ಒತ್ತು ನೀಡಿ ಕಾಯಂ ಆಗಿ ನೆಲೆ ನಿಲ್ಲುವುವೋ ಅದಕ್ಕನುಗುಣವಾಗಿ ನಮ್ಮ ಆಂತರಿಕ ಸ್ವರೂಪವು ಬೆಳೆದು ನಿಲ್ಲಲು ಪ್ರಯತ್ನ ಮಾಡುವುದು. ನಮ್ಮ ಬಾಹ್ಯ ಪ್ರಕೃತಿಗೆ ಗುಲಾಮನಾಗಿರುವ ಸರ್ವ ಸಾಮಾನ್ಯ ಮನಃಸ್ಥಿತಿಯು ಬಾಹ್ಯ ವಸ್ತುಗಳಿಗೆ ಅಂಟಿಕೊಳ್ಳುತ್ತದೆ. ಆದರೆ ಮಾನಸೋತ್ತರ ಉಚ್ಚ ಆಧ್ಯಾತ್ಮಿಕ ಮತ್ತು ಸ್ವಯಂ ವಿಕಾಸಶೀಲ ಅನುಭವಗಳಾದಾಗ ನಮ್ಮ ಪ್ರವೃತ್ತಿಯು ಬಾಹ್ಯ ವಸ್ತುಗಳಿಂದ ಬಿಡಿಸಿಕೊಂಡು ನಿರ್ಣಯಾತ್ಮಕ ರೂಪಧಾರಣ ಮಾಡುತ್ತವೆ. ನಾವು ಸ್ವ–ಸಂಕಲ್ಪ ಪೂರ್ವಕ ಏನನ್ನು ಸದಾ ಬಯಸುತ್ತೇವೆಯೋ, ನಿಧಾನವಾಗಿಯಾದರೂ ನಾವು ಅದೇ ಆಗಿ ರೂಪಗೊಳ್ಳುತ್ತಿರುವುದನ್ನು ಆ ಉನ್ನತ ಸ್ಥಿತಿಯಲ್ಲಿ ಕಾಣುತ್ತೇವೆ. ಇದರಲ್ಲಿ ಏನಾದರೂ ವ್ಯತ್ಯಾಸವಾದರೆ ವಿಚಾರ ಪತನ ಹೊಂದಿದರೆ ಪಥಭ್ರಷ್ಟವಾದೆವಾದರೆ ನಮ್ಮ ಪ್ರಗತಿ ಕುಂಠಿತವಾಗುವುದು, ಗತಿ ಮಂದವಾಗುವುದು. ಇದರಿಂದಾಗಿ ನಾವು ಪುನಃ ಮೊದಲಿನ ಸ್ಥಿತಿಗೆ ಬಂದುಬಿಡಬಹುದು. ಹೊಸ ಅನುಭವದ ನೆಲೆಯಲ್ಲಿ ಗಟ್ಟಿಯಾಗಿ ಎಲ್ಲಿಯವರೆಗೆ ನಿಲ್ಲಲು ನಮಗೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಈ ಹೊಯ್ದಾಟ ಸಾಮಾನ್ಯವಾಗಿ ಇದ್ದೇ ಇರುವುದು. ನಮ್ಮ ಆಂತರಿಕ ಭಾವವೇ ಸಾಮಾನ್ಯವಾಗಿ ಬಿಟ್ಟು ನಾವು ಅಲ್ಲಿಯೇ ನೆಲೆಸುವಂತಾದರೆ ಮಾತ್ರ ಅದರ ಸ್ಮರಣೆ ನಮ್ಮಲ್ಲಿ ಕಾಯಂ ಆಗಿ ನೆಲೆಯೂರಿ ನಿಲ್ಲುವುದು. ಅದೇ ನಮ್ಮ ಸಾಮಾನ್ಯ ಪ್ರಜ್ಞೆಯಾಗಿ ಉಳಿಯುವುದು. ಆದ್ದರಿಂದ ಜೀವನದ ಕ್ಷೇತ್ರವನ್ನು ದಾಟಿ ಮರಣ ಹೊಂದುವ ವಿಕಟ ಸಮಯದಲ್ಲಿ

ನಮ್ಮ ಮನಃಸ್ಥಿತಿಯು ಯಾವ ದೆಶೆಯಲ್ಲಿರುವುದು ಎಂಬುದು ಅತ್ಯಂತ ಮಹತ್ವದ ಸಂಗತಿಯಾಗುವುದು. ಆದರೆ ಮರಣ ಸಮಯದಲ್ಲಿನ ಈ ಸ್ಮೃತಿಯು ಎಷ್ಟೇ ಬಲಶಾಲಿಯಾಗಿದ್ದರೂ ಸಹ, ಜೀವನದುದ್ದಕ್ಕೂ ನಾವು ಬೆಳೆಸಿಕೊಂಡು ಬಂದಿರುವ ಸ್ವಾಭಾವಿಕ ಮನೋವೃತ್ತಿಗೆ ಅನುರೂಪವಾಗಿರದೇ ವಿಸಂಗತವಾಗಿದ್ದರೆ ನಮ್ಮನ್ನು ಈ ಸ್ಮೃತಿಯು ಕಾಪಾಡಲಾರದು. ಗೀತೆಯ ಈ ವಿಚಾರ ಧಾರೆಯು ಸರ್ವ ಸಾಮಾನ್ಯ ಜನರ ಧಾರ್ಮಿಕ ನಂಬಿಕೆಗೆ ವಿರುದ್ಧವಾಗಿದೆ. ಧರ್ಮವಿರುದ್ಧ ಜೀವನ ನಡೆಸಿ ಮರಣ ಸಮಯದಲ್ಲಿ ಮಾತ್ರ ಕ್ರಿಶ್ಚಿಯನ್‌ರ ಪಾದ್ರಿಯಿಂದ ಪಾಪ ನಿವಾರಣೆಯನ್ನು ಮಾಡಿಕೊಂಡು ಸದ್ಗತಿ ಹೊಂದಿದ ಉದಾಹರಣೆ ಎಲ್ಲಿಯೂ ಸಿಕ್ಕುವುದಿಲ್ಲ. ಮೂಢ ನಂಬಿಕೆಯಂತೆ ಆಕಸ್ಮಿಕವಾಗಿಯೋ ಅಥವಾ ಸಹಜವಾಗಿಯೋ ಬನಾರಸ ಕಾಶಿಯಲ್ಲಿ ಪ್ರಾಣ ಬಿಟ್ಟು, ಗಂಗೆಯಲ್ಲಿ ಸ್ನಾನ ಮಾಡಿ, ಪಾಪ ಕಳೆದುಕೊಂಡು ಮೋಕ್ಷ ಹೊಂದಿದ ನಿದರ್ಶನ ಎಲ್ಲಿಯೂ ದೊರಕದು. ಗೀತೆಯು ಇಂಥ ನಂಬಿಕೆಗಳಿಗೆ ಆಸ್ಪದ ನೀಡುವುದಿಲ್ಲ. ಶರೀರವು ಬಿದ್ದು ಹೋಗುವ ಸಮಯದಲ್ಲಿ ಜೀವವು ಮನಸ್ಸನ್ನು ಯಾವ ಆತ್ಮ ಸ್ಥಿತಿಯಲ್ಲಿ ನೆಲೆಗೊಳಿಸುವುದೋ "ಯಂಯಂ ಸ್ಮರನ್ ಭಾವಂ ತ್ಯಜತಿ ಅಂತೇ ಕಳೇವರಂ" (8/16) ಆ ಸ್ಥಿತಿಯಲ್ಲಿ ಜೀವನದುದ್ದಕ್ಕೂ ನಿರಂತರ ಅನುಸಂಧಾನ ಮಾಡಿರಬೇಕು. ಅನ್ಯಥಾ ಅದು ಸಾಧ್ಯವಾಗದು. "ಸದಾ ತದ್ ಭಾವ ಭಾವಿತಃ" ಎಂದು ಗೀತೆ ಹೇಳುವುದು. ಆದ್ದರಿಂದ ದೈವೀ ಗುರುವಾದ ಕೃಷ್ಣನು ಹೇಳುತ್ತಾನೆ. "ಅರ್ಜುನಾ ನೀನು ಅನುಕ್ಷಣವೂ ನನ್ನನ್ನೇ ನೆನೆಯುತ್ತ ಯುದ್ಧ ಮಾಡು, ನಿನ್ನ ಮನಸ್ಸು ಬುದ್ಧಿ ಎಲ್ಲವೂ ನನ್ನಲ್ಲಿ ನೆಲೆಸಿದ್ದು, ನನಗೆ ಅರ್ಪಿತವಾಗಿದ್ದರೆ "ಮಯಿ ಅರ್ಪಿತ ಮನೋ ಬುದ್ಧಿ" (8/7,8) ಖಂಡಿತವಾಗಿಯೂ ನೀನು ಕೊನೆಗೆ ನನ್ನನ್ನೇ ಸೇರುವಿ". ದಿವ್ಯ ಪರಮ ಪುರುಷನನ್ನು ಅನನ್ಯ ಭಾವದಿಂದ ನೆನೆಯುತ್ತ, ಅವನಲ್ಲಿಯೇ ಚಿತ್ತವನ್ನು ನೆಲೆ ನಿಲ್ಲಿಸಿ ಕರ್ಮ ಮಾಡುವ ಸಾಧಕನು ಆ ಪರಮ ಪುರುಷನನ್ನೇ ಹೊಂದುತ್ತಾನೆ".

ಇಲ್ಲಿ ಗೀತೆಯಲ್ಲಿ ಮೊದಲಿಗೆ ಶ್ರೇಷ್ಠನಾದ ಪುರುಷನ ವರ್ಣನೆ ಬರುತ್ತದೆ. ಇವನು ಅಕ್ಷರ ಬ್ರಹ್ಮನಿಗಿಂತ ಹೆಚ್ಚಿನವನು, ಶ್ರೇಷ್ಠನಾದವನು. ಇವನನ್ನು ಗೀತೆಯು ಪುರುಷೋತ್ತಮ ಎಂದು ಕರೆಯುತ್ತದೆ. ಇವನು ಕೂಡ ತನ್ನ ಕಾಲಾತೀತ ಶಾಶ್ವತೆಯಲ್ಲಿ ಅವಿಕಾರಿಯೇ, ಅಕ್ಷರನೇ; ಇವನು ಸೃಷ್ಟಿಯ ಆಚೆಗಿರುವವನು, ಆದರೆ ಕಾಲದ ಕ್ಷೇತ್ರದಲ್ಲಿ ಆಗಾಗ ಅನೇಕ ವಿಧ ಬೇರೆ ಬೇರೆ ವೇಷಗಳಲ್ಲಿ, ಸಂಕೇತಗಳಲ್ಲಿ ಅವನ ಅಪರೂಪದ ಅಸ್ಪಷ್ಟ ದರ್ಶನವಾಗಬಹುದು, ಅದನ್ನು ಗೀತೆಯು "ಅವ್ಯಕ್ತೋಕ್ಷರಃ"

ಎಂದು ವರ್ಣಿಸುತ್ತದೆ. ಆದರೂ ಇವನು ಕೇವಲ ನಿರಾಕಾರನಲ್ಲ ಅಥವಾ ಅಗೋಚರ ಅಸ್ತಿತ್ವವುಳ್ಳವನೆಂದು ಅರ್ಥವಲ್ಲ. ಇವನನ್ನು "ಅನಿರ್ದೇಶ್ಯಂ" ಎಂದು ಹೇಳುವ ಉದ್ದೇಶವೇನೆಂದರೆ, ಮನಸ್ಸಿಗೆ ತಿಳಿಯಬಹುದಾದ ಸೂಕ್ಷ್ಮತೆಗಿಂತ ಇವನ ಅಸ್ತಿತ್ವ ಸೂಕ್ಷ್ಮವಾಗಿದೆ, ನಮ್ಮ ವಿಚಾರ, ಬುದ್ಧಿಗಳು ಇವನ ಬಳಿಗೆ ಹೋಗಲಾರವು. "ಅಣೋರಣೀಯಾಂ ಸಮಚಿಂತ್ಯ ರೂಪಂ" (8/9) ಈ ಪರಮ ಪುರುಷನು ಸರ್ವ ದ್ರಷ್ಟಾರನೂ, ಪುರಾತನನೂ ಆಗಿದ್ದಾನೆ. ಅಸಿತ್ತ್ವದಲ್ಲಿ ಬರುವ ಎಲ್ಲ ವಸ್ತುಗಳನ್ನು ಇವನು ಅವುಗಳ ಉಚಿತ ಸ್ಥಾನದಲ್ಲಿರಿಸುತ್ತ ಎಲ್ಲವನ್ನೂ ಶಾಸನಕ್ಕೆ ಒಳಪಡಿಸುವ ಪರಮ ರಾಜನಿದ್ದ ಹಾಗೆ. "ಕವಿಂ ಪುರಾಣಂ ಅನುಶಾಸಿತಾರಂ ಸರ್ವಸ್ಯಧಾತಾರಮ್" (8/9) ಇವನೇ ಪರಮಾತ್ಮನು, ಅಂದರೆ ವೇದಜ್ಞರು ಹೇಳುವ ಅಕ್ಷರ ಸ್ವಯಂಭೂ ಬ್ರಹ್ಮನು ಇವನೇ ಆಗಿದ್ದಾನೆ. ಮರ್ತ್ಯ ಮನಸ್ಸಿನ ವಿಕಾರಗಳನ್ನು ದಾಟಿ ತಪಸ್ವಿಗಳು ಪ್ರವೇಶಿಸುವ ತತ್ತ್ವ ಇದು (ಇವನು). ಯಾವ ವಸ್ತು ಪ್ರಾಪ್ತಿಗಾಗಿ ಶಾರೀರಿಕ ವಿಕಾರಗಳನ್ನು ನಿಯಂತ್ರಿಸಿ ಸಾಧನೆ ಮಾಡುವುರೋ ಆ ತತ್ತ್ವವೇ ಇದು (ಇವನು). ಈ ತತ್ತ್ವವು ಶಾಶ್ವತವೂ ಸತ್ಯವೂ ಸರ್ವೋಚ್ಚವೂ ಆಗಿರುವುದು ಇದೇ ಸರ್ವೋಚ್ಚ ಪದವು (8/11) ಇದು ಅಸ್ತಿತ್ವದ ಕೊನೆಯ ಮೆಟ್ಟಿಲು. ಕಾಲದಲ್ಲಿ ಅಂತಿಮ ಪಯಣದ ಗುರಿ ಇದು. ಇದು ಮಾತ್ರ ನಿಶ್ಚಲವೂ, ಸನಾತನವೂ, ಪುರಾಣವೂ, ಪರಮೋಚ್ಚ ಸ್ಥಿತಿಯೂ ಆಗಿರುವುದು. "ಪರಮಂ ಸ್ಥಾನ ಮಾದ್ಯಮ್".

ಮರಣದ ಬಾಗಿಲನ್ನು ದಾಟಿ ಯೋಗಿಯು ಪುರುಷೋತ್ತಮನನ್ನು ಹೊಂದುವಾಗ ಅವನ ಅಂತಿಮ ಮನಃಸ್ಥಿತಿ ಹೇಗಿರುತ್ತದೆ ಎಂಬುದನ್ನು ಗೀತೆ ವಿವರಿಸುತ್ತದೆ. ಅವನ ಮನಸ್ಸು ನಿಶ್ಚಲವಾಗಿರುತ್ತದೆ, ಅವನ ಆತ್ಮವು ಯೋಗ ಶಕ್ತಿಯಿಂದ ಕೂಡಿರುತ್ತದೆ, ಭಕ್ತಿಯಲ್ಲಿ ಭಗವಂತನೊಡನೆ ಒಂದಾಗಿರುತ್ತದೆ; ಪ್ರೇಮದ ಮೂಲಕ ಪ್ರಾಪ್ತವಾದ ಏಕತೆಯನ್ನು ಕೇವಲ ಜ್ಞಾನದ ಮೂಲಕ ಸಾಧ್ಯವಾಗುವ ನಿರಾಕಾರ ಬ್ರಹ್ಮ ಸ್ಥಿತಿಯನ್ನು ಇಲ್ಲಿ ಅಲ್ಲಗಳೆಯುವುದಿಲ್ಲ ಮತ್ತು ಅದು ಯೋಗದ ಭಾಗವಾಗಿ ಕೊನೆಯವರೆಗೂ ಉಳಿಯುವುದೆಂದು ಗೀತೆ ಹೇಳುತ್ತದೆ. ಅದೇ ರೀತಿ ಪ್ರಾಣ ಶಕ್ತಿಯೂ ಸಹಿತ ಮೇಲ್ಮುಖವಾಗಿ ಸೆಳೆಯಲ್ಪಟ್ಟು ಭ್ರೂಮಧ್ಯದಲ್ಲಿ, ಗೂಢ ಆಧ್ಯಾತ್ಮಿಕ ದೃಷ್ಟಿಯ ಕೇಂದ್ರ ಸ್ಥಾನದಲ್ಲಿ ಸ್ಥಿತವಾಗುತ್ತದೆ. ಇಂದ್ರಿಯಗಳ ದ್ವಾರಗಳು ಮುಚ್ಚಿಹೋಗುತ್ತವೆ, ಮನಸ್ಸು ಹೃದಯದಲ್ಲಿ ನೆಲೆ ನಿಲ್ಲುತ್ತದೆ, ಚಂಚಲ ವೃತ್ತಿಯಿಂದ ಸದಾ ಚಲಾಯಮಾನವಾಗಿರುವ ಪ್ರಾಣ ಶಕ್ತಿಯು ಊರ್ಧ್ವ ಮುಖವಾಗಿ ಸೆಳೆಯಲ್ಪಟ್ಟು ಶಿರಸ್ಸಿನಲ್ಲಿ ಕೇಂದ್ರಿತವಾಗುತ್ತದೆ, ಬುದ್ಧಿಯು ರಹಸ್ಯ ನಾದವಾದ

ಓಂಕಾರದಲ್ಲಿ. ಅದರ ಪಾರಾಯಣದಲ್ಲಿ ತೊಡಗಿಕೊಳ್ಳುತ್ತದೆ. ಪ್ರಣವದ ಅರ್ಥದಲ್ಲಿ, ಭಗವಂತನನ್ನು ಅದು ನೆನೆಯುವ ಚಿಂತನದಲ್ಲಿ ತೊಡಗಿಕೊಳ್ಳುತ್ತದೆ. "ಮಾಂ ಅನುಸ್ಮರನ್" ಇದು ಯೋಗಿಯ ದಾರಿ. ಸರ್ವಾತೀತನೂ ಶಾಶ್ವತನೂ ಆಗಿರುವ ಪುರುಷೋತ್ತಮನಿಗೆ ತನ್ನ ಇಡೀ ಅಸ್ತಿತ್ವವನ್ನೇ ಅವನು ಸಮರ್ಪಿಸಿ ಬಿಡುತ್ತಾನೆ. ಇದು ಕೇವಲ ಪ್ರಕ್ರಿಯೆ ಮಾತ್ರ. ಅವಶ್ಯವಾದ ಸಂಗತಿ ಏನೆಂದರೆ, ಮನಸ್ಸು ಸ್ವಲ್ಪವೂ ಕದಲದೇ ಅವಿಚಲಿತವಾಗಿ ಭಗವಂತನನ್ನೇ ನೆನೆಯುತ್ತಿರಬೇಕು. ಸಾಮಾನ್ಯ ವ್ಯಾವಹಾರಿಕ ಕೆಲಸಗಳಲ್ಲಾಗಲಿ, ಯುದ್ಧದಂಥ ವಿಕಟ ಪ್ರಸಂಗಗಳಲ್ಲೇ ಆಗಲಿ, ಕ್ಷಣ ಕೂಡ ಬಿಡದೇ ಜೀವನವಿಡೀ ಯೋಗವನ್ನು ಅನುಸಂಧಾನ ಮಾಡಬೇಕು. "ಮಾಂ ಅನುಸ್ಮರ ಯುದ್ಧ್ಯಚ" ಯಾರು ಇದನ್ನು ಮಾಡುವುರೋ ಅವರು ನನ್ನನ್ನು ಸುಲಭವಾಗಿ ಹೊಂದುತ್ತಾರೆ (8/14) ಎಂದು ಸ್ವತಃ ಕೃಷ್ಣನೇ ಹೇಳುತ್ತಾನೆ. ಯಾರು ಈ ಪರಿಪೂರ್ಣ ಸ್ಥಿತಿಯನ್ನು ಪಡೆಯುವುರೋ ಅವರೇ ಮಹಾತ್ಮರು (8/15).

ಮೇಲೆ ಹೇಳಿದ ರೀತಿಯಲ್ಲಿ ಜೀವನದಿಂದ ಪಾರುಗೊಂಡ ಜೀವವು (soul) ವಿಶ್ವೋಪರಿ ಲೋಕಗಳಿಗೆ ಹೋಗುವುದು (supracosmic). ವಿಶ್ವ ರಚನೆಯಲ್ಲಿನ ಉನ್ನತ ಸ್ತರಗಳಾದ ಸ್ವರ್ಗಗಳು ತಾತ್ಕಾಲಿಕ ಸ್ತರಗಳಾಗಿದ್ದು ಅಲ್ಲಿಂದ ಜೀವವು ಪುನಃ ಭೂಲೋಕದಲ್ಲಿ ಜನ್ಮ ತಾಳುತ್ತದೆ. ಆದರೆ ಪುರುಷೋತ್ತಮನ ಸಮೀಪಕ್ಕೆ ಹೋದ ಜೀವಕ್ಕೆ ಮಾತ್ರ ಪುನರ್ಜನ್ಮದ ಅಗತ್ಯ ಇರುವುದಿಲ್ಲ. ಅನಿರ್ವಚನೀಯ ನಿರಂಜನ ಬ್ರಹ್ಮನನ್ನೇ ಕುರಿತು ತಪಸ್ಸು (ಚಿಂತನೆ ಅಥವಾ ಧ್ಯಾನ) ಮಾಡುವವರಿಗೆ ಯಾವ ಫಲ ದೊರೆಯುವುದೋ ಅದೇ ಫಲವು ಜ್ಞಾನ ಕರ್ಮ ಭಕ್ತಿಯ ಮೂಲಕ ಕೂಡ ಕರ್ಮಾಧ್ಯಕ್ಷನೂ, ಮಾನವನ ಪರಮ ಸ್ನೇಹಿತನೂ (The friend of mankind) ಸರ್ವಸತ್ತಾಧೀಶನೂ ಆಗಿರುವ ಪರಮೇಶ್ವರನಿಂದ ಲಭಿಸುವುದು. ಅವನನ್ನು ತಿಳಿಯಲು, ಅವನನ್ನೇ ಅರಸುತ್ತ ಹೋಗುವ ಪ್ರಯತ್ನ ಮಾಡುವ ಸಾಧಕನಿಗೆ ಪುನರ್ಜನ್ಮ ಇರುವುದಿಲ್ಲ. ಅವನು ಕರ್ಮದ ಚಕ್ರದ ಪರಿಧಿಯಿಂದ ಹೊರಹೋಗಿ ಬಿಡುತ್ತಾನೆ. ಅವನು ಮರ್ತ್ಯ ಜೀವಿಯು ಪಡುವ ಕಷ್ಟ, ನೋವುಗಳಿಂದ ಶಾಶ್ವತವಾಗಿ ಪಾರಾಗಿ ಸಂತೃಪ್ತಿಯಿಂದ ಇರುತ್ತಾನೆ. ಜನನ ಮರಣಗಳ ಚಕ್ರ ಮತ್ತು ಅದರಿಂದ ಪಾರಾಗುವ ವಿಷಯಕ್ಕೆ ನಮಗೆ ಮನದಟ್ಟಾಗಲೆಂದು, ಈ ಸಂದರ್ಭದಲ್ಲಿ ಗೀತೆಯು ವಿಶ್ವಾತ್ಮನ ಯುಗ–ಚಕ್ರದ ಪ್ರಾಚೀನ ಪರಿಕಲ್ಪನೆಯನ್ನು ಪ್ರಸ್ತಾಪಿಸುತ್ತದೆ, ಇದೇ ವಿಚಾರದಾರೆಯೇ ಮುಂದೆ, ಭಾರತದ ವಿಶ್ವ–ವಿಜ್ಞಾನದ (ಸೃಷ್ಟಿ ನಿರೂಪಣೆಯ) ಪ್ರಮುಖ ಭಾಗವಾಗಿ ಮಾರ್ಪಟ್ಟಿದೆ. ಈ ಉಪಪತ್ತಿ ಹೇಗಿದೆ ಅಂದರೆ, ವಿಶ್ವವು ವ್ಯಕ್ತ

ಮತ್ತು ಅವ್ಯಕ್ತ ಹೀಗೆ ಎರಡು ಅವಸ್ಥೆಗಳಲ್ಲಿ ಸರದಿಯಂತೆ ಚಲಿಸುತ್ತಿರುತ್ತದೆ; ಇದು ಶಾಶ್ವತವಾದ ಚಕ್ರವು. ವ್ಯಕ್ತ ಮತ್ತು ಅವ್ಯಕ್ತಗಳ ಸ್ಥಿತಿ–ಕಾಲ ಒಂದೇ ರೀತಿಯಾಗಿರುತ್ತದೆ. ಈ ಕಾಲವನ್ನು ಬ್ರಹ್ಮನ ದಿನ(ವ್ಯಕ್ತ ಕಾಲ)ವೆಂದೂ ಬ್ರಹ್ಮನ ರಾತ್ರಿಯೆಂದೂ (ಅವ್ಯಕ್ತ ಕಾಲ) ಹೇಳಲಾಗುವುದು. ಬ್ರಹ್ಮನ ವ್ಯವಹಾರದ ಅವಧಿಯು ಒಂದು ಸಾವಿರ ಯುಗಗಳಾಗಿರುವುದು. ಅವನ ಹಗಲು ಅಂದರೆ ಎಲ್ಲ ಭೂತಗಳು ವ್ಯಕ್ತವಾಗುವ ಕಾಲ; ಅವನಿಗೆ ರಾತ್ರಿಯಾಗುತ್ತಲೇ ಎಲ್ಲ ಭೂತಗಳು ಅವ್ಯಕ್ತದಲ್ಲಿ ಸೇರಿ ಹೋಗುತ್ತವೆ. ಈ ರೀತಿ ಎಲ್ಲ ಜೀವರಾಶಿಗಳು (ಭೂತಗಳು) ಅಗತಿಕವಾಗಿ ಪ್ರಭವ (ಅಸ್ತಿತ್ವದಲ್ಲಿ ಬರುವುದು) ಮತ್ತು ಪ್ರಳಯ (ಅಸ್ತಿತ್ವದಿಂದ ಹೊರ ಹೋಗುವುದು) ಈ ಅವಸ್ಥೆಗಳಲ್ಲಿ ಪುನಃ ಪುನಃ ವಿಹರಿಸುತ್ತಿರುತ್ತವೆ. "ಭೂತ್ವಾ ಅಭೂತ್ವಾ", ಇದು ನಿರಂತರವಾದ ಅವಸ್ಥಾಂತರ ಚಕ್ರ. ಆದರೆ ಈ "ಅವ್ಯಕ್ತ"ವನ್ನು ಪರಮಾತ್ಮನ ಮೂಲ ಅವ್ಯಕ್ತ ಸ್ಥಿತಿ ಎಂದು ಭಾವಿಸಬಾರದು – ಭಗವಂತನ ಇನ್ನೊಂದು ಅವ್ಯಕ್ತದ ಸ್ಥಿತಿಯನ್ನು "ಭಾವೋ..ನ್ಯಃ" ಜೀವಿಗಳು ಪಡೆಯುತ್ತವೆ. ವಿಶ್ವದ ಅವ್ಯಕ್ತದ ಆಚೆ ಇನ್ನೊಂದು ವಿಶ್ವಾತೀತ ಅವ್ಯಕ್ತವಿದೆ, ಅದು ಪರಮೇಶ್ವರನ ಮೂಲ ಸ್ವರೂಪ – ಇಲ್ಲಿ ಅವನು ತನ್ನ ಮೂಲ ನಿತ್ಯ ಆತ್ಮ ಸ್ಥಿತಿಯಲ್ಲಿ ಇರುತ್ತಾನೆ. ಇದು ಬ್ರಹ್ಮಾಂಡದ ವ್ಯಕ್ತ ಸ್ಥಿತಿಗೆ ವಿರುದ್ಧವಾದುದಲ್ಲ, ಆದರೆ ಅದರಿಂದ ಬಹಳ ದೂರದಲ್ಲಿರುತ್ತದೆ. ಇದು ಅವ್ಯಯವೂ, ವಿಕಾರ ರಹಿತವೂ, ಪರಿವರ್ತನಾ ರಹಿತವೂ ಶಾಶ್ವತವೂ ಆಗಿದ್ದು ಸಕಲ ಜೀವರಾಶಿಗಳು ನಾಶವಾಗುವ ಪ್ರಳಯದ ಜೊತೆ ನಾಶವಾಗುವುದಿಲ್ಲ. "ಅವನೇ ಅವ್ಯಕ್ತನಾದ ಅವಿಕಾರಿಯಾದ, ಅಕ್ಷರನಾದ ಪರಮೇಶ್ವರನು, ಇವನನ್ನೇ ಪರಮಪದ, ಪರಮಗತಿ ಎಂದು ಹೇಳುತ್ತಾರೆ". ಅಲ್ಲಿಗೆ ಹೋಗಿ ಮುಟ್ಟಿದ ಮೇಲೆ ಹಿಂತಿರುಗಿ ಬರುವ ಪ್ರಮೇಯ ಇಲ್ಲ. ಜನನ ಮರಣಗಳ ಚಕ್ರದಿಂದ ಆ ವ್ಯಕ್ತಿಯು ಪಾರಾಗಿ ಬಿಡುತ್ತಾನೆ (8/16–21).

ಗೀತೆಯು ಹೇಳುವ ವಿಶ್ವ ರಚನೆಯ ಪರಿಕಲ್ಪನೆಯನ್ನು ನಾವು ಒಪ್ಪಬಹುದು ಅಥವಾ ಒಪ್ಪದಿರಲೂ ಬಹುದು. ಅಹೋರಾತ್ರವೇತ್ತರು (8/17) ಹೇಳುವ ಈ ಮತವು ಮಾತ್ರ ಗೀತೆಯ ಪ್ರತಿಪಾದನೆಯಲ್ಲಿ ಮಹತ್ವದ ತಿರುವು ಪಡೆಯುತ್ತದೆ. ಸದಾ ಅವ್ಯಕ್ತನಾಗಿಯೇ ಉಳಿಯುವ ಪರಮ ಪುರುಷನು ವಿಶ್ವದ ಪ್ರಕಟನೆ ಅಥವಾ ಅಪ್ರಕಟನೆಯ ಬಗ್ಗೆ ಯಾವ ಸಂಬಂಧವನ್ನು ಹೊಂದಿಲ್ಲ, ಅವನು ಸದಾ ಅಲಕ್ಷಣ, ಲಕಣ್ಷಾತೀತ ಸತ್ತೆಯಾಗಿದ್ದಾನೆ. ಇವನನ್ನು ಹೊಂದಬೇಕಾದರೆ ಜಗದಭಿವ್ಯಕ್ತಿಯಲ್ಲಿ ನಾವು ಗಳಿಸಿರುವುದೆಲ್ಲವನ್ನೂ ತ್ಯಾಗ ಮಾಡಬೇಕು. ಮನದ ಜ್ಞಾನ, ಹೃದಯದ

ಪ್ರೇಮ, ಯೋಗ ಸಾಮರ್ಥ್ಯ, ಅಖಂಡ ಆಂತರಿಕ ಚೈತನ್ಯ ಇವುಗಳ ಪೈಕಿ ಏನನ್ನೂ ಅಲ್ಲಿಗೆ ಕೊಂಡೊಯ್ಯಲಾಗದು. ಎಲ್ಲವನ್ನು ಬಿಟ್ಟೇ ಅಲ್ಲಿಗೆ ಹೋಗಬೇಕು. ಆ ಪರಮ ತತ್ತ್ವವು ಅವ್ಯವಹಾರ್ಯ ಅಂದರೆ ಯಾವುದರ ಜೊತೆಗೂ ಸಂಬಂಧವನ್ನೇ ಇಟ್ಟುಕೊಳ್ಳದ ಅದರ ಜೊತೆ ಪ್ರೀತಿ, ಭಕ್ತಿ ಮಾಡುವುದಾದರೂ ಹೇಗೆ? ಗೀತೆಯು ಹೇಳುತ್ತದೆ, ಈ ಪರಮ ಪುರುಷನು ನಿತ್ಯ ಅವ್ಯಕ್ತನೂ, ವಿಶ್ವಾತೀತನೂ ಆಗಿದ್ದು, ಅನನ್ಯ ಭಕ್ತಿಗೆ ಒಲಿಯುತ್ತಾನೆ, ಅವನನ್ನು ಭಕ್ತಿಯಿಂದ ಹೊಂದಲು ಸಾಧ್ಯವಿದೆ. ಈ ಪರಮ ಪುರುಷನಲ್ಲಿ ಸಮಸ್ತ ಭೂತ ಪ್ರಕೃತಿಯೇ ಇದೆ. ಅವನು ವಿಶ್ವವನ್ನೆಲ್ಲ ಸರ್ವತೋ ವ್ಯಾಪಿಸಿಕೊಂಡಿದ್ದಾನೆ (8/22) ಅಂದರೆ ಈ ಪುರುಷನು ಮಾಯಾ ಪ್ರಪಂಚದಿಂದ ಸಂಪೂರ್ಣ ಅಲಿಪ್ತನಾಗಿರುವ, ಉದಾಸೀನ, ತಟಸ್ಥ ಅವ್ಯವಹಾರ್ಯ ತತ್ತ್ವವಲ್ಲ. ಅವನು ದ್ರಷ್ಟಾ, ಸೃಷ್ಟಿ ಕರ್ತಾ, ವಿಶ್ವನಿಯಾಮಕ. “ಕವಿಂ ಅನುಶಾಸಿತಾರಂ ಧಾತಾರಮ್” (8/9) ಮತ್ತು ವಾಸುದೇವಃ ಸರ್ವಮಿತಿ (8/19) ಎಲ್ಲವೂ ಆಗಿದ್ದಾನೆ. ಅವನು ಸರ್ವತ್ರವೂ ಇರುವ ಸಾರ್ವಕಾಲಿಕ ತತ್ತ್ವನಾಗಿದ್ದಾನೆ. ಅವನು ಅದ್ವಿತೀಯನೂ ಏಕನೂ ಹೌದು. ಈ ಪರಮ ಪುರುಷನನ್ನು ಪ್ರೀತಿಸಬೇಕು, ಅವನಲ್ಲಿ ಭಕ್ತಿ ಇರಿಸಬೇಕು. ನಮ್ಮ ಸಚೇತನ ಸಮಸ್ತ ಅಸ್ತಿತ್ವದೊಡನೆ ಶಕ್ತಿ, ಕ್ರಿಯೆ ಎಲ್ಲದರಲ್ಲೂ ಆ ಪರಮ ಪುರುಷನ ಜೊತೆ ಒಂದಾಗಬೇಕು. ಅದರಿಂದ ಪರಮ ಸಿದ್ಧಿ. ಪರಿಪೂರ್ಣತೆ ಮತ್ತು ಪರಾಮುಕ್ತಿ ಲಭಿಸುವುವು.

ಇಲ್ಲಿ ಗೀತೆಯು ಮತ್ತೊಂದು ಅತಿ ಕುತೂಹಲಕಾರಿಯಾದ ವಿಚಾರವೊಂದನ್ನು ಎತ್ತಿಕೊಳ್ಳುತ್ತದೆ. ಪ್ರಾಚೀನ ವೇದಾಂತದ ಅನುಭಾವಿಗಳ ದೃಷ್ಟಿಕೋನವನ್ನು ಇಲ್ಲಿ ಪ್ರಸ್ತಾಪಿಸುತ್ತದೆ. ಯೋಗಿಯು ಮರುಜನ್ಮ ತಾಳಬೇಕೋ ಬೇಡವೋ ಎಂಬುದನ್ನು ನಿರ್ಧಾರ ಮಾಡಿಕೊಂಡೇ ಶರೀರ ತ್ಯಾಗ ಮಾಡುತ್ತಾನೆ ಎಂಬ ಪರಿಕಲ್ಪನೆಯ ಮೇಲೆ ಅವನ ಶರೀರ ತ್ಯಾಗದ ಕಾಲವನ್ನು ಗೀತೆ ವಿಮರ್ಶಿಸುತ್ತದೆ. ಅಗ್ನಿ, ಜ್ಯೋತಿ, ದಿವ, ಶುಕ್ಲ ಪಕ್ಷ, ಉತ್ತರಾಯಣ ಈ ಆರು ತಿಂಗಳ ಅವಧಿಯನ್ನು ಬ್ರಹ್ಮಜ್ಞರು ಶರೀರ ತ್ಯಾಗಕ್ಕೆ ಯೋಗ್ಯ ಕಾಲವೆಂದು ಪರಿಗಣಿಸುತ್ತಾರೆ. ಈ ಕಾಲದಲ್ಲಿ ಶರೀರ ತ್ಯಾಗ ಮಾಡಿದರೆ ಬ್ರಹ್ಮತ್ವ ಪ್ರಾಪ್ತಿಯಾಗುವುದೆಂದು ನಂಬುತ್ತಾರೆ. ಇದಕ್ಕೆ ವಿರುದ್ಧವಾಗಿ ಧೂಮ, ಮಂಜು, ರಾತ್ರಿ, ಕೃಷ್ಣ ಪಕ್ಷ, ದಕ್ಷಿಣಾಯನ ಈ ಆರು ತಿಂಗಳ ಅವಧಿಯನ್ನು ಯೋಗ್ಯವೆಂದು ಭಾವಿಸಿ ದೇಹ ಬಿಡುವ ಯೋಗಿಗಳು ಚಂದ್ರ ಜ್ಯೋತಿಯೆಡೆಗೆ ತೆರಳುತ್ತಾರೆ. ಇವರು ಮತ್ತೆ ಜನ್ಮವೆತ್ತಬೇಕಾಗುತ್ತದೆ. ಇವುಗಳನ್ನು ಶುಕ್ಲ ಮಾರ್ಗ, ಕೃಷ್ಣ ಮಾರ್ಗ ಅಂತಲೂ ಕರೆಯುತ್ತಾರೆ. ಇವು ದೇವಯಾನ ಮತ್ತು ಪಿತೃಯಾನವೆಂದು

ಉಪನಿಷತ್ತು ಹೇಳುತ್ತವೆ. ಈ ಮಾರ್ಗಗಳನ್ನು ತಿಳಿದ ಯೋಗಿಯು ಮೋಹಗೊಳ್ಳುವುದಿಲ್ಲ. ಮೋಹದಿಂದ ತಪ್ಪು ಮಾಡುವುದಿಲ್ಲ (8/24–27).

ಈ ಪರಿಕಲ್ಪನೆಯು **ಯೌಗಿಕ ಅನುಭವದ ಪ್ರಕಾರ ಈ ಪರಿಕಲ್ಪನೆಯ ಹಿಂದೆ ಮನೋಭೌತಿಕ ಸತ್ಯವಿದೆಯೇ ವಿನಃ ಇದನ್ನೇ ಯಥಾವತ್ತಾಗಿ ಅನ್ವಯ ಮಾಡಬಹುದಾದ ಔಚಿತ್ಯ ಇರುವುದಿಲ್ಲ. ದಿವ್ಯ ಪ್ರಕಾಶದ ಹಾಗೂ ಕತ್ತಲೆಯ ಶಕ್ತಿಗಳ ನಡುವೆ ನಮ್ಮ ಆಂತರ್ಯದಲ್ಲಿ ನಡೆಯುವ ಯುದ್ಧದಲ್ಲಿ, ವರ್ಷದ ಪ್ರಕಾಶಮಯ ಸಮಯದಲ್ಲಿ ಬೆಳಕಿನ ಶಕ್ತಿಗಳ ಕೈ ಮೇಲಾಗುವುದು ಸಹಜವಿದೆ. ವರ್ಷದ ಕೃಷ್ಣ ಪಕ್ಷದ ಸಮಯದಲ್ಲಿ ಕತ್ತಲೆಯ ಶಕ್ತಿಗಳ ಕೈ ಮೇಲಾಗುತ್ತದೆ. ಈ ಸಮತೂಕದ ಹೋರಾಟವು ಆತ್ಯಂತಿಕ ವಿಜಯದವರೆಗೆ ನಿರಂತರ ನಡೆದಿರುವುದು. ಮಾನಸಿಕವೋ, ಭೌತಿಕ ಸತ್ಯವೋ ಅಥವಾ ಸಂಕೇತವೋ ಏನೇ ಆಗಿರಲಿ. ಇದು ಅನುಭಾವಿಗಳ (mystic) ಕಾಲದಿಂದ ಇಂದಿನವರೆಗೂ ಉಳಿದುಕೊಂಡು ಬಂದಿದೆ. ಅನುಭಾವಿಗಳು ಪ್ರತಿಯೊಂದು ಭೌತಿಕ ಸಂಗತಿ ಹಾಗೂ ವಸ್ತುವಿನಲ್ಲಿ ಯಾವುದಾದರೊಂದು ಪರಿಣಾಮಕಾರಕ ಮನೋವೈಜ್ಞಾನಿಕ ಸಂಕೇತವನ್ನು ಕಾಣುತ್ತಿದ್ದರು. ಹೀಗೆ ಬಾಹ್ಯ ಮತ್ತು ಆಂತರಿಕ ಸಂಗತಿಗಳಲ್ಲಿ ಅನ್ಯೋನ್ಯ ಕ್ರಿಯಾ ವಿನಿಮಯವನ್ನು ಜ್ಞಾನ–ಪ್ರಕಾಶ, ಅಗ್ನಿತತ್ತ್ವ – ಆಧ್ಯಾತ್ಮಿಕ ಶಕ್ತಿಯನ್ನು ಅನ್ವಯಿಸಿ ತಿಳಿದುಕೊಳ್ಳುತ್ತಿದ್ದರು. ನಾವು ಗಮನಿಸಬೇಕಾಗಿರುವುದೇನೆಂದರೆ ಈ ವಿವೇಚನೆಯ ಕೊನೆಯಲ್ಲಿ ಗೀತೆಯು ಈ ಪರಿಕಲ್ಪನೆಗೆ ಕೊಡುವ ತಿರುವು, ಆದೇಶವನ್ನು ಅದು “ಸದಾ ಯೋಗಯುಕ್ತನಾಗಿರು” (8/27) ಎಂದು ಆದೇಶಿಸುತ್ತದೆ.

ಈ ದೃಷ್ಟಿಯಿಂದ ನಿರಂತರ ಯೋಗ ಯುಕ್ತನಾಗಿರುವುದೇ ಅತಿ ಮಹತ್ವದ್ದು. ಈಶ್ವರನ ಜೊತೆ ಸರ್ವ ಜೀವ ಭಾವದಿಂದ ಏಕರೂಪ ಹೊಂದುವುದು. ಈ

---

**ಯೌಗಿಕ ಅನುಭವದ ಪ್ರಕಾರ ಈ ಪರಿಕಲ್ಪನೆಯ ಹಿಂದೆ ಮನೋ ಭೌತಿಕ ಸತ್ಯವಿದೆಯೇ ವಿನಾ ಇದನ್ನೇ ಯಥಾವತ್ತಾಗಿ ಅನ್ವಯ ಮಾಡಬಹುದಾದ ಔಚಿತ್ಯ ಇರುವುದಿಲ್ಲ. ದಿವ್ಯ ಪ್ರಕಾಶದ ಹಾಗೂ ಕತ್ತಲೆಯ ಶಕ್ತಿಗಳ ನಡುವೆ ನಮ್ಮ ಆಂತರ್ಯದಲ್ಲಿ ನಡೆಯುವ ಯುದ್ಧದಲ್ಲಿ, ವರ್ಷದ ಪ್ರಕಾಶಮಯ ಸಮಯದಲ್ಲಿ ಬೆಳಕಿನ ಶಕ್ತಿಗಳ ಕೈ ಮೇಲಾಗುವುದು ಸಹಜವಿದೆ. ವರ್ಷದ ಕೃಷ್ಣ ಪಕ್ಷದ ಸಮಯದಲ್ಲಿ ಕತ್ತಲೆಯ ಶಕ್ತಿಗಳ ಕೈ ಮೇಲಾಗುತ್ತದೆ. ಈ ಸಮತೂಕದ ಹೋರಾಟವು ಆತ್ಯಂತಿಕ ವಿಜಯದವರೆಗೆ ನಿರಂತರ ನಡೆದಿರುವದು.

ಏಕತೆಯು ಅಖಂಡವಾಗಿ, ಎಲ್ಲ ವಿಧದಲ್ಲಿಯೂ ಸಹಜ ಭಾವವಾಗಿ ನಿತ್ಯ ದೃಢವಾಗುವಂತೆ ಮಾಡುವುದು, ಸಮಗ್ರ ಜೀವನವನ್ನು ಕೇವಲ ಚಿಂತನೆ, ವಿಚಾರಗಳಲ್ಲಿ ಕಳೆಯದೇ ಕಾರ್ಯ, ಶ್ರಮ, ಸಾಹಸ, ಸಮರಗಳನ್ನು ಕೂಡ ಈಶ್ವರನನ್ನು ನೆನೆದು ಮಾಡುವುದೇ ಮುಖ್ಯ ಎಂದು ಗೀತೆ ಹೇಳುವುದು. "ಮಾಂ ಅನುಸ್ಮರಯುಧ್ಯಚ" (8/7) ಇದರರ್ಥವೇನೆಂದರೆ ಪ್ರಾಪಂಚಿಕ ಸಂಘರ್ಷಗಳ ಮಧ್ಯದಲ್ಲಿ ಕೂಡ ಈಶ್ವರನನ್ನೂ ಅರೆಕ್ಷಣ ಕೂಡ ಮರೆಯದೇ ನೆನೆಯುತ್ತಿರಬೇಕು. ನಿರಂತರ ಸ್ಮರಣೆಯು ಸಂಸಾರಸ್ಥನಾಗಿರುವವನಿಗೆ ಕಠಿಣವೇನೋ ನಿಜ, ಆದರೆ ಅಸಾಧ್ಯವಲ್ಲ. ಅನುಕೂಲಗಳನ್ನು ಒದಗಿಸಿಕೊಂಡು ಈ ಸಾಧನೆ ಮಾಡಬೇಕು. ನಮ್ಮ ಚೈತನ್ಯದಲ್ಲಿ ಸಕಲ ಜೀವರಾಶಿಗಳ ಜೊತೆ ಏಕತೆ ಸಾಧಿಸಿದರೆ, ನಮ್ಮ ಚಿಂತನೆಯಲ್ಲಿ ಪರಮಾತ್ಮನ ಚರಾಚರ ಸೃಷ್ಟಿ ಎಲ್ಲವೂ ಒಂದೇ ಆತ್ಮ ಎಂಬ ಭಾವ ಅಚ್ಚಳಿಯದೇ ಮೂಡಿದರೆ, ನೇತ್ರಾದಿ ಇಂದ್ರಿಯಗಳು ಕೂಡ ಎಲ್ಲೆಡೆಯೂ ಈಶ್ವರನನ್ನೇ ಕಾಣುತ್ತ ಭಗವಂತನ ಅನುಭೂತಿ ಹೊಂದುವಂತಾದರೆ ಎಲ್ಲವೂ ಬದಲಾವಣೆ ಹೊಂದುವುದು. ಸಾಮಾನ್ಯ ಇಂದ್ರಿಯಗಳು ಕಾಣುವಂತೆಯೇ ಅನುಭಾವಿಯ ಪ್ರಜ್ಞೆ ಕಾಣುವುದಿಲ್ಲ. ಪ್ರತಿಯೊಂದು ಜೀವಿಯಲ್ಲಿ, ವಸ್ತುವಿನಲ್ಲಿ ದೇವಾಧಿದೇವತೆಯೇ ಅದೃಶ್ಯವಾಗಿ ವಾಸವಾಗಿರುತ್ತಾನೆ ಎಂದೇ ಅವನು ಕಾಣುತ್ತಾನೆ. ನಮ್ಮ ಸಂಕಲ್ಪವು ಪ್ರಜ್ಞಾ ಪೂರ್ವಕವಾಗಿ ಈಶ್ವರನ ಸಂಕಲ್ಪ ಮತ್ತು ಕಾರ್ಯದ ಜೊತೆ ಒಂದಾದರೆ, ನಮ್ಮ ಎಲ್ಲ ಕಾರ್ಯಗಳು ಸಂಕಲ್ಪ ಪೂರ್ವಕ ಈಶ್ವರನ ಕಾರ್ಯದ ಜೊತೆ ಸೇರಿಕೊಂಡರೆ, ಅಲ್ಲಿಂದಲೇ ಜನಿಸುವಂತಾದರೆ, ಅದರ ಜೊತೆ ತಾದಾತ್ಮ್ಯ ಹೊಂದಲು ಸಾಧ್ಯವಾದರೆ, ಗೀತೆಯ ಆದೇಶವನ್ನು ಪೂರ್ಣತಃ ಪಾಲಿಸಲು ಸಾಧ್ಯವಾಗುವುದು. ಭಗವಂತನ ಸ್ಮರಣೆ ಎಂಬುದು ಆಗ ಮನಸ್ಸಿನ ಆವಾಗನವಾಗದೇ ನಮ್ಮ ಎಲ್ಲ ಕಾರ್ಯಗಳ ಮಧ್ಯೆ ಸಹಜ ಸ್ಥಿತಿ ತಾಳುವುದು ಮತ್ತು ಪ್ರಜ್ಞೆಯು ಮುಖ್ಯ ಸಾರಸತ್ವವಾಗಿಬಿಡುವುದು. ಜೀವವು ಪುರುಷೋತ್ತಮನ ಜೊತೆ ಸಹಜ ಸಮುಚಿತ, ಆಧ್ಯಾತ್ಮಿಕ ಸಂಬಂಧವನ್ನೂ ಸ್ಥಾಪಿಸುವುದು. ನಮ್ಮ ಸಮಗ್ರ ಜೀವನವೇ ಯೋಗವಾಗಿ ಮಾರ್ಪಡುವುದು. ಈಶ್ವರನ ಜೊತೆ ಒಂದಾಗುವುದು ಮತ್ತು ಪ್ರತಿಕ್ಷಣ ಅದು ಘನಿಷ್ಠವಾಗುತ್ತ ಹೋಗುವುದು.

(ಸಶೇಷ)

## ಶ್ರೀ ಅರವಿಂದರ
## ‘ಊರ್ವಶಿ’

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**5**

### ಅಧ್ಯಾಯ 2

ಬೆಳ್ಳಬೆಳ್ಳಗಾಗುತ ಬೆಳೆದ ಬಿಳಿಗಿರಿ ಬೆಟ್ಟಗಳ ಮೇಲೆ ಬೆಳಗಿದ ಬೆಳ್ಳಿಬೆಳಗಿನೊಳಗಿಂದ
ಅದ್ಭುತ, ಆಹ್ಲಾದಮಯದ ಅನುಭೂತಿಯನು ಪಡೆದು ಪರಂಧಾಮದೆಡೆ
 ಪಯಣಿಸಿದ
ಊರ್ವಶಿಯು, ಪುರಾಣಪುಣ್ಯಪ್ರವಚನದೊಳು ಪ್ರತಿಷ್ಠಾಪಿತಳಿಹ
 ಪಾತ್ರವಾಗುಳಿದಿರಲಿಲ್ಲ.
ಅದೇ ಹಳೆಯ ಹೊನ್ನಕಾಂತಿಯನು ಹರಿಸುವ ಪ್ರಾಕ್ತನದ ಪುಂಜವಾಗಿಯೇ
 ಪವಡಿಸಿರಲಿಲ್ಲ.
ಅಂದಿನವರೆಗೂ ಅನುಭವಜನ್ಯದಿ ಅವ್ಯಕ್ತವಾಗಿಯೇ ಅವಿತಿದ್ದ
 ಆತ್ಮಾನುಭೂತಿಯೊಂದು ಅಡಿಯಿಟ್ಟಿರಲು
ನಿಲಿಂಪನಾಕದಿ ನಿಯಮಿಸಿದ ನೂರು ನಿರ್ಬಂಧಗಳನೆಲ್ಲವದು ನಿರ್ಮಾಲ್ಯವಾಗಿಸಿ
 ನೆಳದಾಳದಿ ನೂಕಿತ್ತು.
ಮಾನಸದಲಿ ಮೆರೆವ ಮಹಾವೈಭವವನೇ ಮರೆಸಿ, ಮಣ್ಣೊಳು ಮೂಡಿದ
 ಮರ್ತ್ಯವನ್ನೇ ಮಹಾಕಾರಣವಾಗಿಸಿತ್ತು.
ಪರಿಚಿತವಿಹ ಪದಾರ್ಥ–ಪ್ರಕರಣಗಳೆಲ್ಲ ಪರಲೋಕದಿಂದೈತಂದ ಪ್ರಭಾವದೊಲು
 ಪರಿಗಣಿತವಾಗಿರಲು,
ಸಹಸ್ರಸೂರ್ಯಾಗ್ನಿಯರನೇ ಸಾಕ್ಷಾತ್ಕರಿಸಿಕೊಂಡ ಸುಮನಸಳ ದಿವ್ಯದರ್ಶನದ
 ದಿಡ್ಡಿಬಾಗಿಲಿನ ಮುಂದೆ
ಮರ್ತ್ಯದೃಷ್ಟಿಯ ಮಂಜೊಂದು ಮುಸುಕಿ, ಕಣ್ದಿಟ್ಟಿಗೋಚರವಿಹ ಕಾಣ್ಕೆಯನೆಲ್ಲ
 ಕಾರ್ಮಣದಂತೆ ಕಂಡರಿಸಿತ್ತು.
ಅಮರಲೋಕದ ಅಪ್ಸರಿಯಾಂತು ಊರ್ವಶಿಯ ಉರಿತಾಪಕೆ–ಉನ್ಮಾದಕೆ
 ಉಶ್ಯಾಪನವನೀವ ಪ್ರೇಮವೆಂಬ

ಪವಿತ್ರೋದಕಕಾಗಿ ಪರಂಧಾಮ ಸುತೆಯವಳು ಪರಿದಾಡಿಹಳು. ಹಾವಿನೊಲು
ಹರಿದಾಡಿಹಳು.
ಅವಳ ಅಭೀಪ್ಸೆಯಲಿ ಅನಿಮೇಷರಾಂತು ಅಮೃತಪುತ್ರರಿಗೆಂದೂ ಅವಕಾಶವಿರಲಿಲ್ಲ.
ಹೊನ್ನಲೋಕದ ಹರ್ಮ್ಯ–ಹೆದ್ದಾರಿಯೊಳಗೆ ನಡೆತರುವ ನಿರ್ಜರರಿಗೆಂದೂ
ನೆಲೆಯಿರಲಿಲ್ಲ.
ಜನ್ಮದಾರಭ್ಯ ಜರಾಮೃತ್ಯುಗಳಿಲ್ಲದೇ ಜನ್ಮಾಂತರದೊರೆಗೆ ಜೀವಿಸುವ
ಜಾನವರಿಗೆಂದೂ ಜಾಗವಿರಲಿಲ್ಲ;
ನಿಲಿಂಪನಾಕದ ನಂದನೋದ್ಯಾನದಿ ನಲಿದ ನೀರನಾರಿಯವಳು ನೆಲದ
ನೇಹಿಗತನಕೆಂದು ನೀರಡಿಸಿಹಳು.
ಕಣ್ಮುಚ್ಚಿ ತೆರೆಯುವನಿತರೊಳು ಕಾಲವಾಗಿ ಕಳೆದೋಗುವ ಕೆಳಲೋಕದ
ಕಾಂತನಿಗೆಂದು ಕನವರಿಸಿಹಳು.
ವಕ್ಷಸ್ಥಲದ ವಜ್ರಸಿಂಹಾಸನದಿ ಪ್ರತಿಷ್ಠಾಪಿತನಿಹ ಪುರೂರವನಾಂತು
ಪ್ರಾಣಪ್ರಿಯನಿಗೆಂದು ಪ್ರತೀಕ್ಷಿಸಿಹಳು.
ಆದರೂ ಅಮರಲೋಕದ ಆಜ್ಞೆಗೆ ಮಣಿದು ಮನೋಲೋಕದೆಡೆ ಮರಳಿದ
ಮಂದಾಕಿನಿಯವಳು,
ಕಾರ್ಗಾಲ ಕರೆವ ಕತ್ತಲರಾತ್ರಿಯಲಿ ಕಣ್ಗೆ ಕಾವಳವು ಕವಿದಿರಲು,
ಮುಗಿಲಿನೊಂದು ಮೂಲೆಯೊಳಗಿಂದ
ಮಿಂಚುಗೊಂಚಲಿನ ಮುನ್ನೂರುಗವಲುಗಳ ಮೂಡಿಸಿ ಮಹಾಂಧಕಾರವನರೆಕ್ಷಣ
ಮರೆಯಾಗಿಸಿ
ಮತ್ತೆಂದೂ ಮರಳದಿರೆನೆಂಬಂತೆ ಮಿನುಗಿ ಮಾಯವಾಗುವ ಮುಗಿಲು
ಮಲ್ಲಿಗೆಯೊಲಂತೆ,
ಇಂದ್ರಭವನದ ನೃತ್ಯಮಂದಿರದೊಳು ಸುಳಿದು ಸುಂದರಿಯರೊಡನೆ
ಸಹನರ್ತನದ ಸಹಭಾಗೀತ್ವಕೆ ಸೇರ್ವಳು.
ಸೂರ್ಯರಶ್ಮಿಗಳೇ ಅಪ್ಸರಿಯ ಅಂಗುಲಿಕೆಯಾಗಿರಲವಳು ವೈಣಿಕಳಾಗಿ
ತಂತಿಮಿಡಿದು ತಾನರಾಗವ ತೂರ್ವಳು.
ಸಾಮಗಾನಗಳ ಸುರಿಮಳೆಯನೇ ಸುರಿಸಿ ಸರಸಿಕರೆದುರು ಸೌಂದರ್ಯದ
ಸಮಾರಾಧನೆಯನಿತ್ತು ಸರಿಯುವಳು.
ನೋಡನೋಡುತ್ತಲೇ ನಿಲಿಂಪನೇತ್ರರುಗಳಿಂದ ಮರೆಯಾಗಿ ಮುಂದೋಡುವಳು.
ಮತ್ತೆಲ್ಲೋ ಮುನ್ನೂಕುವಳು.

ವಾರುಣವೃಕ್ಷದೂರ್ಧ್ವ ಮೂಲಗಳಲಿ ಮರೆಯಾಗಿಸಿಹ ಮಹಾಬೆಳಗಿನ
ಮೂರುಸೂಡಿಗಳ ಮೇಲೆತ್ತಿ
ಪರಾರ್ಧ–ಅಪರಾರ್ಧ–ಅಪ್ರಕೇತಗಳೆಂಬ ಆಡುಗೂಡಿನೊಳಗೆ ಅಡಗಿಕೊಂಡಿಹ
ಅಂಧಕಾರದ ಅಂತಸ್ತುಗಳ
ಕೋನಕೋನದೊಳಗೆ ಕುಳಿತಿರುವ ರಾಹುರಕ್ಕಸರನ್ನು ಚಿನ್ಮಯದ ದೀಪ್ತಿಯೋಗದಲಿ
ದಂಡಿಸಿ ದಿಕ್ಕುಪಾಲಾಗಿಸಿ,
ತೆರವಾದ ತಾಣದಲಿ ಪ್ರಜ್ಞಾಪ್ರಕಾಶದ ಪರಂಜ್ಯೋತಿ ಪುತ್ರರುಗಳಾದ
ಆದಿತ್ಯವರ್ಣಾಂಶುಗಳನು ತಂದಿರಿಸಿ,
ಸೂರ್ಯನಿರದೆ ಸೊರಗಿ ಸುಸ್ತಾಗುತೊರಗಿದ ಸಂದಿಗೊಂದಿಯೊಳಗೆ ಅಗ್ನಿಯ
ಆಂತರ್ಯಜ್ಯೋತಿಯನು ಬೆಳಗಿಸಿ,
ಕಾವಲಿಗೆಂದು ತಾ ತಂದ ಕುಡಿದೀಪದ ಕಿಡಿಗಳನು ಕೋಟಿಪಡೆಗಳಾಗಿ ಕರೆಸಿ,
ಲಕ್ಷನಕ್ಷತ್ರಗಳೆಂದವನು ಹೆಸರಿಸಿ,
ಮೃತಪ್ರಾಯರಿಹ ಮಾರ್ತಾಂಡರ ಆರಿದ ಕಿಚ್ಚಿನೊಳಗಿಂದ ನವನವೋನ್ಮೇಷರಿಹ
ನೂರುನೇಸರರನು ನೆರೆಸಿ,
ಖದ್ಯೋತವಲಯಗಳನೆಲ್ಲ ವಿದ್ಯುತ್‌ವಾಙ್ಮಯಗಳಾಗಿ ವಿಂಜೃಭಿಸುವ
ವಾಜಿನೀವತಿಯಾಂತು ಉಷಾದೇವಿಯು,
ಸ್ವರ್ಲೋಕದ ಸೀಮೆಯೊಳು ಸುಳಿದು ಸಾವಿರದ ಸೂರ್ಯಸಾವಿತ್ರಿಯರ
ಮಹಾಬೆಳಗನ್ನೇ ಮೆರೆಸಿರಲು,
ಭವಾದ್ರಿಶೈಲದಾ ಉತ್ತುಂಗಶೃಂಗದಲಿ ಪುಟ್ಟಿದ ಪಯಸ್ವಿನಿಯರು ಪರಂಧಾಮವನು
ಪಾವನಮಯವಾಗಿಸಲೆಂದು
ಕಣಿವೆಕಂದರಗಳ ತಿರುವು–ಮುರುವುಗಳ ತೋರುದಾರಿಯೊಳು ತಿರುತಿರುಗಿ–
ಮಣಿಮಣಿದು
ದ್ಯುಲೋಕದ ಧಬಧಬೆದೊಳು ಧುಮ್ಮಿಕ್ಕಿ ಸ್ವರ್ಗ ತರಂಗಿಣಿಯರೆಂದು
ಸಾಲಂಕೃತಗೊಂಡಿರಲು
ಆ ಪ್ರಣವಪಾವನೆಯರ ಪುಣ್ಯಪ್ರವಾಹದೊಳು ಮಜ್ಜನಗೈದವಳು ಮನೋಮಯದಿ
ಮಾರ್ಮಲೆಯುವಳು;
ಕಡುಕೋಪವಿರದ–ಸುಡುತಾಪವಿರದ ಸ್ವರ್ಲೋಕದ ಸೂರ್ಯನೆಂದು ಸುಪ್ರಸಿದ್ಧನಿಹ
ಸಪ್ತಾದಿತ್ಯಸೋದರನಾಂತು

ಪೂಷಣನ ಪೋಷಣೆಯಲಿ ಪಾರಿಜಾತಾದಿ ಪುಷ್ಪಗಳ ಪಲ್ಲವಿಸಿ,
  ಹೊನ್ನಮಯದೊಳಗೆ ಹರಿದ್ವರ್ಣವ ಹರಿಸಿ
ನಿಲಿಂಪರ ನೇಮದಲಿ ನಂದನಾರಣ್ಯವೆಂದು ನಾಮಾಂಕೃತಗೊಂಡ
  ಈಡನೋದ್ಯಾನವಾಂತು ಇಂದ್ರವನದೊಳಗೆ
ಅಡಿಯಿಟ್ಟು, ಅಟಮಟವಾದರೂ ಮಟಮಟವಿಹ ಮದ್ಯಾಹ್ನದಿಂದ ಮಿಟಿಮಿಟಿ
  ಮುಚ್ಚಂಜೆಯೊರೆಗಿನ
ಸಮಯವನು ಸಂಯಮದಿ ಸವೆಸುವಳು. ಮೂರುಮುಹೂರ್ತವನೇ
  ಮರೆಯಲೆಂದವಳು ಮಾನಿಸುವಳು.
ಪೂಷಣನು ಪಡುಗಡಲಿಗೆಂದು ಪಯಣಿಸಿ ಸ್ವರ್ಣಧಾಮವನು ಸಂಧ್ಯೆಯ
  ಸುಪ್ಪಿಗೆಯೊಳು ಸರಿಸಿದರೂ
ಈಡನ್ ತೋಟವನು ತೊರೆದು ಬಾರದ ಬಾಲೆಯವಳು ವೃಕ್ಷದಡಿಯ
  ಯಕ್ಷಿಯಂತೆ ಕುಳಿತು ಕಣ್ಣೀರಿಡುವಳು.
ಬರ್ದಿಲರ ಬೀಡಿನೊಳಗೆ ಬಂಗಾರದ ಬೆಳಕನ್ನು ಭರಿಸಬೇಕಿರುವ ಭವಕನ್ಯೆಯವಳು
  ನಿಶೀಥಿನಿಯಾಗಿ ನರಳುವಳು.
ವ್ಯತ್ಯಯವಿರದ–ಪ್ರತ್ಯಯವಿರದ ಪ್ರಾಣಮನದ ಪ್ರಾಂಗಣದಲಿ ಅಪ್ಸರಿಯವಳು
  ಅಡಿಯಿಡುವ ಕಾಲುದಾರಿಗಳೆಲ್ಲ
ಸ್ವರ್ಲೋಕದ ಸ್ವರ್ಣಾಶ್ಮಗಳಿಂದ ಸುಸಜ್ಜಿತವಾಗಿ ನೈಜ ಸಂತೋಷದಿಂದ
  ಸಾಲಂಕೃತಗೊಂಡ ಸಾಧನಾಪಥವಾದರೂ,
ಅವಳಂಕೆಯಲಿ ಮಾತ್ರ ಸ್ವರ್ಣಿಮದ ಹಾದಿಬೀದಿಗಳೆಲ್ಲ ಮುಳ್ಳುತುಂಬಿದ
  ಮಸಣವೀಥಿಯೆನಿಸಿತ್ತು.
ಹೊನ್ನಗಾಯರುಗಳ ಹಣೆಗಣ್ಣಿನಲಿ ಹೆಣ್ಣಿವಳು ಮರದೊಳಗೆ ಮಾಗಿದ ಮಾವಾಗಿ
  ಮೂಡಿದರೂ,
ಸೌಂದರ್ಯವದವಳಿಗೆ ಸಾವಂತೆ ಸಮೀಕರಿಸಿತ್ತು. ಅಂದವಿಹಳ ಅಂಗಸೌಷ್ಠವವದು
  ಭಾರದೊಲು ಭಾಸವಾಗಿತ್ತು.
ಪುಣ್ಯವತಿಯ ಪ್ರತಿನಿತ್ಯದ ಪ್ರಗಾಥಗಳಿಂತು ಪುನರುಜ್ಜೀವನವಿಲ್ಲದೆ
  ಪುನರಾವರ್ತನೆಯ ಪಾಠವನೇ ಪಠಿಸಿತ್ತು.
ಪ್ರತಿಮೆಯೊಂದರ ಪ್ರತಿಬಿಂಬದೊಲು ಪರಿಗಣಿತವಾಗಿತ್ತು. ಅನಂಗನ
  ಅನುರಣನೆಯನೇ ಅನುಸರಿಸಿತ್ತು.

ಸಮಯವದು ಸ್ವರ್ಗವನು ಸೂರ್ಯನೆಡೆ ಸರಿಸುತ್ತ ಶಾಂತಿಯುತ ಸಂಜೆ–
ಮುಂಜಾನೆಗಳ ಮುನ್ನೂಕಿಸಿತ್ತು.
ಮಾನಸದ ಮಾಸಗಳು ಮುಗಿಯುತ್ತ ಬಂದಿರಲು, ವಸಂತಾಗಮನವು
ಚೀಪುಗಾಲಿಡುತ್ತ ಚಿನ್ಮಯದೆಡೆ ಚಲಿಸಿತ್ತು.
ನೆರಳಿಲ್ಲದೆಡೆ ನಿಂತು ನೀರಡಿಸಿಹ ನಿಲಿಂಪರ ನೆತ್ತಿಯನೇ ತಲೆದಾಸವಾಳದಂತೆ
ತೆರೆದು ಬುರುಡೆ ಬಿಚ್ಚುವ
ಬಿರುಬಿಸಿಲ ಬೇಸಿಗೆಯದು ಬೆಂಬಿಡದ ಬೇತಾಳನೊಲು ಬರ್ದಿಲದೆಡೆ ಬಂದು
ಬೀಡುಬಿಟ್ಟಿರಲು
ದೀರ್ಘವಿಹ ದಿನದಲಿ ದಣಿದು ದೀನರಿಹ ದೇವತೆಗಳೆಲ್ಲ ಅಲ್ಪವಾದರೂ
ಕಲ್ಪದೊಲಿಹ ಕಾಳರಾತ್ರಿಯನು
ನಾಟ್ಯ–ನರ್ತನದಲಿ ನಲಿಯುವರು, ಕಾವ್ಯ–ಕೀರ್ತನೆಯಲಿ ಕಳೆಯುವರು,
ಪುಣ್ಯ–ಪ್ರಾರ್ಥನೆಯಲಿ ಪಳಗುವರು.
ಮನೋಮಯದ ಮನೆಮಂದಿಯೆಲ್ಲ ಮನೋಕ್ಲೇಷವನೆಲ್ಲ ಮರೆತು
ಮಹಾನಂದನಾಟಕದಿ ಮನವಿರಿಸುವರು.
ಸಮಂಜನ ಸಮಾಜದ ಸಾರ್ವಭೌಮರುಗಳು ಸಂಕಥಾಗೋಷ್ಠಿಯಲಿ ಸಂಜೆ–
ಮುಂಜಾನೆಯನೇ ಮರೆಯುವರು.
ಆ ಋತುವಿನಲಿ ಋತದ ಕಥೆಗಳನು ಕಾವ್ಯಮಥನದಲಿ ಕಡೆದು ರೂಪಕಗಳಾಗಿ
ರಚಿಸುವರು, ರಂಜಿಸುವರು.
ಕಲೆಯದು ಭೂಮಂಡಲದಿ ಭೌತಿಕವಾಗಿ ಬೆಳಗಿದರೂ ಅದರ ಮೂಲಕಿರಣವದು
ಮಾನಸದಲೇ ಮೆರೆವುದು.
ಮೃಣ್ಮಯದಿ ಮೂರ್ತರೂಪಗೊಳ್ಳದಾ ಸೂಕ್ಷ್ಮಕಲೆಗಳ ಇಂದ್ರಚಾಪವದು
ಶ್ರೀಮನದಲೇ ಶ್ರೀಮಂತವಿಹುದು.
ಅಂದೊಮ್ಮೆ ಸ್ವರ್ಲೋಕದ ಸ್ವರ್ಣಸಭಾಂಗಣದಿ ನಾಟ್ಯಾಚಾರ್ಯ ಭರತಮುನಿಯಿಂದ
ರಚಿತವಿಹ 'ಲಕ್ಷ್ಮೀಸ್ವಯಂವರ'ವೆಂಬ ರೂಪಕದ ಪ್ರದರ್ಶನವೆಂದು ನಿರ್ಣಯಿಸಿರಲು,
ದಿವ್ಯಪ್ರೇಕ್ಷಕರ ಮುಂದೆ ಭವ್ಯಗಾಥೆಯನು ರೂಪಕದಿ ರಂಜಿಸಲೆಂದು ರಾಯಸದನದ
ಪಾತ್ರಧಾರಿಗಳೆಲ್ಲ ತಮಗಾಗಿ ಮೀಸಲಿರುವ ಪಾತ್ರಪ್ರಜ್ಞೆಯೊಳಗೆ ಪೂರ್ಣಪ್ರಜ್ಞೆಯ
ಬೆರೆಸಿ, ಬಣ್ಣದಂಗಣವನು ಪುಣ್ಯಪ್ರಾಂಗಣವಾಗಿ ಪರಿವರ್ತಿಸುವ
ಪ್ರಯತ್ನದಲ್ಲಿಹರು.

ಊರ್ವಶಿಯು ಸಾಗರೋತ್ಪನ್ನಳಿಹ ಶ್ರೀಲಕ್ಷ್ಮಿಯಾಗಿ ರೂಪಕರಾಜ್ಞಿಯೊಲು
ರಂಗಸ್ಥಲವನೇರಿದರೆ,
ಮೇನಕೆಯು ಆರ್ಣವಾಧಿಪತಿಯ ಸತಿಯಳಿಹ ವರುಣಾನಿಗೌರಿ ವಾರುಣಿಯಾಗಿ
ವಂದಿತಳಿಹಳು.
ಮನೋಮಯದ ಮಾನಿನಿಯರು ಶೇಷಪಾತ್ರಗಳಿಗೆಂದು ವೇಷವ ತೊಟ್ಟು
ವೇದಿಯನೇರಿಹರು.
ಚಾರುಕಾಂತಿಯನೇ ಕರೆವಾ ಚಂದ್ರಾನನೆಯರ ಚಂದ್ರಾನನವದು ಚಿರಂತನವಿಹ
ಚೈತ್ಯ–ದೈತ್ಯರ
ಬವರ ಬಾನಂಗಣದಿ ಬಳಲಿ ಬೆಂಡಾದ ಭವಾಧಿಕ್ಯರ ಶಕ್ತಿ–ಮೌನಗಳ
ಮಾರ್ದನಿಸಿದರೆ;
ಕಮಲಕನ್ನಿಕೆಯರಾ ಕಿರುಹಸ್ತಗಳವು ವಿಶ್ವವನ್ನೇ ವಿಪತ್ತಿನೆಡೆಗೆ ಒತ್ತಿ
ವಜ್ರಾಘಾತವನಿತ್ತು,
ಸ್ವರ್ಣಸಾಮ್ರಾಜ್ಯಗಳನೆಲ್ಲ ವರ್ಣದಾರ್ಣವದೊಳಗೆ ನೂಕಿ ನಾಕಗಳನೆಲ್ಲ
ನಡುಗುಡುಗಿ
ನೀರಾಗಿಸಿಹ ನಿಯತಿನಿರ್ಮಾತೃಗಳ ನೂರುಭೀಕರ ಮಂತ್ರಗಳನೇ
ಮಣಮಣಿಸಿಹವು.
ಸ್ವರ್ಣಿಮದಾ ಸೂಕ್ಷ್ಮಾಂತಃಕರಣಗಳನೆಲ್ಲ ಸೂಕ್ತಾನುಕರಣೆಯೆಂಬ ಸೂತ್ರದಲಿ
ಸಮನ್ವಯಿಸಿ
ಕಥನವೊಂದನ್ನು ಕಾಣ್ಕೆಯಲಿ ಕೂಡಿಡಲೆಂದು ಅಭಿನೇತೃಗಳ ಅಂಕಣವದು
ಅಂಗೀಕೃತಗೊಂಡಿರಲು,
ವೇದಿಕೆಯ ಮೇಲೊಂದು ಚೆಲುವ ಮಂಟಪವ ರಚಿಸಿ, ನಂದನದ ಆಮ್ರಪರ್ಣಗಳ
ತೋರಣವ ಕಟ್ಟಿ,
ರಕ್ತವರ್ಣದ ಪಾರಜವೇ ಪರ್ಣಪುಷ್ಪಗಳಾಗಿರುವೊಲಿಹ ಸ್ವರ್ಗಸೌದಾಮಿನಿಯರೆಂಬ
ಸುಮಕುಸುಮಗಳವು:
ಚೆಂಗುಲಾಬಿ–ಹೊಂಗುಲಾಬಿ, ಚದರಂಗಿ–ಮದರಂಗಿ, ಕಾರಂಟಿ–ಗೋರಂಟಿ,
ಸಂಪಿಗೆ–ಸೇವಂತಿಗೆ
ಮೊದಲಾದ ಮಲರು ಮಲ್ಲಿಗೆಗಳಿಂದ ಮಂಟಪವದನು ಸಿಂಗರಿಸಿ,
ಸುಖಾಸೀನಗಳನಿರಿಸಿ

ಪಂಜ್ತಿಗಳ ಪ್ರಾಯೋಜಿಸಿ ಪಥವ ರಚಿಸಿ ಶ್ರೀಲಕ್ಷ್ಮಿಯ ಶ್ರೀಹಸ್ತದಲೊಂದು
ಪುಷ್ಪಮಾಲಿಕೆಯ ಪೂರೈಸಿರಲು,
ಭೂಮಂಡಲ–ಭಾಮಂಡಲ–ಗೋಮಂಡಲಗಳ ಮಂಡಲೇಶ್ವರರಲ್ಲಿ
ಕನ್ಯಾರ್ಥಿಯಾಗಿ ಕುಳಿತಿಹರು.
ಲಕ್ಷದ್ವೀಪಗಳನಾಳ್ವ ಲಾಕ್ಷಣಿಕರು, ಸ್ವರ್ಣಸಾಗರಗಳ ಅಧಿಪತಿಗಳಿಹ ಸಹಸ್ರಾಕ್ಷ
ಯಕ್ಷರು,
ಅಖಂಡಖಂಡಗಳನೆಲ್ಲ ಅಂಗೈಯಡಿಯಲಿರಿಸಿಕೊಂಡಿಹ ಚಂಡಪ್ರಚಂಡರು,
ಕುಬೇರನಿಧಿ ನಿರ್ಮಾತೃಗಳು,
ಅಕ್ಷಯಾಂಬರದಿ ಅಕ್ಷಿಗಳಾಗುತಲೆವ ನಕ್ಷತ್ರಾವಳಿಗೆ ಬೆಳಕಿನ ಭಕ್ಷ್ಯವ ಭರಿಸುವ
ಭಾ–ವೀಕ್ಷಕರು,
ಖದ್ಯೋತ–ವಿದ್ಯೋತ–ಪ್ರದ್ಯೋತಗಳಿಗೆಲ್ಲ ಪ್ರಣವಪ್ರಾಂಶವರಿಹ ಪ್ರಕಾಶಲೋಕದ
ಪ್ರಾತಿನಿಧ್ಯರುಗಳಲ್ಲಿ
ವಸನಾಧಿವಸನಗಳಿಗೆ ವಜ್ರಲೇಪನಿಟ್ಟು, ಮೇಲೆ ದ್ರಾಪಿಯ ತೊಟ್ಟು, ರತ್ನಖಚಿತ
ಕಿರೀಟವನಿಟ್ಟು,
ಖಡ್ಗ–ಕಠಾರಿಯಾದಿಯಾದ ಆಯುಧಗಳನೆಲ್ಲ ಬಿಟ್ಟು, ಸ್ವರ್ಣಶೋಭನರಾಗಿ–
ಪದ್ಮಪಾಣಿಗಳಾಗಿ
ಸಖರೊಡನೆ ಸುಖಾಸೀನದಿ ಸಾಲಂಕೃತಗೊಂಡಿರಲು, ಸಖಿಯರೊಡನೆ
ಸರಸಿಕರೆದು ಸುಳಿದ
ಮಾಲಾಹಸ್ತೆಯಳಿಹ ಮಾಲಕ್ಷಿಯು ಅಚ್ಚರೇಶಿಮೆಯಲಿ ನೇಯ್ದ ನೆರಿಗೆಮುರಿಗೆಯ
ಸೀರೆಯ ಧರಿಸಿ.
ಶಿರೋಕುರೀರ, ಕೊರಳಕಾಂಚಾಣಮಾಲೆ, ರುಕ್ಮಚಿಂತಾಕಗಳೆಂಬ ಒಡವೆಗಳ
ವಾರಸುದಾರಿಕೆಯಾಗಿ
ನಿಷ್ಕಲಂಕ ವದನದಿ ನಿರ್ಮಲ ನಗೆಯನಿಟ್ಟು, ದೈವೀಕದ ದೇವಚ್ಛವಿಯೊಳಗೆ
ಪವಿತ್ರಪ್ರಕಾಶವ ತೊಟ್ಟು
ಹಂಸರಾಜರ ಮಧ್ಯೆ ಹಂಸಗಮನೆಯಾಗಿ ಹರಿದಿಹಳು, ಚಂದ್ರವನದೊಳಗೆ
ಚಕೋರಿಯಾಗಿ ಚರಿಸಿದಳು.
ಅನಿತರೊಳು ಅಲೆಯಲೆಯಾಗಿ ಅಲುಗುತ್ತಿರುವ ಬಂಗಾರಜರಿಯ
ವಸನವಿನ್ಯಾಸದಿಂದ ಒಪ್ಪಿತಳಾಗಿ

ಸಮರಸಾಹಸಿಗರಿಂದ ಸಾಲಂಕೃತಗೊಂಡ ಸಭಾಂಗಣಕ್ಕೆ ಸಖಿಯಾಗಿ ಸುಳಿದ
ವಾರುಣಿಯಾಂತು ಮೇನಕೆಯು,
ಶಂಖ–ಚಕ್ರದೊಡನೆ ಶಾಂತ–ಚಿರಂತನ ಚೇತನನಾಗಿ ಕರಗದೇ–ಕದಡದೇ ಕಲ್ಲಾಗಿ
ಕುಳಿತಿರುವ ಕಾರ್ಮೋಡದಂತೆ
ಕನ್ಯಾರ್ಥಿಯಾಗಿ ಕೇಂದ್ರಸ್ಥಾನವನು ಕಾಯ್ದಿರಿಸಿಕೊಂಡ ವಿಷ್ಣುವನು
ಕುಡಿಗಣ್ಣಿನಂಚಿನಲ್ಲೇ ಸೂಚಿಸುತ್ತ,
ಸೋದರಿ ಶ್ರೀಲಕುಮಿಗೆಂದು ಉಸುರಿದಳು, ನಾರಾಯಣನನೇ ನೆಚ್ಚಿಕೊಳುವಂತೆ
ನುತಿಸುತ ನುಡಿದಿಹಳು:
"ಅರ್ಣವದಿಂದ ಅವಿರ್ಭೂತಳಿಹ ಅಮರ–ಆನಂದಮಯಳೇ! ಭವದ
ಭಾಮಂಡಲದಿ ಬೆಳಗುವೆನ್ನ ಭಗಿನಿಯೇ!
ಸ್ವರ್ಗವಿದು ಸಹಸ್ರಸಂವತ್ಸರಗಳಿಂದ ಪ್ರತೀಕ್ಷಿಸುತಿರುವಾ ಪುಣ್ಯನಾಮವನು
ಪಡೆನುಡಿದವನು ಪತಿಯಾಗಿಸಿಕೋ.
ಸಪ್ತಲೋಕ–ಸಪ್ತಸಾಗರ–ಸಪ್ತಸ್ತರಗಳಿಗೆ ಸಾರ್ವಭೌಮರುಗಳಾಗಿಹ ಸಾಮ್ರಾಟರುಗಳ
ಸಾನಿಧ್ಯವಿಹುದಿಲ್ಲಿ.
ಚಿರಂತನವಿಹವರ ಚಿತ್–ಶಕ್ತಿಯನು ಚಕ್ಷುಗಳಿಂದೀಕ್ಷಿಸಿರುವೆ, ಸಮಷ್ಟಿಗಳ ಸತ್–
ಸಂಗವನು ಸಮೀಕ್ಷಿಸಿರುವೆ,
ಭೂಚಭ–ಖೇಚಭಗಳನೇ ಭಯದ ಬೆಂಕಿಯೊಳು ಬೇಯಿಸುವೊಲಿಹ
ರುದ್ರರೂಪಗಳನಿಲ್ಲಿ ಕ್ಷಿಪ್ರದಿ ಕಂಡಿರುವೆ,
ಭೀಕರಬಾಹುಗಳಾದರೂ ಭಾವಪೂರ್ಣರಿಹ ಭವಾಧಿಪತಿಗಳ
ಆನಂದನಾಮಗಳನಿಂದು ಆಲಿಸಿರುವೆ.
ಈ ಚಿನ್ಮಯರಲಿ ಚಿತ್‌ಪಟಲವನು ಚಂಚಲಮಯಗೊಳಿಸುತದರ
ಚಿತ್‌ಪುರುಷನಾದ ಚೆಲುವನಾರು?
ಆ ಸೃಷ್ಟಿಯಾದಿಯ ಸಿದ್ಧಪುರುಷರಿಗಿಂತಲೂ ಸೂಕ್ತವೆನಿರುವ,
ಭಗಿನಿಭೂಮಿಗಿಂತಲೂ ಭಾವಬಂಧುವೆನಿಸಿರುವ,
ಸ್ವರ್ಗತರಂಗಿಣಿಯರೊಳು ಪಡೆದ ಪರಮಾನಂದಕಿಂತಲೂ
ಪುಣ್ಯಪುನೀತನೆನಿಸಿರುವಾ ಪರಮಪೂರುಷನಾರು?
ನಿನ್ನ ಪತಿಯಾಗಲಿರುವಾ ಪಾವನೋತ್ತಮನ ಪುಣ್ಯನಾಮವನಿಲ್ಲಿ ಪುನರುಚ್ಚರಿಸಿ
ಪುಷ್ಪಮಾಲಿಕೆಯನಿತ್ತಿರು.

ಹೆದರಿ ಹಿಂಜರಿಯದಿರು, ಬೆದರಿ ಬಹುದೂರ ನಿಲ್ಲದಿರು, ನೀನುಲಿವ ಉತ್ತರಕಾಗಿ
ಉನ್ಮತ್ತರಿಹರೀ
ಸಭಾಸದರ ಸಮ್ಮುಖದಿ ಸತ್‌ಪುರುಷನೋರ್ವನ ಸ್ವಯಂವರಿಸಿ ಸಂಲಗ್ನಕೆಂದು
ಸಿದ್ಧವಾಗಿರು.”
ಮೇನಕೆಯ ಮಾತೆಲ್ಲ ಮುಗಿದು, ಮುಕ್ಕೋಟಿಗಳು ಮನದನ್ನೆಯ ಮನವಾಚನಕೆಂದು
ಮುನ್ನೋಡಿರಲು,
ಉಲಿದಿಹಳವಳು ಉರ್ವಶಿಯು! ಊರ್ಧ್ವಲೋಕದಿಂದೊಗೆತಂದ ಉಚ್ಚ್ರಾಯ
ಧ್ವನಿಯಿಂದವಳು ಉಸುರಿಹಳು:
‘ಸ್ಥಿತಿಕಾರ ವಿಷ್ಣುವಿನ ಸ್ನಿಗ್ಧನಾಮವನು ಸೂಚಿಸಬೇಕಿಹ ಜಿಹ್ವೆಯದು
ಜಂಗಮಜಿಷ್ಣುವಿನ ಜಡನಾಮವನು ಜಪಿಸಿತ್ತು
ನಾರಾಯಣನ ನಾಮವನು ನುತಿಸಬೇಕಿಹ ನಾಲಿಗೆಯದು ನರನೋರ್ವನ
ನಾಮವನು ನುಡಿದು ನಿಂತಿತ್ತು.
ಪುರುಷೋತ್ತಮನೆಂದು ಪಡೆನುಡಿಯಬೇಕಿದ್ದ ಪುಣ್ಯಪದಗಳವು
ಪುರೂರವನೆಂದು ಪುನರುಚ್ಚರಿಸಿತ್ತು.’
ತೆರೆಮೇಲೆ ತಲ್ಲಣವೇರ್ಪಟ್ಟಿತ್ತು, ಅಂಕಣವದು ಅಲ್ಲೋಲಕಲ್ಲೋಲವಾಗಿತ್ತು,
ಮಂಟಪವದು ಮೌನವಾಗಿತ್ತು.
ಸುಡುಬಿಸಿಲ ಮದ್ಯಾಹ್ನದಲಿ ಮರದ ಮಂಪರಿನೆಲೆಗಳ ಮಧ್ಯದಲಿ ಮುಂಬರಿವ
ಮೂಕಮರ್ಮರದಂತೆ,
ದೇವಸಭೆಯೊಳಗೆ ದಂಗೆಯನೇಳ್ವ ದುಂದುಭಿಗಳಲ್ಲಲ್ಲಿ ದಾರಿಯೊಳನೂಕಲೆಂದು
ನಿಶ್ಚೈಸಿರುವೊಲು
ಮಂದಹಾಸವನು ಮರೆತ ಮುಕ್ಕೋಟಿಗಳ ಮೊಗದಲ್ಲಿ ಕೊಂಕುನಗೆಯೊಂದು
ಕುಳಿತು ಕಣ್ಕುಕ್ಕಿತ್ತು.
ಅಂತಃರೂಪಕದಲಿ ಅಂಗೀಕೃತಗೊಳಲಿದ್ದ ಅಂಗಣವದು ಅಂದಗೇಡಿಯಾಗಿ
ಅವುಡುಗಚ್ಚಿರಲು,
ಆಕ್ರೋಶ–ಅಸಂತೋಷಗಳು ಅಡಿಯಿಟ್ಟು, ಕ್ರೋಧ–ಕಂಟಕಗಳು ಕಾಲಿಟ್ಟು,
ನಾಟಕವನೇ ನಿರ್ಮಾಲ್ಯವಾಗಿಸಿತ್ತು.
ನದಿದಂಡೆಯ ನೀರಸೆಳವಿನಲಿ ನೂರೆಂಟು ನೀರ್ಮಾನಗಳೊರೆಗೆ ನಿರ್ನಾಮಗೊಳದೆ
ನವೆದಿರುವ

ಕಲ್ಲುತುಂಡನೊಂದನು ಕೊಂಡ ಕಲ್ಲುಕುಟಿಗಾರನೋರ್ವ ಕಟೆದಿರಲು
  ಕಪ್ಪುಶಿಲಾಖಂಡವದನು,
ಕಲ್ಲು ಕಿಡಿಕಿಡಿಯಾಗಿ, ಬೆಂಕಿ ಬಿಡಿಬಿಡಿಯಾಗಿ, 'ಸ್ಫ'ಲಿಂಗ ಸೃಷ್ಟಿಯಲಿ ಸ್ಫುಲಿಂಗ
  ವೃಷ್ಟಿಯಾಗಿತ್ತು.
ಕಾರ್ಯನಿರಂತರವಿರೆ ಕೈಲಾಸಾಧಿಪತಿಯ ಕಾಂತಿಯನೇ ಕರೆವಾ ಕರ್ಮಲಿಂಗವದು
  ಕಣ್ಬಿಡುವಂತೆ,
ಚಲನಚಿರಂತನದಲಿ ಚೈತ್ಯಪುರುಷನ ಚರಮದೇಹದಾ ಚೆಲುವರೂಪವೇ
  ಚಿತ್ರೈಸಿರುವಂತೆ,
ಅಶ್ಮದೊಳಗೆ ಅಚ್ಯುತನೇ ಅಮರಲೋಕದಿಂದವರೋಹಿಸಿ ಅಚ್ಚಳಿಯದೇ
  ಅಚ್ಚೊತ್ತಿರುವಂತೆ,
ಕಾರ್ಮಣನ ಕೈಚಳಕದಿ ಕಂಡರಸಿ ಕುಳಿತಿರುವ ಸ್ನಿಗ್ಧ–ಮುಗ್ಧ ಮೂರ್ತಶಿಲ್ಪವನು
  ಕಂಡೊಡನೆ
ಶಿಲ್ಪಿಯವ ತಾ ರೂಹಿಸಿದ ರೂಪವದು ಆರೋಹಿಸುವುದ ಕಂಡು ಕಣ್‌ತೃಪ್ತಿಯಲಿ
  ಕಂಬನಿಗರೆವಂತೆ,
ಸೂಕ್ಷ್ಮಭಾವಗಳಿಗೆ ಸ್ಪಂದನಾಸ್ಪರ್ಶವನಿತ್ತು, ಕಲ್ಪಕಲ್ಪನೆಗಳಿಗೆ ಕಲಾಕಾಂತಿಯನಿತ್ತು,
  ದಿವ್ಯದರ್ಶನಗಳಿಗೆ ದೃಶ್ಯವೈಭವವನಿತ್ತು
ಪುರಾಣಪುಣ್ಯಪ್ರಗಾಥವೊಂದನು ಪ್ರತಿಮಾರೂಪಕದಲಿ ಪ್ರದರ್ಶಿಸಿ
  ಪಾವನನಿರಲೆಂದು ಪಣತೊಟ್ಟ
ನಾಕಲೋಕದ ನಾಟ್ಯಾಚಾರ್ಯನವ ಭರತ–ಮುನಿಯು ಭರದಿ–ಮುನಿದು
  ಭೀಕರನಿಹನು–ಭೀಭತ್ಸನಿಹನು.
ತಾ ಕಲ್ಪಿಸಿದ, ಪರಿಕಲ್ಪಿಸಿದ ಪ್ರಗಾಥವಿಂದು ಪ್ರಮಾದದಿ ಪುಣ್ಯಾವಶೇಷವಾಯಿತೆಂದು
  ಪರಿತಪಿಸಿಹನು.
ತಾ ನಿರ್ಮಿಸಿದ, ನಿರ್ದೇಶಿಸಿಹ ನಾಟಕವಿಂದು ನಿರ್ಮಾಲ್ಯದಿ
  ನಾಮಾವಶೇಷವಾಯಿತೆಂದು ನಳಮಳಿಸಿಹನು.
ಪ್ರಯತ್ನವದನು ಪತನಗೊಳಿಸಿದ ಪಾತ್ರದೂಷಿತೆಯನು ಕಂಡು ಹಲ್ಲು ಕಟಕಟಿಸಿತ್ತು,
  ಕಣ್ಣು ಪಟಪಟಿಸಿತ್ತು.
ಕ್ರೋಧದ ಕೆನ್ನಾಲಿಗೆಯದು ಕೈಚಾಚಿ ಕೆಂಡವೃಷ್ಟಿಯನೇ ಕರೆವಾ ಕೂಷ್ಮಾಂಡಿನಿಯಂತೆ
  ಕೆರಳಿ ಕೆಂಡಾಮಂಡಲನಾದ

ಸ್ವರ್ಗರಂಗದಾ ಸೂತ್ರಧಾರನವ ಸುಡುಬಿಸಿಲಂತೆ ಸೂರ್ಯಶಿಖರವಿಹ–
ಶಾಖಪ್ರಖರವಿಹ ಶಾಪವನಿತ್ತಿಹನು:
"ಮಾನಸದ ಮಂತ್ರಾನಿಲದೊಳಗೆ ಮರ್ತ್ಯದ ಮಂದಾನಿಲವನು ಮೆತ್ತಿ
ಮಾಲಿನ್ಯಗೊಳಿಸಿರುವೆ!
ಪರಂಧಾಮದ ಪ್ರಾಸುಕ ಪವನದೊಳಗೆ ಪೃಥಿವಿಪವಮಾನವನು ಪೂರೈಸಿ
ಪಂಕಮಯಗೊಳಿಸಿರುವೆ!
ನಿರ್ಬ್ರಹ್ಮದ ನಿರಾಳದೊಳಗೆ ನೂಕಿ ನೂರುಯುಗಮಾನಗಳೊರೆಗೆ ನವೆದಿರುವ
ನಿರ್ಮಾಯಘನದೊಳಗೆ
ಜತನದಿಂದಿರುವ ಜಕ್ಕಿಣಿಯರಿಗೆ ಜಲಾಧಿನಿವಾಸಿನಿಯರೆಂಬ ಜನ್ಮಜಾತಕವ
ಜೊತೆಯಾಗಿಸಿ ಜೀವದುಂಬಿದಾ
ಸೃಷ್ಟಿಯಾಧಿಕ್ಯರ ವ್ಯಷ್ಟಿಸಮಷ್ಟಿಯನೇ ವ್ಯತ್ಯಯಗೊಳಿಸಿರುವೆ, ಅಪ್–ಸರದ
ಅಸ್ತಿತ್ವವನೇ ಅನುಚಿತಗೊಳಿಸಿರುವೆ,
ನಾಕ–ನಿಲಿಂಪರಿಗೆಂದು ನಿರ್ಮಿಸಿಹ ನೀರನಾರಿಯಾಂತು ನಿನ್ನ ನೀರ್‌ನಾಮವನೇ
ನಿರ್ನಾಮಗೊಳಿಸಿರುವೆ!
ವಿಶ್ವಜಲದ ವಾರುಣಪದ್ಮದೊಳು ವಜ್ರಾಸೀನನಿಹ ವಿಶ್ವಯಕ್ಷನ ವಕ್ಷಸ್ಥಲದೊಳಗಿಂದ
ವಾರುಣವೃಕ್ಷವಾಗುತೊಗೆತಂದ
ವಿಶ್ವವಾಙ್ಮಯದ ಒತ್ತಾಸೆಯನೇ ವೈಫಲ್ಯಗೊಳಿಸಿರುವೆ! ವಜ್ರಾಘಾತವನಿತ್ತು
ವವ್ರ(ಗುಹೆ)ದೊಳಗಿತ್ತು ವಕ್ರೀಭವಗೊಳಿಸಿರುವೆ!
ಮಾನಸವಸನದೊಳು ಮಾನುಷವ್ಯಸನಳಾಗಿ ಮನೋದೂಷಿತಳಿಹ ಮಾನಿನಿಯೇ,
ಸ್ವರ್ಗಶಪಿತಳಾಗಿ ಸ್ಥಾನಾಂತರಗೊಂಡಿರು.
ಪರಂಧಾಮವನು ಪರಿತ್ಯಜಿಸಿ ಪತನವಾಗಿರು, ಪೃಥಿವಿತಲಕೆ ಪಯಣಿಸಿ
ಪಾವನಳಿರು, ಪೂರ್ಣತೆಯನಲ್ಲಿ ಪಡೆದು ಪೂಜ್ಯಳಿರು.
ಸ್ವರ್ಗಶೀತಲದೊಳು ಸುಳಿಯುತಿಹ ಪಾವನಪಾವಕರಿಹ ಪಯಸ್ವಿನಿಯರ
ಪಾತ್ರಗಳಿಂದ ಪಾರಾಗಿ ಪಯಣಿಸಿರು.
ರತ್ನಮಂಜರಿಗಳಿಂದ ರೂಹೆಗೊಂಡಿರುವಾ ಚೈತ್ರರಥವೆಂಬ ಚಿನ್ನದ ತೋಟದಿಂದ
ತೆರವಾಗಿ ತೆಂಕಣದೆಡೆ ತೆರಳಿರು.
ಇಂದ್ರನಂದನವೆಂಬ ಉದ್ಯಾನದಿಂದ ಉಚ್ಚಾಟಿತಳಾಗಿ ಊರ್ಧ್ವಲೋಕದಿಂದ
ಉದ್ವಸ್ಥಗೊಂಡು ಉತ್ತರದಿಂದ ಉರುಳಿರು.

ನಿನ್ನ ಹೃತ್‌ವಲಯದೊಳು ವೃತ್ತಾಕಾರದಿ ಸುತ್ತುಹಾಕುತಿಹಾ ಸುಂದರಾಂಗನಿಗಾಗಿ
ಸಂಧಿಲೋಕದೊಳು ಸರಿದಿರು.
ಭೂಮಂಡಲದೊಳು ಭಾಮಂಡಲದ ಬೆಳಗನ್ನು ಭರಿಸಲೆಂದು ಭೂತ
ಭವಾಂತರದಲೇ ಬುವಿಯೆಡೆಗೆ ಭವಿಸಿದ
ಸ್ವರ್ಗತರಂಗಿಣಿಯರ ಸಹೋದರಿಯಾಂತು ಸ್ವರ್‌ಗಂಗೆಯ ಸನಿಹದೊಳು
ಸುಳಿದು ಸಮ್ಮಾನಿತಳಿರು.
ನೀಲನೀಲಿಮದಿ ನಿಂತು ನಿರ್ವಯಲದೆಡೆ ನಿರುಕಿಸುತಿಹ ನೀಲಿಬೆಟ್ಟಗಳ ಬಳಿಸಾರಿ
ಬೇಡಿಕೊಂಡಿರು,
ಪಕ್ಷಗಳಿರದೆ ಪರಿತಪಿಸುತಿರುವಾ ಪಂಕಪರ್ವತಗಳ ಪಾರ್ಶ್ವದಲಿ ಪುಟ್ಟಿರುವ
ಪ್ರಣವತರಂಗಿಣಿ
ಪುಷ್ಪಭದ್ರೆಯರ ಪುಣ್ಯಪ್ರವಾಹದೊಳು ಪರಂಧಾಮದ ಪಯಸ್ವಿನಿಯರ ಪ್ರೇಮವನು
ಪರಿಶೋಧಿಸಿರು.
ಮೊದಲೊಮ್ಮೆ ಮಹಾವೈಭವದಿ ಮೆರೆದು ಮಾಯಾವತೀಪುರವೆಂದು
ಮನೆಮಾತಾಗಿದ್ದ
ನಗರವೊಂದು ನೂರುಭೀಕರ ಯುದ್ಧಗಳಲಿ ನಲುಗಿ ನೆಲಕಚ್ಚಿರಲು, ನೆಲೆಗಾಣದೆ
ನಿರಾಶ್ರಿತರಿಹ
ಪ್ರಜಾಸಮೂಹವದು ಗುಂಪುಗುಂಪಾಗಿ ಗುಳೆಹೋಗಿ–ಕಳೆಹೋಗಿ
ಹರ್ಮ್ಯನಿಲಯಗಳೆಲ್ಲ
ಬರಿದಾಗಿ ಭಣಗುಟ್ಟುತ್ತ, ಹಾದಿಬೀದಿಗಳೆಲ್ಲ ಹಾಳ್‌ಸುರಿದು, ಪುರಾತನ
ಪಟ್ಟಣವಾಗಿ ಪವಡಿಸಿರಲು,
ರಾಜಲಕ್ಷ್ಮಿಯ ಅಂಗಾಂಗಗಳನು ಕೊಯ್ತಗೆಯ್ತುದಲಿ ಕಡಿದ ಕಡುಗೊಡಲಿ
ದಸ್ಯುದಾಳಿಗೋರರು
ಮೈಯೊಬ್ಬರಿಗೆ, ಕೈಯೊಬ್ಬರಿಗೆ, ತಲೆ–ಕಾಲುಗಳಿಬ್ಬರಿಗೆಂದು ಕಚ್ಚಾಡಿ
ಖಂಡತುಂಡಗೊಳಿಸಿರಲು,
ಮೃತಪ್ರಾಯವಿಹ ರಾಜಲಕ್ಷ್ಮಿಯ ಆತ್ಮವದು ಗಾಳಿದೇರನ್ನೇರಿ ಗೋಲೋಕದೆಡೆ
ಗಮಿಸಿರಲು
ಹಾಳುಬೀಳುಗಳಾ ಹಜಾರದಲಿ ಹಚ್ಚಹಸಿರಾಗಿರುವ ಹೊನ್ನರಾಗವ ಹುಡುಕಿ
ಹಣೆಬೊಟ್ಟಾಗಿಸಿಕೊ.

ನೀನುಲಿದ ನೃಪಗೆ ನೀನೊಲಿದು ನಂದಿರು. ನೂರುಕಾಲದೊರೆಗೆ ನುರಿತು–
ನರೆತು ನಾಕದೆಡೆ ನಿಂದಿರು.!"
ಸುಟ್ಟುರಿವ ಸಿಟ್ಟಿನಲಿ ಸೂತ್ರಧಾರನವ ಸ್ವರ್ಣಯೋನಿಯ ಸ್ಥಾನಚ್ಯುತವಾವಂತೆ
ಸುರಿದು ಸಮ್ಮೋಹಿತನಿಹನು.
ಉಗ್ರತೆಯಲಿ ಉದ್ವೇಗಗೊಂಡ ಉಪದೇಶಕನವ ಉರ್ವಶಿಯನು ಉಚ್ಚಾಟಿಸುವಂತೆ
ಉಸುರಿ ಉನ್ಮಾದಿತನಿಹನು.
ಮೌನರಾಗವನೇ ಮಣಮಣಿಸುತಿರುವಾ ಮೂಕನಾಕದೊಳು ಮೂಕನಾಗದೆ
ಮಾತನಾಡಿಹನವ ಮಾಹೇಂದ್ರ:
ಸ್ತಬ್ಧ–ಮುಗ್ಧವಾಗಿ ಸುಮ್ಮನೊರಗಿಹ ಸ್ವರ್ಗವರ್ಗದೊಳು ಸಾವಧಾನದ
ಸಿರಿನುಡಿಗಳನಾಡಿದನವ ಸುರೇಂದ್ರ:
"ಮುನಿಸೇಕೆ ಮುನಿವರ್ಯ? ಕಾಲರಾಯನ ಕುಟಿಲತನದಿಂದ ಕಡಲೊಂದು
ಕಡೆದು ಕೋಡಿವರೆವಂತೆ
ಮಾನಸಳಾದರೂ ಮಾನುಷನೋರ್ವನ ಮೋಹಕ್ಕೆ ಮರುಳಾಗಿ
ಮರ್ತ್ಯಕ್ಕಿಳಿಯಲೆಂದವಳು ಮಾನಿಸಿಹಳು.
ನೆಲಮುಗಿಲಿನೊಡನೆ ನಂಟನು ನೇಯ್ದು, ನರ–ನಿಲಿಂಪರ ನಡುವೆ ನೇಹ–
ನಲುಮೆಯ ನೂರೆಂಟು
ಬಂಧವ ಬೆಸೆದು ಭಾಮಂಡಲದೊಡನೆ ಭೂಮಂಡಲವನು
ಭಾವಬಂಧನದೊಳಗಿರಿಸಲೆಂದು ಭಾವಿಸಿಹಳು.
ನಿಯತಿ ನಿರ್ಮಿಸಿಹ ನಾಟಕರಂಗದಲಿ ನಾವು–ನೀವೆಲ್ಲ ನಿತ್ಯದಾಟದಿ ನಡೆವ
ನಟನಾವಿಟರಷ್ಟೇ,
ವಿಧಿಯ ವೇದಿಕೆಯಲಿ ಒಪ್ಪಿಸಿದ ವಾಙ್ಮಯವನು ಒಪ್ಪಿತವಾಗಿಸಿಹಳಿಗೆ ವಜ್ರಕಠೋರ
ವ್ಯಾಖ್ಯಾನವಿದು ಒಪ್ಪಿತವೇ?
ಗಗನಗಾಮಿಯವಳನು ಗೂಢವಿಸ್ತಾರವಿರುವಾ ಗಗನದ ಗುಡಿರೇಖೆಯೊಳಗಿಂದ
ಗಡಿಪಾರಾಗಿಸುವುದು ಗಣ್ಯವೇ?
ಮೇರೆಯಿಲ್ಲದ ಮುಗಿಲಿನೊಳಗೆ ಮೇರೆವರೆಯದೆ ಮೆರೆದಾ ಮಲ್ಲಿಗೆಯನು
ಮುದುಡಿ ಮಣ್ಣಾಗಿಸುವುದು ಮಾನ್ಯವೇ?
ಸ್ವರ್ಗ ತರಂಗಿಣಿಯರ ತೆಕ್ಕೆಯಿಂದವಳ ತೆರವಾಗಿಸುವಿರಾ? ಸ್ವರ್ಗೋದ್ಯಾನದ
ಉತ್ಸಾಹದಿಂದವಳನು ಉಚ್ಚಾಟಿಸುವಿರಾ?

ಅವಳಿಲ್ಲದೆ ಭಣಗುಡುತಿರುವ ಬಾನಂಗಣದಲಿ ಬೆಳಗು ಬಂಗಾರವನು ಭರಿಸಿ
ಭವ್ಯಬಾಂದಳವಾಗಿಸುವಿರಾ?
ಹಾಸ್ಯ–ಲಾಸ್ಯವಿಲ್ಲದೆ ಹಾಳ್‌ಸುರಿದ ಈಡನೋದ್ಯಾನದಲಿ ಇಂದ್ರಿಯನಗೆಯನು
ತುಂಬಿ ತಂಪಾಗಿಸುವಿರಾ?
ಕೊಳ್ಳಕೊನ್ನಾರದಲಿ ಕೆಳಗುಮೇಲೆಂಬ ಗೊತ್ತುಗುರಿಯಿಲ್ಲದೆ ಅಂತರಬೆಂತರದ
ಬೂದಿಯಂತಾಗಿ ಹರಿದು,
ಹಿಂದುಮುಂದಾಗುತ ಸರಿದು ಸಲಿಲವನು ಸೇರಲಾಗದೆ ಸತ್ತೊರಗಿಹ ನದಿಗೆ
ನೀರೆರೆದು ನಲಿಸುವಿರಾ?
ಶುಕ್ಷಪಕ್ಷದಲಿ ಸುಂದರಾಂಗನಿರಬೇಕಿಹ ಚಂದ್ರಾಮನವ ಕ್ಷಯಗ್ರಸ್ತನಾಗಿ, ಚಂದ್ರಿಕೆಯು
ಉದ್ವಸ್ತಳಾಗಿ
ಕ್ಷಿತಿಜವದು ಕಳಾಹೀನವಾಗಿ ಕುಳಿತಿರುವಾಗ ಕೆನ್ನೀಲದಾ ಕೊಳದೊಳಗಿಂದ
ಕಾಂತಿಯನೇ ಕರೆಸುವಿರಾ?
ನಿಮ್ಮ ನಾಸಿಕಾಗ್ರವನೇರಿ ಕುಳಿತು ಕಣ್ಕಟ್ಟಿರುವ ಕ್ರೋಧದ ಕೆನ್ನಾಲಿಗೆಯಲಿ
ಕಾಲವನೇ ಕಮರಿಸದಿರಿ.
ಉರ್ವಶಿಯ ಉತ್ಸಾಹವನು ಉರುವಲಿಗೊತ್ತುವ ಉದ್ವೇಗದಲಿ ಉತ್ಕ್ರಾಂತದ
ಉಪಾಧಿಗಳಾಗದಿರಿ.
ನೀವೊರೆದ ನಾಟಕವು ನಿರ್ನಾಮವಾಯಿತೆಂದು, ನಿತ್ಯನಿರಂತರವಿಹ ನೆಲ–
ನೀಲಿಮಗಳನೇ ನರಳಿಸದಿರಿ.”
ಆಷಾಡದಲಿ ಅಂಕೆಯಿಲ್ಲದೆ ಅಲೆದು ಅಂತರಿಕ್ಷದಾ ಬೆಳ್ಮುಗಿಲನು ಬರಿದಾಗಿಸಿದ
ಬೆಳ್ಳಿಮೋಡಗಳೆಲ್ಲ

* * *

---

**ಟಿಪ್ಪಣಿ:**

**ಅಧ್ಯಾಯ 1**

ಈ ಹಿಂದೆ ಜರುಗಿದ ದೇವಾಸುರ ಸಂಗ್ರಾಮದಲ್ಲಿ ಪುರೂರವಸ್ಸನ ಕ್ಷಾತ್ರ ತೇಜಸ್ಸನ್ನು ಕಂಡಿದ್ದ ಕೇಶಿದೈತ್ಯನು ತಾನೇನಾದರೂ ನೃಪನ ಕೈಗೆ ಸಿಕ್ಕರೆ ನಾಶವಾಗುವುದು ಖಂಡಿತ ಎಂದು ಬಗೆದು ಅವನೆದುರಿಗೂ ನಿಲ್ಲಲು ಹೆದರಿ, ತನ್ನ ಕೈಯಲ್ಲಿರುವ ಉರ್ವಶಿಯನ್ನು ಹಿಮದ ಹಾಸಿಗೆಯ ಮೇಲೆಸೆದು ಮಾಯವಾಗುತ್ತಾನೆ. ಆದರೆ, ಕಾಳಿದಾಸ ವಿಕ್ರಮೋರ್ವಶಿಯ ನಾಟಕದಲ್ಲಿ ಕೇಶಿಯು ಕೇವಲ ಉರ್ವಶಿಯನ್ನಷ್ಟೇ

ಅಲ್ಲ ಅವಳೊಡನೆ ಅವಳ ಇನ್ನೋರ್ವ ಸಖಿಯಾದ ಚಿತ್ರಲೇಖೆಯನ್ನೂ ಅಪಹರಿಸಿಕೊಂಡು ಹೋಗಿರುತ್ತಾನೆ. ಹಾಗೂ ಅಲ್ಲಿ ಕೇಶಿ ಮತ್ತು ಪುರೂರವಸ್ಸ ಮಧ್ಯೆ ಖೇಚರ ಯುದ್ಧವೂ ಜರುಗುತ್ತದೆ ಎಂದು ಉಲ್ಲೇಖಿಸಲಾಗಿದೆ. ಆದರೆ, ಶ್ರೀ ಅರವಿಂದರು ಹಿಂಸಾತ್ಮಕವಾದ ಆ ಯುದ್ಧದ ಸನ್ನಿವೇಶವನ್ನು ಕೈಬಿಟ್ಟು ಕಾವ್ಯವನ್ನು ಮುಂದುವರೆಸುತ್ತಾರೆ. ಕೇಶಿದೈತ್ಯನು ನೀಲಿಮದಲ್ಲಿ ಸೃಷ್ಟಿಯಾದ ಛದ್ಮಸ್ಥ ಗಹ್ವರದೊಳಗೆ ನುಸುಳಿ ಮಾಯವಾಗುತ್ತಾನೆ. ಅವನ ಹಿಂದೆಯೇ ಅವನು ನೆರೆಸಿದ ಮೇಘ ರಾಶಿಗಳೆಲ್ಲವೂ ಅದೇ ಕುಹರದೊಳಗೆ ಸೇರಿ ಅದೃಶ್ಯವಾಗುತ್ತವೆ. ಮೋಡಗಳೆಲ್ಲ ಕಳೆದು ನೀಲನೀಲಿಮವು ಮತ್ತೆ ಶೋಭಿಸಲಾರಂಭಿಸುತ್ತದೆ. ಕೂಡಲೇ ಕಾರ್ಯಪ್ರವೃತ್ತನಾದ ಪುರೂರವಸ್ಸನು, ಓಡಿಹೋದ ವೈರಿಯನ್ನು ಬೆನ್ನಟ್ಟದೇ ಅವನ ಪಾಡಿಗೆ ಅವನನ್ನು ಬಿಟ್ಟು ಹಿಂಸಾತ್ಮವಾದ ಯುದ್ಧವನ್ನು ಕೈಬಿಡುತ್ತಾನೆ. ಕೊನೆಗೆ ಹಿಮದ ಮೇಲೆ ಬಂದೆರಗಿದ ಚೆಲುವೆಯ ಬಳಿಸಾರಿ ಅವಳನ್ನು ಎಚ್ಚರಗೊಳಿಸಲು ಪ್ರಯತ್ನಿಸುತ್ತಾನೆ.

ಈ ಸಂದರ್ಭದಲ್ಲಿ ಅಚೇತನಳಾಗಿ ಹಿಮದ ಮೇಲೆ ಒರಗಿದ ಊರ್ವಶಿಯ ವರ್ಣನೆಯನ್ನು ಶ್ರೀ ಅರವಿಂದರು ಬಹು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ರಥದಿಂದಿಳಿದ ನೃಪನು, ನೇರ ಊರ್ವಶಿಯಲ್ಲಿದ್ದೆಡೆಗೆ ಸಾಗಿ ಅವಳ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಉಪಚರಿಸುತ್ತಾನೆ. ಇಲ್ಲಿ ಊರ್ವಶಿಯು ಮರಣಹೊಂದಿಲ್ಲ. ಬದಲಿಗೆ ಕೇವಲ ಚೇತನಾರಹಿತಳಾಗಿ ಒರಗಿದ್ದಾಳೆ ಎಂಬುದನ್ನು ತೋರಿಸಲು ಉಬ್ಬರವಿಡುತಿರುವ ಅವಳ ವಕ್ಷಸ್ಥಲವನ್ನು ತೋರಿಸಲಾಗುತ್ತದೆ. ಕ್ರಮೇಣ ಕಣ್ತೆರೆದ ಊರ್ವಶಿಯು ಎದುರಿಗಿದ್ದ ಸುಂದರಾಂಗನನ್ನು ಕಂಡು ಚಕಿತಳಾಗುತ್ತಾಳೆ. ಅದಾವುದೋ ಭವದಲ್ಲಿ ಘಟಿಸಿದ್ದ ತಮ್ಮಿಬ್ಬರ ಅನುಬಂಧವನ್ನು ಕುರಿತು ಧೇನಿಸುತ್ತಾಳೆ. ಮುಂಬರಿದು ಅವನೊಡನೆ ಮಾತನಾಡಲೆಂದು ಮುಂದುವರೆಯುತ್ತಾಳೆ. ಆ ಸಮಯಕ್ಕೆ ಉಷೆಯು ಪೂರ್ಣರೂಪದ ಅವತರಣಿಕೆಯಾಗಿ ಬೆಳ್ಳ ಬೆಳಗು ಇಡೀ ವಲಯವನ್ನು ಕಾಂತಿಮಯವಾಗಿಸಿತ್ತು. ಈ ಹಂತದಲ್ಲಿ ಉಷೆಯ ಇನ್ನೊಂದು ರೀತಿಯ ವರ್ಣನೆಯು ತೋರಿಬಂದು ಈ ಹಿಂದೆ ನಿರೂಪಿತವಾದ ಉಷಾಗೀತೆಯ ಇನ್ನೊಂದು ಉದಾಹರಣೆಯಂತೆ ಕಂಡುಬರುತ್ತದೆ.

ಸ್ವರ್ಲೋಕದ ಸೀಮೆಯಿಂದ ಇಳಿಗಿಳಿದು ಬಂದ ಅಪ್ಸರ ಕನ್ಯೆಯರು ಕರಾಳ ಮೇಘರೂಪಿಯಾದ ಕೇಶಿದೈತ್ಯನು ತಮ್ಮೋರ್ವ ಸಖಿಯನ್ನು ಅಪಹರಿಸಿಕೊಂಡು ಹೋದುದನು ಕಂಡು ದಿಗ್ಭ್ರಾಂತರಾಗಿ ನಿಂತಿದ್ದರು. ಆದರೆ, ಕ್ಷಾತ್ರ ಸಂಭೂತನಾದ ಪುರೂರವನ ತೇಜಸ್ಸಿನೆದುರಲ್ಲಿ ನಿಲ್ಲಲಾಗದ ಕೃಷ್ಣಕಾರಕನು ಮರಲಿ ಕತ್ತಲ ಕಮರಿಯೊಳಗೋಡಿ ಕಾಣೆಯಾಗಿರಲು ಹರ್ಷಿಸಿದ ಅವರೆಲ್ಲರೂ ಈ ವಿಜಯಕ್ಕೆ

ಕಾರಣನಾದ ನೃಪನನ್ನು ಶ್ಲಾಘಿಸಲೆಂದು ಬಂದರು. ಆದರೆ, ಆ ಸಮಯಕ್ಕಾಗಲೇ ಊರ್ವಶಿ–ಪುರೂರವರ ಮಧ್ಯೆ ಪ್ರೇಮಾಂಕುರವಾಗಿದ್ದು, ನೃಪನು ಅವಳನ್ನು ತನ್ನ ಇಲಾ ಪಟ್ಟಣಕ್ಕೆ ಕರೆದೊಯ್ಯಲೆಂದು ಸಿದ್ಧನಾಗಿದ್ದನು. ಇದನ್ನು ಕಂಡು ಮೊದಲಿಗಳಾಗಿ ನುಡಿದ ಮೇನಕೆಯು, 'ತಮ್ಮ ಸಹೋದರಿಯನ್ನು ತಮ್ಮಿಂದ ದೂರಾಗಿಸಿ–ಬೇರಾಗಿಸಿ ಕರೆದೊಯ್ದು ರಾಜ ವೈಭೋಗವೆಂಬ ಶಿಲಾಭಿತ್ತಿಯೊಳಗೆ ಪ್ರೇಮವೆಂಬ ಬಂಧನವ ತೊಡಿಸಿ ಅವಳನ್ನು ಕೂಡಿಹಾಕದಿರುವಂತೆ' ಕೇಳಿಕೊಳ್ಳುತ್ತಾಳೆ. ನಂತರ ದ್ವಿತೀಯಳಾಗಿ ಧ್ವನಿಯೆತ್ತಿದ ತಿಲೋತ್ತಮೆಯು, 'ಮರ್ತ್ಯವು ಮನೋಮಯಕ್ಕಿಂತಲೂ ಮಿಗಿಲಾದ ಲೋಕವಾಗಿದ್ದು, ದೇವ ಜೀವನವು ನಿಂತ ನೀರಂತೆ ತಟಸ್ಥವಾಗಿರುತ್ತದೆ. ಅಲ್ಲಿ ಎಲ್ಲವೂ ಪೂರ್ಣರೂಪದಲ್ಲಿದ್ದು, ಅಲ್ಲಿ ಹಿರಿಮೆ–ಕಿರಿಮೆಗಳ ವ್ಯತ್ಯಯಗಳಿರುವದಿಲ್ಲ. ಮಾನಸಕ್ಕಿಂತಲೂ ಊರ್ಧ್ವತರವಾದ ಶ್ರೇಣಿಯು ಅಲ್ಲಿ ಕಂಡುಬರುವದಿಲ್ಲ. ಆದರೆ, ಇದಕ್ಕೆ ವ್ಯತಿರಿಕ್ತವೆಂಬಂತೆ, ಕಣ್ಣೊಡೆದ ತಕ್ಷಣ ಕಣ್ಮುಚ್ಚಿ ಮರೆಯಾಗುವ ಮರ್ತ್ಯ ಜೀವನದಲ್ಲಿ ಹಲವು ಪ್ರಾಕಾರಗಳಿವೆ. ಅಲ್ಲಿ ಮಡಿದ ಮಣ್ಣೊಳಗಿಂದ ಮೇಲೇರಿ ಮಹಾಕಾರಣಮಯವನ್ನೂ ತನ್ನದಾಗಿಸಿಕೊಳ್ಳಬಲ್ಲ ಅಸಮ ಸಾಹಸಿಗಳಿರುವರು. ತನ್ನದೆ ಅಂತರ್ಯಜ್ಞದಲ್ಲಿ ತನ್ನನ್ನು ತಾನೇ ಯಜ್ಞಪಶುವಾಗಿ ಹೋಮಿಸಿ ಯೋಗ ತಪವನಾಚರಿಸುವ ಸಾಧಕನು ನಿಲಿಂಪರಿಗಿಂತಲೂ ಉನ್ನತ ಪದವಿಯನ್ನು ಪಡೆಯುವ ವಿವಿಧ ಮುಕ್ತ ಮಾರ್ಗಗಳು ಅನ್ನಮಯದಿಂದ ಆನಂದಮಯದವರೆಗೆ ಉದ್ದಗಲಕ್ಕೂ ಚಾಚಿಕೊಂಡಿವೆ. ಅದನ್ನು ಹಿಡಿದು ಸಾಗುವ ಮರ್ತ್ಯನು ಮೃತ್ಯುವನ್ನು ಮೀರಿ ಮುಂದೋಡಬಲ್ಲನು. ಕೊನೆಗೆ ಮಾನವನು ಮಾಧವನಾಗಿ ಮೆರೆಯಬಲ್ಲನು. ಆದರೆ, ಇದನ್ನು ಸಾಧಿಸಲು ತ್ಯಾಗದ ಅವಶ್ಯಕತೆಯಿದೆ.' ಎನ್ನುತ್ತ ಕೇವಲ ಕಾಮವಶನಾಗಿ ಊರ್ವಶಿಯನ್ನು ತನ್ನವನಾಗಿಸಿಕೊಳ್ಳಬೇಕೆಂಬ ಉದ್ದೇಶದಲ್ಲಿದ್ದ ಪುರೂರವನಿಗೆ ಸಮ್ಯಕ್‌ಜ್ಞಾನವನ್ನು ತಿಳಿಸುತ್ತಾಳೆ. ಇಲ್ಲಿ ತಿಲೋತ್ತಮೆಯಾಡಿದ ನುಡಿಗಳೆಲ್ಲವೂ ಶ್ರೀ ಅರವಿಂದರ ತತ್ತ್ವಶಾಸ್ತ್ರದ ಪ್ರಮುಖ ಅಂಶಗಳೇ ಆಗಿರುವದನ್ನು ಗಮನಿಸಬಹುದು. ಶ್ರೀ ಅರವಿಂದರ ವಾಣಿಯಾದ, "ಜಡ ಭೌತಿಕವು ಸುಪ್ರಮಾನಸಕ್ಕೇರಬೇಕು. ಮತ್ತು ಆ ಸುಪ್ರಮಾನಸದ ಶಕ್ತಿಯು ಕೆಳಗಿಳಿದು ಬಂದು ಅನ್ನಮಯದಲ್ಲಿ ಸ್ಥಾಯಿಯಾಗಬೇಕು." ಎಂಬ ತತ್ತ್ವವನ್ನೇ ಇಲ್ಲಿ ತಿಲೋತ್ತಮೆಯು ನುಡಿಯುತ್ತಾಳೆ. ಕೊನೆಗೆ ತಿಲೋತ್ತಮೆಯ ತೀರ್ಥ ನುಡಿಗಳಿಗೆ ತಲೆಬಾಗಿ ತೇರನೇರಿ ನಡೆದ ಪುರೂರವನು ತನ್ನ ಪುರಾತನ ಪಟ್ಟಣವಾದ ಇಲಾ ನಗರಿಗೆ ಬಂದಿಳಿಯುತ್ತಾಳೆ. ಅತ್ತ ಊರ್ವಶಿಯೂ ಸಹ ಒಲ್ಲದ ಮನಸ್ಸಿನಿಂದ ಸ್ವರ್ಲೋಕದೆಡೆಗೆ ಪಯಣಿಸುತ್ತಾಳೆ.

(ಸಶೇಷ)

# ಯುದ್ಧದ ಗೀತೆಗಳು

## ಯುದ್ಧದುದ್ಘೋಷ

ಯುದ್ಧದುದ್ಘೋಷ ಮೊಳಗಿಸಿದ ಕೃಷ್ಣ ಊದಿ ಪಾಂಚಜನ್ಯ
ಅದರಂತರಂಗದಲ್ಲಿತ್ತು ಶಾಂತಿ–ದೃಷ್ಟಿ ಸೃಷ್ಟಿ ಮಾನ್ಯ
ಸೋಬಾನ ಹಾಡಿ ಟಾಲಸ್ಟಾಯ ಸಹ ವೇಷಕಟ್ಟಿಕೊಂಡು
ಆಟವಾಡಿದನು ಅವನೀಗ ತನ್ನ ಪಾತ್ರ ತುಂಬಿಕೊಂಡು

ವಿಸ್ಫೋಟದಲ್ಲಿ ನಮ್ಮ ಕರ್ಣಗಳ ಪಟಲ ಹರಿದು ಕಿವುಡು
ಶಬ್ದ ಸಂಬಂಧ ಭಾವದನುಬಂಧ ಸಿಡಿದು ಚೂರುಗೊಂಡು
ಗರಬಡಿದ ಹಾಂಗ ತಮ್ಮೊಳಗ ತಾವ ದುರುಗುಟ್ಟಿ ನೋಡಿಕೊಂಡು
ಅಶುಭ ಸೂತಕದ ಮೌನಗರ್ಭದಲಿ ಮೊಟ್ಟೆಯೊಕ್ಕಲಿನ ಹುಳುವು
ನಮ್ಮ ಜೀವನದ ಸೂಕ್ಷ್ಮಪ್ರಾಣಗಳ ಅದು ನುಂಗಿ ನೊಣೆದು ಕಾವು

ಯುದ್ಧವೆನ್ನುವದು ಗಾಳಿಗಮನದಲಿ ಯಾವಾಗ ತೇಲಲಿಹುದೋ
ತುಟಿತುದಿಯ ಮೇಲೆ ಪಿಟಿಪಿಟಿಯ ಶಾಂತಿಮಂತ್ರ ನೆಲೆಸುತಿಹುದೋ
ಇದು ತುಂಡು–ತುಣುಕುಗೊಂಡಿರುವ ಶುಭದ ಅದೃಷ್ಟದಂತೆ ಪಾತ್ರ
ಮನುಜತೆಯು ಸಹಿತ ಅಲ್ಲೊಂದು ಚೂರು ಟಾಲಸ್ಟಾಯ ನೆನಪು ಮಾತ್ರ

ಅವನನೆಂದಿಗೂ ಸಹಿತ ಮರೆಯದಿರುವ ಅಂಶವಿದು ತಾನು
ಆ ಒಡಕಿನಲ್ಲೂ ದಾರಿಗಳು ಉಂಟು, ಮರುಭೇಟಿಗಾಗಿ ಕೂಡು–ದಾರಿ
ಅದರ ಆ ಸಂಧಿ–ಅದು ಟಾಲಸ್ಟಾಯ್ನ ಹೆಸರ ನಿಂತಿಹುದು ದಾರಿಗಂಬ ಚಿಹ್ನೆ
ಮಾನವನ ಸರ್ವ ವಿಹ್ವಲದ ಮಧ್ಯೆ ಇದು ಸೂತ್ರ–ಬಂಧವಾಗಿ

ಪಾಪ ಪಾಪ ಇದು ಎಂಥ ಗತಿಯು ಟಾಲಸ್ಟಾಯ್ ಗೂ ಕೂಡಾ
ರಣರಕ್ತಕಾಗಿ ಎದ್ದಿರುವ ತೆರೆಗಳನು ಅವನೀಗ ತಡೆಯಲಾರ
ಯುದ್ಧದಬ್ಬರದ ತೆರೆಗಳುಬ್ಬರವ ಅವ ಸಹಿತ ತಡೆಯಲಾರ

ರಕ್ತ–ರಂಜಿತದ ಯಾವ ಸಾಗರವೂ ಸಂಗಮಕೆ ಸಿಗದು ಎಂದೂ
ಹೆಬ್ಬಂಡೆಯಂತೆ ತಾ ಘಟ್ಟಿ ಘಟ್ಟಿ ಹೆಸರೀಗ ಗರಿಮೆಯಲ್ಲಿ
ಮತ್ತಿದುವು ಮಿಲನದಲ್ಲಿ.

**ಕನ್ನಡ: ಪುಟ್ಟು ಕುಲಕರ್ಣಿ**
**ಮೂಲ ಇಂಗ್ಲೀಷ: ಡಾ॥ ದ.ರಾ. ಬೇಂದ್ರೆ**

## ಪೂತ್ಕಾರದೊಡನೆ ತಾನುಗಮಗೊಂಡು ಭುಸುಗುಡುತ ಬಂದ ಸರ್ಪ

ತಮದ–ತಪ್ತತೆಯ ಸುಪ್ತ–ಸಾಗರದಿ ಸಂಕಟದ ವಿಕಟ ಕಲಲ
ಮರ್ಮಕಾಘಾತ ಮಾರ್ಮಿಕದ ಘೋರ ಮರ್ಮರದ ಉದಿತ ಲೀಲ,
ಪೂತ್ಕಾರದೊಡನೆ ತಾನುಗಮಗೊಂಡು ಭುಸುಗುಡುತ ಬಂದ ಸರ್ಪ
ತಲೆವಾಗಿಲಲ್ಲಿ ಆಗಮನದಲ್ಲಿ ದುಮುದುಮಿಸಿ ಚಿರದ ದರ್ಪ ॥1॥

ಪ್ರಾಣ ಘಾತಕದ ಹೆಡೆ ಎತ್ತಿ ರಕ್ಷೆ–ಕಕ್ಷೆಯನು ಕೊಡುವ ಹೂಟ
ಅಕ್ಕಸದ ದೈತ್ಯ ಕುಂಡಲಿಯ–ಕುಂಡಗಳಲೀಗ ತೋರಿ ಆಟ,
ಘನಘೋರ ತಮದಿ ಆ ರಕ್ತದಾಹ ದಹದಹಿತ ತುಂಬಿ ಮಾಯೆ
ಗುರುಗುಟ್ಟಿಕೊಂಡು ಆರ್ಭಟಿಸಿತೀಗ ಹಿಗ್ಗಲಿಸಿ ದವಡೆ–ಬಾಯಿ ॥2॥

ಮತ್ತಿದೊ ಮತ್ತ ದಾನವರು ಜೊತೆಗೆ ಆ ಭೂತ–ಪ್ರೇತ ದಂಡು
ಕುತ್ಸಿತದ ತುಂಬ ಬೇತಾಳಗೂಡಿ ಸಿಂಡರಿಸಿಕೊಂಡು ಬಂದು,
ಜ್ವಾಲೆ ಅಕ್ಷಿಯಲಿ ಕ್ರೂರ ಸಾಕ್ಷಿಯಲಿ ಅಪ್ಪಳಿಸಲೆಂದು ಇಲ್ಲಿ
ವಿಷ ಕಾರಲೆಂದು ಹಸಿ–ಹಸಿರು ದಂಷ್ಟ್ರ ಕೆಂಪಡರಿ ಕಣ್ಣಿನಲ್ಲಿ ॥3॥

ಕ್ರೂರ ಕಾನನದ ಪಶು–ಪಾಶವೀಯ ಗರ್ಜನೆಯ ಕ್ರೋಧದಲ್ಲಿ
ರುಧಿರದಲಿ ಘೋರ ಕಂಪನವ ತಂದು ಉಬ್ಬರದ ಬೊಬ್ಬೆಯಲ್ಲಿ
ಕಣಕಣದ ತುಂಬ ದಾರುಣದ ಭೀತಿ ಭರತವನು ಹೆಚ್ಚಿಸುತ್ತ
ಬಡಬಡಿಸುತಿತ್ತು ಗರಬಡಿವ ಕ್ರೂರ ಸುಳಿಸುಳಿವ ಜಿಹ್ವೆ–ಚಿತ್ತ. ॥4॥

**– ಪುಟ್ಟು ಕುಲಕರ್ಣಿ**

**(ದಳ 6 ರೇಣು 3 ಪು 489)**

## ಅಅ

ಓ! ಇವನು ವಿಶ್ವದಲಿ ಘೋರ –ಕ್ರೂರ ಮಿಥ್ಯೆಯನು ಹೊತ್ತು ಬಂದು
ಇವನ ದೃಷ್ಟಿಗಿದೊ ಕರ್ಕಶದ ಕಪ್ಪು–ಕವಚವಿದೆ ಸತತವಿಂದು,
ಕುಟಿಲ ತಾರ್ಕಿಕವ ಕಣ್ಗೆರಿಸಿಕೊಂಡು ವಕ್ಕರಿಸಿ ಹಾರಿ ಬಂದು
ಅವಲೋಕದಲ್ಲಿ ಭವ–ಜೀವಕೆಲ್ಲ ಭಯ–ಭರತ ತುಂಬಿ ನಿಂದು,

ತನ್ನ ವಿಭ್ರಮೆಯ ಭ್ರಮಿತ ಚಿಂತನೆಯ ಹೊದಿಕೆಯಲಿ ತುಂಬಿ ಸರ್ವ
ವಾಸ್ತವವನಿಂದು ಅಡಗಿಸುತಲಿವನು ಹೇರುತ್ತ ತನ್ನ ಪರ್ವ

ವೈಶ್ವಿಕದ ಸತತ ವಿಕಸನದ ಮುಖವ ಕತ್ತರಿಸಿ ಅದುಮಿ ಗಿಡಿದು
ನಿರ್ದಯದ ಕ್ರೂರ ನಖಗಳಲಿ ಚುಚ್ಚಿ, ವಿಷಯವನು ಮುರಿದು ಹಿಡಿದು

ಮರಣ–ತಾಂಡವದ ಪದಾಘಾತಕ್ಕೆ ನಶ್ವರದ ರೆಕ್ಕೆ–ಪರದೆ
ಶಾಶ್ವತಕೆ ಈಗ ವಿಶ್ವಾಸಘಾತ, ಅಬ್ಬರದ ಕೇಕೆ ಮುಂದೆ,
ಅಜ್ಞಾನ–ಘನದ ಮನದೆಳೆಯ ನೇದು ಘೋರಾಂಧಕಾರ ವಸನ
ಕುಟಿಲ ನೀತಿಯಲಿ ಜಟಿಲ ಲೇಖದಲಿ ಪುಟಗೊಳಿಸಿ ನಿತ್ಯ ಪತನ,

ಭೂತಭಾವದಲಿ ಹೂತ ಚಿಂತನವ ಖತಿಗೊಳಿಸೆ ರೆಕ್ಕೆ–ಬೀಸಿ
ದಾಸ್ಯ ಭಾವದಲಿ ದೀನಗೊಂಡಿರುವ ಸಂವೇದ ಮನವು ಘಾಸಿ,
ಹುಸಿ ಸಾಕ್ಷ್ಯಕಾಗಿ ನುಸುನುಸುಳಿ ಬಂದು ಆವರಿಸಿ ಬಾನ ತುಂಬ
ತಮವು ಸಾಮ್ರಾಜ್ಯದಧಿಪತ್ಯಕಾಗಿ ಹಿಂಡುತಿದೆ ಜೀವ–ಬಿಂಬ.

**– ಪುಟ್ಟು ಕುಲಕರ್ಣಿ**
**(ಸಾವಿತ್ರಿ; ದಳ 10 ರೇಣು 3 ಪುಟ 621)**

---

## ಚೇತನದ ಭಾಷಾ ಸಂರಚನೆ ಮತ್ತು ವಿಕಾಸದ ಹೆಜ್ಜೆ

**– ಅನು: ಪುಟ್ಟು ಕುಲಕರ್ಣಿ**

ಕಾಲ ಮತ್ತು ಚೈತನ್ಯಗಳು ರೂಪಧಾರಣೆಯಲ್ಲಿಯೇ ಅನಂತತೆಯ ಶೋಧದ ಅನುಭವವನ್ನು ಪಡೆಯಲು ಚಲಿಸುತ್ತವೆ. ಜೀವನದ ಪರಿವರ್ತನೆಯ ಯುಗಗಳ ರೆಕ್ಕೆಗಳ ಮೂಲಕವಾಗಿಯೇ ಪ್ರಕಾಶವನ್ನೂ ಗಳಿಸಿಕೊಳ್ಳುತ್ತಾ, ಸದಾ ಮಿನುಗುತ್ತಿರುವ ತಾರಾಗಣಗಳ ಹಾಗೆ ಕರ್ತವ್ಯ ಪ್ರಜ್ಞೆಯಲ್ಲಿ ಇರುತ್ತವೆ. ಈ ಅವಿನಾಶಿಯಾದ ಅವಕಾಶವು ಸದಾ ಘನ ಪ್ರಶಾಂತತೆಯಲ್ಲಿ ಸ್ಪಂದಿಸುತ್ತಿದ್ದರೂ ಸಹಿತ, ಅದರ ಮಿಡಿತಕ್ಕೆ ಅನುಸ್ಪಂದಗೊಳ್ಳಲು ಮಾನವನ ಆತ್ಮವು ತನ್ನನ್ನು ತಾನೇ ಸಿದ್ಧಗೊಳಿಸಿಕೊಂಡಲ್ಲಿ, ಆಗ ರೂಪಧಾರಣೆಯ ಹಂತದಲ್ಲೂ ಸಹಿತ, ಋತದ ವ್ಯಾಪ್ತತೆಯನ್ನು ಅನುಭಾವಿಸಲು ಸಾಧ್ಯವಾಗುತ್ತದೆ. ಈ ಅನುಭಾವವನ್ನು ಪಡೆದುಕೊಳ್ಳಲು ಸಾಗುತ್ತಿರುವ ಅಲೆಗಳೂ ಸಹಿತ ಅಪಾರ ಪ್ರಮಾಣದಲ್ಲಿಯೇ ಇವೆ. ಅವುಗಳ ಅಭೀಪ್ಸೆಯೂ ಸಹಿತ ಹೃದಯಾಂತರಾಳದಿಂದಲೇ ನಿಗದಿಗೊಂಡಿದ್ದ ಕಾರಣದಿಂದಾಗಿ ಕೆಲವೇ ಕೆಲವು ಅಲೆಗಳು ಮಾತ್ರ ಈ ಅಪರಿಮಿತ ಆಯಾಮವನ್ನು ದರ್ಶಿಸಲು ಶಕ್ತವಾಗುತ್ತವೆ.

ನಾದದಿಂದ ಜನಿತಗೊಂಡ ಧ್ವನಿಯು ಶಬ್ದದ ರೂಪದಲ್ಲಿ ಬದುಕನ್ನು ಸಂಕೇತಿಸುತ್ತಿರುವ ಪರಿಕಲ್ಪನೆ ಬಂದಾಗಿನಿಂದಲೂ, ಮಾನವನ ಶೋಧನಾ ಸಾಮರ್ಥ್ಯಕ್ಕೊಂದು ಸವಾಲಾಗಿಯೇ ಇರುವದು "ಈ ಆತ್ಮದ ಚಿಂತನ". ನಾಲ್ಕು ಕಾಲುಗಳನ್ನು ಊರಿ ನಡೆಯುವ ಪ್ರಾಣಿ ಪ್ರಪಂಚದ ಹಂತದಲ್ಲಿದ್ದಾಗ ವಿಕಸನದ ಪ್ರಾರಂಭದ ಹಂತದಲ್ಲಿದ್ದ ಮೆದುಳು ಸಹಿತ, ತನ್ನ ಸೀಮಿತ ಗಾತ್ರದಲ್ಲಿಯೇ ಇತ್ತು. ಆದರೆ, ಯಾವಾಗ ಎರಡು ಕಾಲ ಮೇಲೆ ನಡೆಯಲು ಪ್ರಾರಂಭವಾಯಿತೋ, ಅಂದಿನಿಂದ ವಿಕಾಸನದ ಅಲೆಯನ್ನೇರಿದ ಮೆದುಳೂ ಸಹಿತ ವಿಸ್ತಾರವನ್ನು ಹೆಚ್ಚಿಸಿಕೊಂಡು, ಚಿಂತನದ ಆಯಾಮಗಳನ್ನು ಅಭಿವ್ಯಕ್ತಗೊಳಿಸತೊಡಗಿತು. ಇದು ಕೇವಲ ಭೌತಿಕ ವಿಕಾಸದ ದಾಖಲಾತಿಯಲ್ಲ. ಸೃಷ್ಟಿಯ ಉಗಮಕ್ಕೆ ಹಾಗೂ ವಿಕಾಸಕ್ಕೆ ಕಾರಣವಾಗಿರುವ ಆ 'ರಹಸ್ಯದ' ಬಗೆಗೆ, ಅಲ್ಲಿರುವ ಪ್ರಕೃತಿಯ ನಿಸರ್ಗ ಸಹಜವಾದ ಸಂಕೀರ್ಣ ಸಂಯೋಜನಾ ಜೋಡಣೆಗಳ ಕುರಿತು ಚಿಂತನಗಳೂ ಪ್ರಾರಂಭವಾದವು.

ಈ ಸೃಷ್ಟಿಯ ಗೂಢ ಗಮ್ಯತೆಯನ್ನು ನಿರಾಕಾರ ಸ್ವರೂಪದ ಆತ್ಮದ ಮೂಲಕವೇ ಸಾಕ್ಷಾತ್ಕರಿಸಿಕೊಳ್ಳಬೇಕು ಎಂದು ಕಂಡುಕೊಂಡ ಚೇತನಕ್ಕೆ ಆ ವಿಶ್ವ ಚೈತನ್ಯವೂ 'ಮಾನವನ ಹೃದಯದಲ್ಲಿ ಅಡಗಿರುವ ಆ ಸೂಕ್ಷ್ಮಾತಿಸೂಕ್ಷ್ಮವಾಗಿರುವ ಆತ್ಮ'ದ ಮೂಲಕವೇ ಎಂದು ಹಲವು ಜಾಗ್ರತ ಚೇತನಗಳೂ ಪಥವನ್ನು ನಿರ್ಮಿಸಿವೆ. ಆ ಪಥದ ಗಹನತೆ, ಅದರ ಗಮ್ಯಾತಿಗಮ್ಯದ ಅಂತರಾಳ, ಅಲ್ಲಿ ಲಭ್ಯವಾಗುವ ಅನುಭೂತಿ, ವಿಶ್ವ ಸತ್ಯದ ಸಾಕ್ಷಾತ್ಕಾರ ಮತ್ತು ಇವೆಲ್ಲಕ್ಕೂ ಆಧಾರಭೂತವಾಗಿರುವ, ಆ ಊರ್ಧ್ವಾತಿ ಊರ್ಧ್ವದಲ್ಲಿರುವ ಆ 'ಪರಮೋಚ್ಚ ಚೈತನ್ಯ'ದ ಬಗೆಗೆ ಸಂಪರ್ಕ ಒದಗಿಸುವ ಏಕೈಕ ಸಾಧನವೆಂದರೆ 'ನಮ್ಮದೇ ಆತ್ಮ'.

ಶ್ರೀ ಅರವಿಂದರೂ ಈ ಚೈತ್ಯ-ಪುರುಷ ಹಾಗೂ ಮಾನವನ ಅನುಭಾವ ಸಂಬಂಧದ ಜೋಡಣೆಯಾಗಿರುವ ಚೈತನ್ಯವನ್ನು ತಮ್ಮ ಮೇರು ಗ್ರಂಥವಾಗಿರುವ 'ಸಾವಿತ್ರಿ'ಯಲ್ಲಿ ಅಮರಗೊಳಿಸಿದ್ದಾರೆ. ಅಲ್ಲಿರುವ ಸೂತ್ರ ವಾಕ್ಯಗಳಂತೆ 'ಸಾವಿತ್ರಿ'ಯಲ್ಲಿ, 'ಚಿದ್ಬ್ರಹ್ಮನವನು ನಮ್ಮಲ್ಲಿ ನಿತ್ಯ ಪ್ರಚ್ಛನ್ನ ವಾಸ ಮಾಡಿ, ತನ್ನದೇ ಶಕ್ತಿ ಜೊತೆಯಲ್ಲಿ ಸತತ ಕಣ್ಣು ಮುಚ್ಚಾಲೆಯಾಡಿ, ಪ್ರಕೃತಿಯಾ ದ್ರವ್ಯ ಕಾರಕಗಳಲ್ಲಿ ಬಲು ಮಂದ್ರ-ಮಂದ್ರದಲ್ಲಿ, ಚಲಿಸುತ್ತ ಬರುವ ಗಾಢ ಗೂಢದಲಿ ಆ ಗುಹ್ಯ ದೇವನಿಲ್ಲಿ' ಎಂದು ಅವನ ಆಗಮನದ – ಅಂದರೆ ಆತ್ಮಸಾಕ್ಷಾತ್ಕಾರದ ಮಾರ್ಗ ತೋರಿದ್ದಾರೆ.

ಆಧುನಿಕ ಕಾಲದಲ್ಲೂ ಸಹಿತ ಈ ರೀತಿಯಾಗಿ ಚೈತ್ಯ ಪುರುಷನನ್ನು ಸಾಕ್ಷಾತ್ಕರಿಸಿ-ಕೊಂಡ ಅತ್ಯಪೂರ್ವದ ಘಟನೆಯನ್ನು ಪ್ರತ್ಯಕ್ಷ ಕಂಡವರು, ಅನುಭಾವಿಸಿದವರು ಹಾಗೂ ಅದರ ಎಲ್ಲ ಆಯಾಮಗಳನ್ನೂ ಆತ್ಮಸಂಗತವಾಗಿಸಿಕೊಂಡ ಶ್ರೀ ಅರವಿಂದರು. ಶ್ರೀಮಾತೆಯವರು ಈ ಅನುಭಾವದ ಕೃಪೆಯಲ್ಲಿ ಹರಸಲ್ಪಟ್ಟವರು, ಇತರರೂ ಸಹಿತ ಈ ವಿಷಯದ ಕುರಿತು ತಮ್ಮ ತಮ್ಮ ಸಾಧನೆಯನ್ನು ಪ್ರಗತಿಗೊಳಿಸಿಕೊಂಡಿದ್ದಾರೆ. ಪ್ರಗತಿಗೊಳಿಸಿಕೊಳ್ಳುತ್ತಿದ್ದಾರೆ.



ಫೋಟೋ: ಇಮೇಜಿಂಗ್ ಸಾವಿತ್ರಿ

“ತನ್ನ ವಿಭ್ರಮೆಯ ಭ್ರಮಿತ ಚಿಂತನೆಯ ಹೊದಿಕೆಯಲಿ ತುಂಬಿ ಸರ್ವ
ವಾಸ್ತವವನಿಂದು ಅಡಗಿಸುತಲಿವನು ಹೇರುತ್ತ ತನ್ನ ಪರ್ವ”

(ಶ್ರೀ ಅರವಿಂದರ ‘ಸಾವಿತ್ರಿ’)

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

“ನಮ್ಮ ಜೀವನವು ಆ ದಿವ್ಯ ಪರಮ ಪಾರಮ್ಯಕಾಗಿ ಯಜ್ಞ”

(ಶ್ರೀ ಅರವಿಂದರ ‘ಸಾವಿತ್ರಿ’)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.